ಶ್ರೀಮದ್ವಿಶಿಷ್ಟಾದ್ವೈತ ಸಿದ್ಧಾನ್ತ ರತ್ನಮಾಲಾ

ಶ್ರೀ ಪರಾಶರ ಭಟ್ಟಾರ್ಯ ವಿರಚಿತ

ಅಷ್ಟಶ್ಲೋಕಿಯು

ಶ್ರೀಮದ್ರಹಸ್ಯತ್ರಯಗಳ ಸಙ್ಗ್ರಹಾರ್ಥಗಳು

ವಿದ್ಯಾಭ್ಯಾಸದ ಇಲಾಖಾ ರಿಟೈರ್ಡು ಸರ್ಕಲ್ ಇನ್ಸ್ಪೆಕ್ಟರು

ಸಿ. ಯಂ. ವಿಜಯರಾಘವಾಚಾರ್ಯರಿಂದ

ರಚಿಸಲ್ಪಟ್ಟ

ಆಚಾರ್ಯಹೃದಯಾನ್ವೇಷಿಣೀ

ಎಂಬ ಕನ್ನಡ ಪ್ರತಿಪದಾರ್ಥ ತಾತ್ಪರ್ಯಗಳು.

೧೯೫೫

ಕ್ರಯ ೧೦ ಆಣೆಗಳು

ಶ್ರಿಯೈ ನಮಃ
ಶ್ರೀನಿವಾಸಾಯ ನಮಃ
ಶ್ರೀಮತೇ ರಾಮಾನುಜಾಯ ನಮಃ
ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ



ಶ್ರೀ ಪರಾಶರ ಭಟ್ಟಾರ್ಯ ವಿರಚಿತಾಷ್ಟಶ್ಲೋಕೀ

ಶ್ರೀ ಪರಾಶರ ಭಟ್ಟಾರ್ಯ ಶ್ರೀರಂಗೇಶ ಪುರೋಹಿತಃ |
ಶ್ರೀವತ್ಸಾಂಕ ಸುತ ಶ್ರೀಮಾನ್ ಶ್ರೇಯಸೇಮೇಽಸ್ತು ಭೂಯಸೇ ||

ಮೂ. ಅಕಾರಾರ್ಥೋ ವಿಷ್ಣುರ್ಜಗದುದಯ ರಕ್ಷಾ ಪ್ರಳಯಕೃ |
ನ್ಮಕಾರಾರ್ಥೋ ಜೀವಸ್ತದುಪಕರಣಂ ವೈಷ್ಣವ ಮಿದಮ್ ||

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯನಮಃ

ಅವತಾರಿಕೆ:— ಈ ಅಷ್ಟಶ್ಲೋಕಿಯ ಗ್ರಂಥಕರ್ತರು ಶ್ರೀ ಪರಾಶರಭಟ್ಟರು. ಇವರು ಶ್ರೀ ಯತಿವರ್ಯರ ಪ್ರಿಯಶಿಷ್ಯರಾದ ಶ್ರೀವತ್ಸಾಂಕರೆಂದೂ ಶ್ರೀ ಕೂರೇಶ ರೆಂಬ ಅಪರ ನಾಮಧೇಯವನ್ನೂ ಧರಿಸಿದ ಮಹಾಜ್ಞಾನಿಗಳ ಪುತ್ರರು. ಶ್ರೀ ಯತಿವರ್ಯರು ಲಕ್ಷ್ಮಿಯಲ್ಲಿ ಅನುಷ್ಠಿಸಿದ ಶರಣಾಗತಿಯ ಫಲವಾಗಿ ಅವತರಿಸಿ ದುದರಿಂದ ಇವರ ಜ್ಞಾನದೀಪ್ತಿಯು ಅತ್ಯದ್ಭುತವಾದುದು. ಶ್ರೀ ಯತಿವರ್ಯರು ಶರಣಾಗತಿಯನ್ನು ಅನುಷ್ಠಿಸಲು ಕಾರಣವೇನೆಂದರೆ—ಶ್ರೀ ಯಾಮುನ ಮುನಿಗಳು ಅಸದೃಶ ಜ್ಞಾನವುಳ್ಳವರೆಂದು ಕೇಳಿ ತಿಳಿದುದರಿಂದ ಅವರನ್ನು ಆಶ್ರಯಿಸಿ ಉಪದೇಶ ವನ್ನು ಹೊಂದಬೇಕೆಂದು ಶ್ರೀ ಯತಿವರ್ಯರು ಶ್ರೀರಂಗಕ್ಕೆ ತೆರಳಿದರು. ಶ್ರೀರಂಗ ವನ್ನು ಸೇರುವುದಕ್ಕೆ ಸ್ವಲ್ಪ ಮುಂಚಿತವಾಗಿ ಯಾಮುನ ಮುನಿಗಳಿಗೆ ದೇಹ ವಿಯೋಗ ಉಂಟಾಗಿ, ಅನೇಕ ಶ್ರೀ ವೈಷ್ಣವ ಮಹನೀಯರೆಲ್ಲಾ ಇವರ ಅಪಾರ ಕೈಂಕರ್ಯಕ್ಕಾಗಿ ಕಾವೇರೀ ನದಿಯ ಮರಳಿನಲ್ಲಿ ಸೇರಿರುವಾಗ ಶ್ರೀ ಯಾಮುನ ಮುನಿಗಳ ದೇಹವನ್ನು ಆನೂಲಾಗ್ರವಾಗಿ ಈಕ್ಷಿಸಿ, ಹಸ್ತದ ಮೂರು ಬೆರಳುಗಳು ಮಡಿಸಿರುವದನ್ನೂ ಕಣ್ಣಿನಲ್ಲಿ ನೀರು ತುಂಬಿಕೊಂಡಿರುವದನ್ನೂ ಕಂಡು ಕಾರಣ ವೇನೆಂದು ಶ್ರೀ ಎಂಬರುಮಾನಾರ್ರು ಬೆಸಗೊಳ್ಳಲು ಆಗ ಅಲ್ಲಿದ್ದ ಮುಖ್ಯರಾದ ಮಹನೀಯರು ಶ್ರೀ ಯಾಮುನ ಮುನಿಗಳು ತಾವು ಮಾಡಲಿಲ್ಲವೇ ಎಂಬ ಮೂರು ಕೊರತೆಗಳಿದ್ದವು, ಅವು ಯಾವುವೆಂದರೆ:—

ಉಕಾರೋಽನನ್ಯಾರ್ಹಂ ನಿಯಮಯತಿ ಸಂಬಂಧ ಮನಯೋಃ
ಪ್ರ್ರಯೀಸಾರಸ್ತ್ರ್ಯಾತ್ಮಾಪ್ರಣವ ಇಮ ಮರ್ಥಂ ಸಮದಿಶತ್ ॥೧॥

೧. ವೇದಾಂತಸಾರವಾದ ವ್ಯಾಸಸೂತ್ರಗಳಿಗೆ ಯಥಾರ್ಥವಾದ ಭಾಷ್ಯವನ್ನು ರಚಿಸೋಣವು ೨. ಆ ಸಿದ್ಧಾಂತಗಳಿಗೆ ಸರಿಯಾಗಿ ಸಮಂಜಸವಾದ ಅರ್ಥಗಳನ್ನು ಒಳಗೊಂಡು ತತ್ವತ್ರಯಗಳ ಮತ್ತು ತತ್ವ ಹಿತ ಪುರುಷಾರ್ಥಗಳ ಸ್ವರೂಪಾದಿಗಳನ್ನು ವಿಶದವಾಗಿ ಉಪಪಾದಿಸಿರುವ ನಮ್ಮಾಳ್ವಾರ್ರವರ ಪಾಶುರಗಳಿಗೆ ಸರಿಯಾದ ಭಾಷ್ಯವನ್ನು ಬರಿಯೋಣವು. ೩. **"ತತ್ವೇನಯಶ್ಚಿದಚಿದೀಶ್ವರ ತತ್ಸ್ವಭಾವ ಭೋಗಾಪವರ್ಗತದುಪಾಯಗತೀರುದಾರಃ ಸಂದರ್ಶಯನ್ನಿರಮಿಮೀತ ಪುರಾಣರತ್ನಂ"** ಎಂದು ತಾವೇ ಕೊಂಡಾಡಿರುವ ಶ್ರೀ ವಿಷ್ಣು ಪುರಾಣಕರ್ತ್ರಾವಾದ ಶ್ರೀ ಪರಾಶರರ ಹೆಸರನ್ನು ಒಬ್ಬ ಪ್ರಾಜ್ಞರಿಗೆ ಕೊಟ್ಟು ತನ್ಮೂಲಕ ತತ್ವತ್ರಯ ಸಿದ್ಧಾಂತವನ್ನು ಪ್ರಚುರಗೊಳಿಸುವದು. ಹೀಗೆ ಶ್ರೀ ವ್ಯಾಸಮಹರ್ಷಿಗಳೂ, ನಮ್ಮಾಳ್ವಾರ್ರವರೂ ಶ್ರೀ ಪರಾಶರ ಮಹರ್ಷಿಗಳೂ, ಐಕಕಂಠ್ಯದಿಂದ ವಿಶಿಷ್ಟಾದ್ವೈತ ಸಿದ್ಧಾಂತ ಸ್ಥಾಪಕರಾದುದರಿಂದ, ಇವರುಗಳ ಗ್ರಂಥಪ್ರಚಾರವನ್ನು ತಾವು ಮಾಡಲಿಲ್ಲವೇ ಎಂಬ ಕೊರತೆಯು ಯಾಮುನ ಮುನಿಗಳಿಗಿತ್ತು. ಇವು ಮೂರನ್ನು ತಾವು ಮಾಡುವದಾಗಿ ಅಲ್ಲೇ ಸಂಕಲ್ಪಿಸಿದುದರಿಂದ ಮಡಿಸಿದ ಬೆರಳುಗಳು ಸರಿಯಾದವು ಎಂದು ಹೇಳುತ್ತಾರೆ-ಅವುಗಳಲ್ಲಿ ಪ್ರಥಮ ಕೊರತೆಯನ್ನು ತಾವೇ ಕೂರತ್ತಾಳ್ವಾನ್, ನಡಾದೂರಾಳ್ವಾನ್, ಮುದಲಿಯಾಂಡಾನ್ ಎಂಬಾರ್ ಮೊದಲಾದ ಮಹಾಪ್ರಾಜ್ಞರಾದ ಶಿಷ್ಯರನ್ನು ಸಹಾಯಕ್ಕೆ ಕರೆದುಕೊಂಡು ವ್ಯಾಸಸೂತ್ರಗಳಿಗೆ ಅದ್ಭುತವಾದ ಭಾಷ್ಯವನ್ನು ಬರೆದಿರುತ್ತಾರೆ. ಆದುದರಿಂದ ಎಂಬೆರುಮಾನಾರ್ರವರಿಗೆ ಶ್ರೀ ಭಾಷ್ಯಕಾರರೆಂಬ ಅಪರ ನಾಮವು ಉಂಟು. ಎರಡನೆಯ ಕೊರತೆಯನ್ನು ತಿರುಮಲೈ ನಂಬಿಯ ಪುತ್ರರಾದ ತಿರುಕ್ಕುರುಹೈಪ್ಪಿರಾನ್ ಪಿಳ್ಳಾನ್ರವರು ತಮ್ಮನ್ನು ಬಂದು ಆಶ್ರಯಿಸಿದ ನಂತರ **ಆರಾಯಿರಪ್ಪಡಿ** ಎಂದು ನಮ್ಮಾಳ್ವಾರ್ ತಿರುವಾಯಿಮೊಳಿಗೆ ಭಾಷ್ಯವನ್ನು ಬರೆಸಿ ತೃಪ್ತಿಪಡಿಸಿದರು. ಮೂರನೆಯ ಕೊರತೆಯನ್ನು ನೆರವೇರಿಸುವದಕ್ಕಾಗಿ ಶ್ರೀ ರಂಗನಾಯಕಿಯಲ್ಲಿ ಶರಣಾಗತಿಯನ್ನು ಅನುಷ್ಠಿಸಿ ತಮ್ಮ ಶಿಷ್ಯರಾದ ಕೂರತ್ತಾಳ್ವಾನ್‌ರವರಿಗೆ ಜ್ಞಾನಾಗ್ರೇಸರರಾದ ಪುತ್ರರು ಜನಿಸುವ ಹಾಗೆ ಪ್ರಾರ್ಥಿಸಿ, ಹಾಗೆ ಅವತರಿಸಿದವರಿಗೆ ಶ್ರೀ ಪರಾಶರಭಟ್ಟರೆಂಬ ಹೆಸರಿಟ್ಟು ಶ್ರೀ ವಿಷ್ಣುಪುರಾಣದ ಪಾರಮ್ಯತೆಯನ್ನು ಕೊಂಡಾಡುವ ಹಾಗೆ ಮಾಡಿದರು. ಇವರು ರಚಿಸಿದ ಗ್ರಂಥಗಳು ಶ್ರೀ ಸಹಸ್ರನಾಮ ಭಾಷ್ಯವು, ಶ್ರೀ ಗುಣರತ್ನಕೋಶನೆಂಬ ಲಕ್ಷ್ಮೀತತ್ವವನ್ನು ನಿಪುಣತರವಾಗಿ ಶ್ರೀ ಪರಾಶರರಾಗಿ ವಿಷ್ಣುಪುರಾಣದಲ್ಲಿ ಉಪಪಾದಿಸಿರುವ ಹಾಗೇ ಕೊಂಡಾಡಿರುವ ಸ್ತೋತ್ರವು; ಮತ್ತು ಶ್ರೀರಙ್ಗಸ್ತವ ಮೊದಲಾದ ಪಂಚಸ್ತವಗಳು. ಈ ಅಷ್ಟಶ್ಲೋಕಿಯೂ ಅವರಿಂದ ವಿರಚಿತವಾದುದೇ.

ಇದರಲ್ಲಿರುವ ಎಂಟು ಶ್ಲೋಕಗಳಲ್ಲಿ ಮೊದಲಿನ ನಾಲ್ಕು ಶ್ಲೋಕಗಳಿಂದ ಮೂಲಮನ್ತ್ರಾರ್ಥಗಳನ್ನೂ ಅನಂತರ ಎರಡು ಶ್ಲೋಕಗಳಿಂದ ದ್ವಯಮನ್ತ್ರಾರ್ಥಗಳನ್ನೂ ಕೊನೆಯ ಎರಡು ಶ್ಲೋಕಗಳಿಂದ ಚರಮ ಶ್ಲೋಕಾರ್ಥಗಳನ್ನೂ ಉಪಪಾದಿಸಿರುತ್ತಾರೆ.

ಅರ್ಥವು :— ಅಕಾರಾರ್ಥಃ – ಪ್ರಣವವಾದ ಓಂ ಎಂಬ ಪದವು ಮೂರು ಅಕ್ಷರಗಳಾದ ಅ, ಉ, ಮ ಕಾರಗಳನ್ನುಳ್ಳದ್ದು; ಅದರಲ್ಲಿ ಅಕಾರದ ಅರ್ಥವು – ಎಂದರೆ ಅಕಾರದಿಂದ ಹೇಳಲ್ಪಡುವವನು, ವಿಷ್ಣುವು. ಆತನು ಎಂತವನೆಂದು ಹೇಳುತ್ತಿದೆ ಎಂದರೆ ? **ಜಗದುದಯ ರಕ್ಷಾಪ್ರಳಯಕೃತ್** – ಜಗತ್ತುಗಳ ಸೃಷ್ಟಿ ಮತ್ತು ರಕ್ಷಣ ಪ್ರಳಯಗಳನ್ನುಂಟು ಮಾಡುವನೆಂದು ಬೋಧಿಸುತ್ತದೆ. **ಮಕಾರಾರ್ಥೋ ಜೀವಃ** – ಮಕಾರದಿಂದ ಹೇಳಲ್ಪಡುವವನು ಜೀವಾತ್ಮನು. **ಇದಂ** – ಈ ಆತ್ಮವಸ್ತು ಜಾತವು, **ವೈಷ್ಣವಂ** – ವಿಷ್ಣುವಿನಿಂದ ಉಂಟಾದುದು; ಮತ್ತು **ತದುಪಕರಣಂ** – ಆ ಪ್ರಸಿದ್ಧನಾದ ಮಹಾ ವಿಷ್ಣುವಿನ ಸ್ವತ್ತಾಗಿ ಆತನಿಗೆ ಶೇಷಭೂತವಾದುದು. **ಉಕಾರಃ – ಏವ** ಎಂಬ ಅವಧಾರಣಾರ್ಥವುಳ್ಳದ್ದು, **ಅನನ್ಯಾರ್ಹಂ** – ಲಕ್ಷ್ಮೀಭಾಗವತರಲ್ಲದೆ ಭಗವಂತನಾದ ವಿಷ್ಣುವಿಗೆ ಮಾತ್ರವೇ ಇನ್ನು ಯಾರಿಗೂ ಶೇಷಭೂತನಾಗಿರಲು ಯೋಗ್ಯನಲ್ಲವಾಗಿ, **ನಿಯಮಯತಿ** – ನಿಯಮಿಸುತ್ತದೆ ಎಂದರೆ ಭಗವಂತನಲ್ಲದೆ ಇನ್ನು ಯಾರಿಗೂ ಈ ಜೀವಾತ್ಮನು ಶೇಷಭೂತನಲ್ಲವು ಎಂಬರ್ಥವು. ಯಾವಾಗ ವಿಷ್ಣುವಿಗೆ ಶೇಷಭೂತನೆಂದಾಯಿತೋ ಆಗ ಆತನ ಪತ್ನೀ ಮತ್ತು ಆತನಿಗೆ ಪ್ರಿಯರಾದ ಭಾಗವತರಾದ ವೈಷ್ಣವರಿಗೂ ಶೇಷಭೂತನು ಎಂಬರ್ಥವು. **ಅನಯೋಃ** – ಈ ಪರಮಾತ್ಮ ಜೀವಾತ್ಮರುಗಳಿಗೆ, ಈ ಉಕಾರವು, **ಸಂಬಂಧಂ** – ಶೇಷಿ ಶೇಷ ಸಂಬಂಧವನ್ನು, **ನಿಯಮಯತಿ** – ದೃಢೀಕರಿಸಿ ಹೇಳುತ್ತದೆ. **ತ್ರಯೀಸಾರಃ** – ಋಗ್ವೇದ, ಯಜುರ್ವೇದ, ಸಾಮವೇದಗಳಾದ ಮೂರಕ್ಕೂ **ತ್ರಯೀ** ಎಂದು ಹೆಸರು. ಇವುಗಳ ಸಾರಭೂತವಾದ **ತ್ರ್ಯಾತ್ಮಾ** – ಮೂರು ಅಕ್ಷರಗಳಾದ ಅಲ್ಲಿ ಅಕಾರ, ಉಕಾರ ಮಕಾರಗಳನ್ನೇ ಸ್ವರೂಪವಾಗಿವುಳ್ಳ, **ಪ್ರಣವಃ** – ಓಂಕಾರವು, **ಅರ್ಥಂ** – ಈ ಅಭಿಪ್ರಾಯವನ್ನು ಮಕಾರ ವಾಚ್ಯನಾದ ಜೀವಾತ್ಮನು ವಿಷ್ಣುವಿಗೇ ಶೇಷಭೂತನು; ಲಕ್ಷ್ಮೀಭಾಗವತರು ವಿನಾ ಇನ್ನ್ಯಾರಿಗೂ ಶೇಷಭೂತನಲ್ಲವು ಎಂಬ ಅರ್ಥವನ್ನು, **ಸಮುದಿಶತ್** – ಚನ್ನಾಗಿ ಪ್ರತಿಪಾದಿಸುತ್ತದೆ. ಈ ಶ್ಲೋಕದಿಂದ ಪ್ರಣವಾರ್ಥವು ಉಪದೇಶಿಸಲ್ಪಟ್ಟಿತು.

ಉಪಪಾದನೆಯು :— ಪ್ರಣವದ ಸಾರವತ್ತಾದ ಅರ್ಥವು ಇಷ್ಟೇ :— **ಮಕಾರ ವಾಚ್ಯಃ ಜೀವಃ ಅಯ್ಯೈವ** – ಮಕಾರ ವಾಚ್ಯನಾದ ಜೀವಾತ್ಮನು ಅಕಾರವಾಚ್ಯನಾದ ವಿಷ್ಣುವಿಗೇನೆ ಶೇಷಭೂತನು ಎಂಬುದು, **ಅವರಕ್ಷಣ ಗತಿ ಹಿಂಸಾದಿಷು** ಎಂಬುದರಿಂದ ಅವಧಾತುವಿನ ಉತ್ಪತ್ತಿ ಮೂಲಕ ಸರ್ವರಕ್ಷಕನಾದ ವಿಷ್ಣುವನ್ನು ಅಕಾರವು ಬೋಧಿಸುತ್ತದೆ. ಅಕಾರವು ಹೇಗೆ ವರ್ಣಗಳಿಗೆಲ್ಲಾ

ಆದಿಯೇ ಹಾಗೆಯೇ ವಿಷ್ಣುವು **"ಸಮಸ್ತ ಶಬ್ದ ಮೂಲತ್ವಾದಕಾರಸ್ಯ ಸ್ವಭಾವತಃ। ಸಮಸ್ತ ಶಬ್ದವಾಚ್ಯತ್ವಾ ದ್ಬ್ರಹ್ಮಣೋಽಪಿ ಸ್ವಭಾವತಃ। ವಾಚ್ಯ ವಾಚಕ ಸಂಬಂಧ ಸ್ತಯೋರರ್ಥಾ ತ್ಪ್ರತೀಯತೇ"** ಎಂಬುದು ಅನುಸಂಧೇಯವು. ಆದುದರಿಂದಲೇ **ಜಗದುದಯ ರಕ್ಷಾ ಪ್ರಳಯಕೃತ್** ಎಂಬಲ್ಲಿ ಮೇಲಿನ ಎರಡರ್ಥವು. ಯಾವಾಗ ಸೃಷ್ಟಿಗೆ ಕಾರಣನೋ ಆಗ ಲಯಕ್ಕೂ ಕಾರಣನು. ಶ್ರುತಿಯು ಹಾಗೆಯೇ ಬೋಧಿಸುತ್ತದೆ. **"ಯತೋವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ. ಯತ್ಪ್ರಯಂತ್ಯ ಭಿಸಂ ವಿಶಸ್ತಿ ತದ್ವಿಜಿಜ್ಞಾಸಸ್ವ ತದ್ಬ್ರಹ್ಮೇತಿ"** ಯಾವನ ದೆಸೆಯಿಂದ ಈ ಚಿದ ಚಿತ್ತುಗಳಿಂದ ಕೂಡಿದ ಭೂತಗಳು ಉತ್ಪನ್ನವಾಗುತ್ತವೋ, ಯಾವನಿಂದ ಹೀಗೆ ಸೃಷ್ಟಿ ಹೊಂದಿದುವು ಅವುಗಳಿಗೆ ತಾನು ಆತ್ಮನಾಗುವುದರಿಂದ ಸತ್ತೆಯನ್ನು ಹೊಂದಿ ಜೀವಿಸುತ್ತವೋ ಮತ್ತು ಜಗತ್ತಿನಲ್ಲಿರುತ್ತವೋ ಅಥವಾ ಮೋಕ್ಷವನ್ನು ಹೊಂದುತ್ತವೆಯೋ ಮತ್ತು ಯಾವನಲ್ಲಿ ಲಯವನ್ನು ಹೊಂದುತ್ತವೋ ಅದನ್ನು ನೀನು ಉಪದೇಶಮೂಲಕ ಸಾವಧಾನದಿಂದ ಗ್ರಹಿಸತಕ್ಕದ್ದು. ಅದೇ ಶಾಸ್ತ್ರದಲ್ಲಿ ಪರಬ್ರಹ್ಮವೆನಿಸುತ್ತದೆ. ಪರಬ್ರಹ್ಮವು **"ತತ್ಸೃಷ್ಟ್ವಾ ತ ದೇವಾನು ಪ್ರಾವಿಶತ್"** ಎಂಬಲ್ಲಿ ಹೇಳಿರುವ ಹಾಗೆ ಸೃಷ್ಟಿಸಿ ಅವುಗಳಿಗೆ ಆತ್ಮವಾಗಿ ವ್ಯಾಪಿಸುವುದರಿಂದ ಪರಬ್ರಹ್ಮವೇ ಆಕಾರ ವಾಚ್ಯನಾದ ವಿಷ್ಣುವು. ವಿಷ್ಣು ಶಬ್ದವು **ವಿಷ್ಲ್ ವ್ಯಾಪ್ತೌ** ಎಂಬ ಧಾತುವಿನಿಂದ ವ್ಯುತ್ಪನ್ನವಾಗಿರುವುದರಿಂದ ಸೃಷ್ಟಿಸಿದ ಜಗತ್ತನ್ನೆಲ್ಲಾ ವ್ಯಾಪಿಸುವ ಶಕ್ತಿಯುಳ್ಳವನನ್ನು ಬೋಧಿಸುತ್ತದೆ. **"ಅಂತ ರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣ ಸ್ಸ್ಥಿತಃ"** ಈ ಶ್ರುತ್ಯರ್ಥಗಳು ಮುನಿವರರಾದ, ಮಹಾ ಪ್ರಾಜ್ಞರಾದ ಪುಲಸ್ತ್ಯ, ವಸಿಷ್ಠವರ ಪ್ರಸಾದ ಲಬ್ಧಪರ ದೇವತಾ ಪಾರಮಾರ್ಥ್ಯ ಜ್ಞಾನವಾನ್ ಆದ, ಭಗವಾನ್ ಪರಾಶರರು ಅವರ ಅಂತೇವಾಸಿಯಾದ ಮೈತ್ರೇಯರಿಗೆ ಉಪದೇಶಿಸುತ್ತಾರೆ. ಈ ಚರಾಚರಗಳಿಂದ ಕೂಡಿದ ಜಗತ್ತು ಯಾರಿಂದ ಸೃಷ್ಟಿಯನ್ನು ಹೊಂದಿತು? ಯಾರಲ್ಲಿ ಹೋಗಿ ಸೇರಿ ಲಯವನ್ನು ಹೊಂದುತ್ತದೆ? ಇತ್ಯಾದಿ ಶಿಷ್ಯರ ಪ್ರಶ್ನೆಗೆ ಉತ್ತರವಾಗಿ **"ವಿಷ್ಣೋಃ ಸ್ಸಕಾಶಾ ದುದ್ಭೂತಂ ಜಗತ್ತತ್ರೈವ ಚ ಸ್ಥಿತಮ್। ಸ್ಥಿತಿ ಸಂಯಮಕರ್ತಾಸೌ ಜಗತೋಽಸ್ಯ ಜಗಚ್ಚಸಃ"** ಎಂದು ಉಪದೇಶಿಸಿರುತ್ತಾರೆ. (ವಿ. ಪು. ೧. ೧. ೩೧.) ನಾರಾಯಣ ಸೂಕ್ತದಲ್ಲಿ ನಾರಾಯಣನು ವಿಷ್ಣುವೇ ಎಂದು **ಓಂ ನಾರಾಯಣಾಯ ವಿದ್ಮಹೇ। ವಾಸುದೇವಾಯ ಧೀಮಹಿ। ತನ್ನೋ ವಿಷ್ಣುಃ ಪ್ರಚೋದಯಾತ್** ಎಂಬ ಮನ್ತ್ರದಲ್ಲಿ ಕಾಣಬಹುದು. ವಿಷ್ಣು, ನಾರಾಯಣ ವಾಸುದೇವ ಶಬ್ದಗಳು, ಮೂರು ವ್ಯಾಪಕ ಮನ್ತ್ರಗಳಲ್ಲಿರುವ ನಾಮಗಳು ಪರ್ಯಾಯ ಪದಗಳೆಂದು ಇಲ್ಲಿ ಹೇಳಲ್ಪಟ್ಟಿತು. ಅಮರಸಿಂಹನೂ **ವಿಷ್ಣು ರ್ನಾರಾಯಣಃ ಕೃಷ್ಣೋ** ಎಂದು ಪ್ರಯೋಗಿಸಿರುತ್ತಾನೆ. **"ಅ ಇತಿ ಬ್ರಹ್ಮ"** ಎಂಬುದರಿಂದ ಅಕಾರವು ಜಗತ್ಕಾ

ರಣನಾದ ಪರಬ್ರಹ್ಮನನ್ನು ಬೋಧಿಸುತ್ತದೆ. ಹಾಗೆಯೇ “ **ಅ ಇತಿ ಭಗವತೋ ನಾರಾಯಣಸ್ಯ ಪ್ರಥಮಾಭಿಧಾನಂ** ” ಅ ಎಂಬುದು ಭಗವನ್ನಾರಾಯಣನ ಪ್ರಥಮ ನಾಮವು ಎಂದು ಹೇಳಲ್ಪಟ್ಟಿರುತ್ತದೆ. ಅ ಕಾರವು ವರ್ಣಗಳಲ್ಲಿ ಹೇಗೆ ಪ್ರಥಮವೋ, ಹಾಗೆಯೇ ವಿಷ್ಣುವಿನ ಪ್ರಥಮ ನಾಮವು. “ **ಅಕಾರೋ ವಿಷ್ಣು ವಾಚಕಃ** ” ಎಂದಿರುತ್ತದೆ. ವಾಮನ ಪುರಾಣ ಪ್ರಮಾಣವಾದ “ **ಅಷ್ಟಾಕ್ಷರ ಶರೀರಾಂಗ ಪ್ರಣವಾದ್ಯ ಕ್ಷರೇಣತು। ಅಕಾರೇಣಾ ಖಿಲಾಧಾರಃ ಪರಮಾತ್ಮಾ ಭಿಧೀಯತೇ । ಸಮಸ್ತ ಶಬ್ದ ಮೂಲತ್ವಾ ದಕಾರಸ್ಯ ಸ್ವಭಾವತಃ । ಸಮಸ್ತ ವಾಚ್ಯ ಮೂಲತ್ವಾ ದ್ಬ್ರಹ್ಮಣೋಽಪಿ ಸ್ವಭಾವತಃ । ವಾಚ್ಯ ವಾಚಕ ಸಂಬಂಧ ಸ್ತಯೋ ರರ್ಥಾತ್ಪ್ರತೀಯತೇ** ಎಂಬಲ್ಲಿ ಅಷ್ಟಾಕ್ಷರ ಸ್ವರೂಪಕ್ಕೆ ಅಂಗವಾದ ಪ್ರಣವದ ಮೊದಲು ಅಕ್ಷರವು ಅಕಾರವು; ಅದರಿಂದ ಸಮಸ್ತಕ್ಕೂ ಆಧಾರ ಭೂತನಾದ ಪರಮಾತ್ಮನು ಹೇಳಲ್ಪಡುತ್ತಾನೆ. ಅಕಾರವು ಸರ್ವ ಶಬ್ದಕ್ಕೂ ಮೂಲ ಕಾರಣವು ಹೇಗೋ, ಹಾಗೆಯೇ ನಾರಾಯಣನೂ ಸಮಸ್ತ ವಸ್ತು ವಾಚ್ಯನು ಅಕಾರದಿಂದ ಹೇಳಲ್ಪಡುವವನು. ಅಕಾರ ಪರಬ್ರಹ್ಮವೆರಡಕ್ಕೂ ಈ ವಾಚಕ ವಾಚ್ಯರೂಪ ಸಂಬಂಧವು ಏರ್ಪಟ್ಟಿರುತ್ತದೆ. ಅಕಾರಕ್ಕೆ ನಿಘಂಟುವಿನಲ್ಲಿ ನಾನಾರ್ಥವು “ **ಅ ನಿಷೇಧೇ ಪುಮಾನ್ ವಿಷ್ಣುಃ** ” ಮೂರೆಂದು ಹೇಳಿರುತ್ತದೆ:—ನಿಷೇಧಾರ್ಥ, ಪುರುಷ, ವಿಷ್ಣುವು ಎಂಬುದಾಗಿ.

ಅಕಾರವು, **ಜಗತೋಽಸ್ಯ ಜಗಚ್ಛೇಷಃ** ಎಂಬ ಮಹರ್ಷಿಯ ದಿವ್ಯ ಸೂಕ್ತಿಗನುಸಾರವಾಗಿ, ವಿಷ್ಣುವನ್ನು ಬೋಧಿಸುವದರೊಂದಿಗೆ ಆತನಿಗೆ ಅಪೃಥಕ್ಸಿದ್ಧ ವಿಶೇಷಣವೆಂಬದಾಗಿ ತಿಳಿಸುತ್ತದೆ. ಜಗತ್ತೆಲ್ಲಾ ಸತ್ಯವಾಗಿ ಅವನಿಗೆ ಅಪೃಥಕ್ಸಿದ್ಧ ವಿಶೇಷಣವು. ಇದು ಏತರಿಂದವೆಂದರೆ “ **ಜಗತ್ಸರ್ವಂ ಶರೀರಂತೇ** ” ಎಂಬ ಮಹರ್ಷಿಯ ಉಕ್ತಿಗೂ “ **ಯಸ್ಯ ಪೃಥಿವೀ ಶರೀರಂ** ” “ **ಯಸ್ಯ ಆಪಶ್ಶರೀರಂ** ” ಇತ್ಯಾದಿ ಶ್ರುತಿಗಳಿಗೂ “ **ಐತದಾತ್ಮ್ಯ ಮಿದಂ ಸರ್ವಂ** ” ಎಂಬ ಶ್ರುತಿಗೂ ಅನುಸಾರವಾಗಿ ಎಲ್ಲವೂ ಆತನಿಗೆ ಶರೀರವು, ಎಲ್ಲಕ್ಕೂ ಆತನು ಆತ್ಮವಾದುದರಿಂದಲೇ **ಜಗಚ್ಛೇಷಃ** ಜಗತ್ತೆಲ್ಲಾ ಆ ವಿಷ್ಣುವೇ ಎಂದು ಸಾಮಾನಾಧಿಕರಣ್ಯದಿಂದ ಹೇಳಲ್ಪಟ್ಟಿತು. ಹಾಗೆಯೇ ಲಕ್ಷ್ಮಿಯೂ ಆತನಿಗೆ ಶರೀರವಾಗಿ ಆತನು ಆತ್ಮವು; ಅದರಿಂದ ಆಕೆಯು ಅಪೃಥಕ್ಸಿದ್ಧ ವಿಶೇಷಣವು. ಆದುದರಿಂದ ಅಕಾರವು ವಿಷ್ಣುವು **ಶ್ರಿಯಃ ಪತಿಯು** ಎಂಬುದನ್ನು ಬೋಧಿಸುತ್ತದೆ. ಲಕ್ಷ್ಮೀತಂತ್ರ ವಾಕ್ಯವಾದ “ **ಲಕ್ಷ್ಮ್ಯಾಸಹ ಹೃಷೀಕೇಶೋ ದೇವ್ಯಾ ಕಾರುಣ್ಯ ರೂಪಯಾ। ರಕ್ಷಕ ಸ್ಸರ್ವಸಿದ್ಧಾನ್ತೇ ವೇದಾಂತೇಷು ಚ ಗೀಯತೇ** ” ಎಂಬಲ್ಲಿ ಲಕ್ಷ್ಮಿಯೊಂದಿಗೆ ಸೇರಿಯೇ ವಿಷ್ಣುವು ಉಪಾಯ ಭೂತನು, ರಕ್ಷಕನೂ, ಮೋಕ್ಷದಾಯಕನೂ, ಪ್ರಾಪ್ಯನೂ ಎಂದು ಹೇಳಲ್ಪಟ್ಟಿರುತ್ತದೆ. ಹೀಗೆ ಇಬ್ಬರು ಒಟ್ಟಿಗೇನೇ ಯಾವಾಗಲೂ ಇರುವದರಿಂದ ಇಬ್ಬರೂ ಸೇರಿಯೇ ನಮಗೆ ಪರತತ್ವವೆಂದು

ಶ್ರೀದೇಶಿಕರವರು ಪರದೇವತಾ ಪಾರಮಾರ್ಥ್ಯಾಧಿಕಾರದಲ್ಲಿ ಉಪದೇಶಿಸಿರುತ್ತಾರೆ. ಇಬ್ಬರೂ ಸೇರಿ ಪರತತ್ವವೆಂಬುದಕ್ಕೆ ಪ್ರಮಾಣ ಉಂಟೋ? ಎಂದರೆ "**ಆನೀದ ವಾತಗ್ಂ ಸ್ವಧಯಾ ತದೇಕಂ**" ಎಂಬ ಶ್ರುತಿ ವಾಕ್ಯವೂ ಇದನ್ನನುಸರಿಸಿದ ಶ್ರೀ ವ್ಯಾಸೋಪ ಬ್ರಹ್ಮಣವೂ ಮೋಕ್ಷ ಧರ್ಮದಲ್ಲಿ **ವಿದ್ಯಯಾ ತದೇಕಂ** ಎಂದೂ ಇರುತ್ತದೆ. ಈ ಪ್ರಮಾಣಗಳಲ್ಲಿ **ಸ್ವಧಾ ವಿದ್ಯಾ** ಶಬ್ದಗಳು ಲಕ್ಷ್ಮಿಯು ಪರ್ಯಾಯ ಪದಗಳು. ಆಗಲಿ ಈ ಅಕಾರದಲ್ಲಿ ವ್ಯಕ್ತವಾಗಿ ಶ್ರಿಯಃ ಪತಿತ್ವವು ತೋರುವುದಿಲ್ಲವಲ್ಲಾ? ಎಂದರೆ, ವಿಷ್ಣುವಿಗೆ ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣ ವಾಗಿರುವುದರಿಂದ ಸನ್ನಿಯೋಗ ಶಿಷ್ಟನ್ಯಾಯದ ಪ್ರಕಾರ ಪೃಥಕ್ಕಾಗಿಹೇಳಬೇಕಾದ ಆವಶ್ಯಕವಿಲ್ಲವು. ಆದುದರಿಂದ ಶ್ರುತಿಯೂಕೂಡ ಅನೇಕ ಕಡೆಗಳಲ್ಲಿ ಪರಮ ಪುರುಷನು ಹೇಳಲ್ಪಟ್ಟಿರುವ ಸ್ಥಳಗಳಲ್ಲಿ "**ನಪೃಥಗಭಿದತ್ತೇ**" ಬೇರೆಯಾಗಿ ಹೇಳಲಿಲ್ಲವು ಎಂದು ಈ ಗ್ರಂಥಕರ್ತರೇ ಶ್ರೀ ಗುಣರತ್ನಕೋಶದಲ್ಲಿ ಹೇಳಿರುತ್ತಾರೆ. ಪುಷ್ಪವು ಪರಿಮಳಯುಕ್ತವೆಂದೂ, ಆದಿತ್ಯನು ಕಿರಣಗಳಿಂದ ಯುಕ್ತನೆಂದೂ ಹೇಳುವುದು ಹೇಗೆ ಅನಾವಶ್ಯಕವೋ ಹಾಗೆಯೇ ವಿಷ್ಣುವೂ ಲಕ್ಷ್ಮಿಯುಕ್ತನೆಂದೂ ಹೇಳುವದು ಅನಾವಶ್ಯಕವೆಂಬ ಭಾವವು.

ಈ ಪ್ರಣವದ ಅಕಾರವು ಪ್ರಥಮಾಂತವಲ್ಲವು. ವ್ಯಾಕರಣ ಬಲ್ಲವರು ಚತುರ್ಥ್ಯಂತವೆಂದೂ, ಆದರಲ್ಲಿ ಚತುರ್ಥಿಯ ಪ್ರತ್ಯಯವು ಲುಪ್ತವಾಗಿದೆ ಎಂದು ಹೇಳಬಲ್ಲರು. ಆದುದರಿಂದ ಮಕಾರ ವಾಚ್ಯನಾದ ಜೀವನು **ಆಯ್ಯೈವ** ಪರಮಾತ್ಮ ನಾದ ಶ್ರೀಯಃ ಪತಿಗೇನೇ ಎಂಬರ್ಥವು ಉಂಟಾಗುವುದರಿಂದ ವಿಷ್ಣುವೂ ಲಕ್ಷ್ಮಿಯೂ **ಶೇಷಿಗಳು,** ನಿತ್ಯ, ಮುಕ್ತ, ಬದ್ಧರೆಂದು ಮೂರು ವಿಧದಲ್ಲಿರುವ ಜೀವವರ್ಗವೆಲ್ಲಾ ಆತನಿಗೆ **ಶೇಷಭೂತರು,** ದಾಸಭೂತರೆಂಬ ಅರ್ಥವು ಉಂಟಾಗುತ್ತದೆ. ಆದುದರಿಂದ ಆಕಾರಕ್ಕೆ ಲಕ್ಷ್ಮೀ ಮತ್ತು ವಿಷ್ಣು ಇಬ್ಬರೂ "**ಪತಿಂ ವಿಶ್ವಸ್ಯ**" ಎಂಬಲ್ಲಿ ಹೇಳಿರುವ ಹಾಗೆ ಸರ್ವಶೇಷಿಗಳೆಂಬ ಅರ್ಥವೂ ಉಂಟಾಗುತ್ತದೆ. ಇದನ್ನೇ **ನಿಯಮಯತಿ ಅನಯೋಃ ಸಂಬಂಧಂ** ಎಂದು ಉಪಯೋಗಿಸಿ ಈ ಶೇಷಿ ಶೇಷ ಸಂಬಂಧವನ್ನು ಪ್ರಕಟಿಸಿರುತ್ತಾರೆ.

ಇದರಿಂದ ಅಕಾರವು ನಾಲ್ಕು ಅರ್ಥಗಳನ್ನು ಬೋಧಿಸುತ್ತದೆ.

೧. ವಿಷ್ಣುವು ಜಗತ್ಕಾರಣನೆಂದೂ, ೨. ಸರ್ವರಕ್ಷಕನೆಂದೂ, ೩. ಹೀಗೆ ಜಗತ್ಕಾರಣನೂ ಸರ್ವ ರಕ್ಷಕನೂ ಆಗಿರುವಾಗ ಲಕ್ಷ್ಮೀ ವಿಶಿಷ್ಟನಾಗಿ ಶ್ರೀಯಃಪತಿ ಯೆಂದೂ, ೪. ನಮಗೆಲ್ಲಾ ಆತನೇ ಸ್ವಾಮಿಯಾಗಿ ಶೇಷಿಯೆಂದೂ ನಾವು ಮಾಡುವ ಕಾರ್ಯವನ್ನೆಲ್ಲಾ ಆತನಿಗೆ ಕೈಂಕರ್ಯ ರೂಪವಾಗಿ ಅವುಗಳನ್ನೆಲ್ಲಾ ಬಹು ಪ್ರೀತಿಯಿಂದ ಸ್ವೀಕರಿಸುವವನೆಂದೂ ಉಪದೇಶವು.

ಎರಡನೆಯ ಅಕ್ಷರವಾದ **ಉ** ಕಾರವು **ಏವ** ಎಂಬ ಅವಧಾರಣವಾರ್ಥ ವುಳ್ಳದ್ದು. **ಈತನ** ಸತ್ತಾ ಸ್ಥಿತಿ ನಿಯಮನಾದಿಗಳೆಲ್ಲವೂ **ಈತನ** ಸರ್ವವ್ಯಾಪಾರ

ಗಳೂ ಕೈಂಕರ್ಯ ರೂಪವಾಗಿ ಅವನಿಗೇ ಸೇರಿದುವು. ಲಕ್ಷ್ಮೀನಾರಾಯಣರಿಬ್ಬರಿಗೆ ಶೇಷಭೂತನೇ ವಿನಾ ಚತುರ್ಮುಖಬ್ರಹ್ಮ ರುದ್ರ ಇಂದ್ರ ಮೊದಲಾದವರುಗಳಿಗೆ ಈತನು ಶೇಷಭೂತನಲ್ಲವು. ಏಕೆಂದರೆ ಇವರುಗಳಿಗೆ ಅಶಾಶ್ವತ ಫಲಗಳನ್ನು ಕೊಡುವ ಶಕ್ತಿಯನ್ನೂ ಕೂಡ ಸರ್ವೇಶ್ವರನಾದ ವಿಷ್ಣುವಿನಿಂದ ಹೊಂದಿರುವರೇ ವಿನಾ ಸ್ವತಂತ್ರ ಶಕ್ತಿ ಇವರಿಗಿಲ್ಲವು. ಮೋಕ್ಷವನ್ನು ಕೊಡುವ ಶಕ್ತಿಯಂತೂ ಇಲ್ಲವೇ ಇಲ್ಲವು. ಇದಕ್ಕೆ ಪ್ರಮಾಣವಾಗಿ "**ಬಹ್ಮಾಣಂ ಶಿತಿಕಂಠಂಚ ಯಾಶ್ಚಾನ್ಯಾ ದೇವತಾಃ ಸ್ಮೃತಾಃ । ಪ್ರತಿಬುದ್ಧಾನ ಸೇವಂತೇ ಯಸ್ಮಾತ್ ಪರಿಮಿತಂ ಫಲಮ್**" ಎಂದಿರುತ್ತದೆ. ಹಾಗೆಯೇ ರಾಮಾಯಣದಲ್ಲೂ "**ಬ್ರಹ್ಮಾಸ್ವಯಂಭೂಶ್ಚತುರಾನನೋವಾ ರುದ್ರಸ್ತ್ರಿನೇತ್ರ ಸ್ತ್ರಿಪುರಾಂತ ಕೋವಾ । ಇನ್ದ್ರೋ ಮಹೇನ್ದ್ರಸ್ಸುರನಾಯಕೋವಾ ತ್ರಾತುಂ ನಶಕ್ತಾ ಯುಧಿರಾಮವಧ್ಯಮ್**" ದುಷ್ಟನೆಂದು ಭಾವಿಸಿ ಕೊಲ್ಲಬೇಕೆಂದು ಶ್ರೀರಾಮನು ಸಂಕಲ್ಪಿಸಿದವನನ್ನು ಸ್ವಯಂಭೂ ಎಂದೆನಿಸಿ ನಾಲ್ಕು ಮುಖ ಎಂಟು ಕಣ್ಣುಳ್ಳ ಚತುರ್ಮುಖನೂ, ಮೂರುಕಣ್ಣು ಹಾಕಿಕೊಂಡು ತ್ರಿಪುರಾಂತಕನೆಂಬ ಮಹಿಮೆಯುಳ್ಳ ರುದ್ರನೂ, ಸರ್ವ ಸಂಪತ್ತಿಗೂ ಆಶ್ರಯನಾಗಿ ದೇವತೆಗಳಿಗೆಲ್ಲಾ ಒಡೆಯನಾಗಿ ಸಾವಿರ ಕಣ್ಣುಗಳನ್ನುಳ್ಳ ಇಂದ್ರನೂ, ರಕ್ಷಿಸಲು ಶಕ್ತರಲ್ಲವೆಂಬ ಪ್ರಾಜ್ಞನಾದ ಆಂಜನೇಯನ ಉಕ್ತಿ ಇರುತ್ತದೆ. ಜೀವಾತ್ಮನಿಗೆ **ಅನನ್ಯಾರ್ಹಶೇಷತ್ವವು** ಪರಮಾತ್ಮನಿಗೇ ವಿನಾ ಬ್ರಹ್ಮರುದ್ರೇಂದ್ರಾದಿಗಳಿಗೆ ಇಲ್ಲವೆಂದು **ದೇವರ್ಷಿ ಭೂತಾತ್ಮನೃಣಾಂ ಪಿತೃಣಾಂ ನ ಕಿಂಕರೋ ನಾಯ ಮೃಣೀ ಚ ರಾಜನ್ । ಸರ್ವಾತ್ಮನಾ ಯ ಶರಣ ಶ್ಶರಣ್ಯಂ ನಾರಾಯಣೋಲೋಕಗುರುಂ ಪ್ರಪನ್ನಃ॥** ಎಂಬ ಪ್ರಮಾಣವು ಸಾರುತ್ತದೆ. ಹೀಗೆ ಅನನ್ಯಾರ್ಹ ಶೇಷತ್ವವಿರುವದರಿಂದಲೇ ಆತ್ಮರಕ್ಷಾ ಭರಸಮರ್ಪಣ ಪ್ರಣವೋಚ್ಚಾರ ಮೂಲಕವಾಗಿ "**ಓಮ್ ಇತ್ಯಾತ್ಮಾನಂ ಯುಂಜೀತ**" ಎಂದು ತೈತ್ತರೀಯವು ಉಪದೇಶಿಸುತ್ತದೆ. ಹಾಗೆಯೇ ಇನ್ನೊಂದು ಕಡೆಯಲ್ಲೂ **ಪ್ರಣವೋ ಧನುಶ್ಶರೋ ಹ್ಯಾತ್ಮಾಬ್ರಹ್ಮ ತಲ್ಲಕ್ಷ ಮುಚ್ಯತೇ । ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್** (ಗೀತಾ ಪುಟಗಳನ್ನು ನೋಡಿ) ಈ ಅನನ್ಯಾರ್ಹ ಶೇಷತ್ವ ಸಂಬಂಧವಿರುವದರಿಂದ ನಾನು ಮಾಡುವ ಕಾರ್ಯವೆಲ್ಲಾ ಸ್ವಾಮಿ ಮೆಚ್ಚುವ ಹಾಗೆ ಆತನಿಗೆ ಕೈಂಕರ್ಯ ರೂಪವಾಗಿರಬೇಕೆಂದೂ, ಅಧರ್ಮ ಪ್ರವರ್ತನೆ ಕೂಡದೆಂದೂ, ಹೇಳಿದಂತಾಯಿತು. ತನ್ನ ರಕ್ಷಣೆಯೂ ಅವನಿಗೇ ಸೇರಿದುದಾದರಿಂದ, ಆತನ ಚರಣದ್ವಂದದಲ್ಲೇ ಶರಣಾಗತಿಯನ್ನು ಅನುಷ್ಠಿಸಬೇಕೆಂಬುದೂ ಸೂಚಿತವು. ಉಕಾರಕ್ಕೆ ಅವಧಾರಣಾರ್ಥ ಹೇಳಲು ಪ್ರಮಾಣವುಂಟೇ ? ಎಂದರೆ "**ತದೇವಾಗ್ನಿಸ್ತದ್ವಾಯು ಸ್ತತ್ಸೂರ್ಯಃಸ್ತದು ಚಂದ್ರಮಾಃ**" ಎಂಬ ಶ್ರುತಿ ವಾಕ್ಯದಲ್ಲಿ **ಭಗವಂತನೇ**

ಚಂದ್ರನು ಎಂದು ಶರೀರಾತ್ಮಭಾವದಿಂದ ಸಾಮಾನಾಧಿಕರಣ್ಯದಿಂದ ಹೇಳಲ್ಪಟ್ಟಿರುತ್ತದೆ.

ಉಕಾರಕ್ಕೆ ಇನ್ನೊಂದು ಅರ್ಥವೂ ಉಂಟು. ಕಠಶ್ರುತ್ಯನುಸಾರವಾಗಿ ಉಕಾರವು ಲಕ್ಷ್ಮೀವಾಚಕವು. "**ಅಕಾರೇಣೋಚ್ಯತೇ ವಿಷ್ಣುಸ್ಸರ್ವ ಲೋಕೇಶ್ವರೋ ಹರಿಃ। ಉದ್ಧೃತಾ ವಿಷ್ಣುನಾ ಲಕ್ಷ್ಮೀರುಕಾರೇಣೋಚ್ಯತೇತಥಾ। ಮಕಾರಸ್ತು ತಯೋರ್ದಾಸ ಇತಿ ಪ್ರಣವಲಕ್ಷಣಮ್**" ಸರ್ವಲೋಕಕ್ಕೂ ಕಾರಣಭೂತನಾಗಿ ಅವನ್ನೆಲ್ಲಾ ವ್ಯಾಪಿಸಿ, ಧರಿಸಿ, ಅವುಗಳಿಗೆಲ್ಲಾ ಸ್ವಾಮಿಯಾದ ವಿಷ್ಣುವು ಅಕಾರದಿಂದ ಹೇಳಲ್ಪಟ್ಟನು. ಹಾಗೆಯೇ ವಿಷ್ಣುವಿನಿಂದ ವಕ್ಷಸ್ಥಳದಲ್ಲಿ ಧರಿಸಲ್ಪಟ್ಟ ಲಕ್ಷ್ಮಿಯು ಉಕಾರದಿಂದ ಹೇಳಲ್ಪಟ್ಟಳು. ಮಕಾರ ವಾಚ್ಯನಾದ ಜೀವನು ಇವರಿಬ್ಬರಿಗೂ ಶೇಷಭೂತನು, ದಾಸನು ಎಂದು ಹೇಳಲ್ಪಟ್ಟಿರುತ್ತದೆ. ಉಕಾರವು ಅವಧಾರಣಾರ್ಥ ವುಳ್ಳದ್ದು ಪ್ರಣವಲಕ್ಷಣವೆಂದು ಇನ್ನೊಂದು ಪ್ರಮಾಣವೂ ಉಂಟು. "**ಅಕಾರೋ ವಿಷ್ಣುರಿತ್ಯುಕ್ತೋ ಮಕಾರೋ ಜೀವವಾಚಕಃ। ತಯೋಸ್ತು ನಿತ್ಯಸಂಬಂಧೋ ಉಕಾರೇಣ ಪ್ರಕೀರ್ತಿತಃ**" ಎಂಬದಾಗಿ, ಹೀಗೆ ಈ ಎರಡು ಅರ್ಥಗಳೂ ಈ ಶ್ಲೋಕದಲ್ಲಿ ಉಪಪಾದಿತವಾಗಿವೆ. **ಉಕಾರೋಽನನ್ಯಾರ್ಹಂ** ಎಂಬುದರಿಂದ ಅವಧಾರಣಾರ್ಥವನ್ನೂ, **ನಿಯಮ ಯತಿ ಸಂಬಂಧ ಮನಯೋಃ** ಎಂಬುದರಿಂದ **ಮಕಾರಸ್ತುತಯೋರ್ದಾಸಃ ತಯೋಃ** ಎಂಬ ಪ್ರಯೋಗದಿಂದ ಗ್ರಹಿಸಬಹುದು. **ಮಕಾರಾರ್ಥೋ ಜೀವಃ** ಕಕಾರ ಮೊದಲುಗೊಂಡು ಮಕಾರದವರೆಗೂ ಇರುವ ೨೫ ಅಕ್ಷರಗಳೂ ಅಚಿತ್ತು ಮತ್ತು ಅದರೊಂದಿಗೆ ಸೇರಿಸುವ ಚಿತ್ತುಗಳನ್ನು ಬೋಧಿಸುತ್ತವೆ. ಇವರಲ್ಲಿ ೨೪ ಅಕ್ಷರಗಳು ಕಕಾರ ಮೊದಲು ೨೪ ಅಚಿತ್ತತ್ವಗಳನ್ನು ಬೋಧಿಸುತ್ತವೆ. ೨೫ನೆಯದಾದ ಮಕಾರವು ಚಿತ್ತತ್ವವಾದ ಜೀವಾತ್ಮನನ್ನು ಬೋಧಿಸುತ್ತದೆ. ಇದು ತತ್ವಸಾಗರ ಸಂಹಿತಾದಿಗಳಲ್ಲಿ ಪ್ರೋಕ್ತವೆಂದು ಶ್ರೀ ನಿಗಮಾಂತ ದೇಶಿಕರು ಹೇಳಿರುತ್ತಾರೆ. ಅಲ್ಲಿ "**ಆತ್ಮಾತು ಸ ಮಕಾರೇಣ ಪಂಚವಿಂಶಃ ಪ್ರಕೀರ್ತ್ಯತೇ।**" ಎಂದು ಹೇಳಲ್ಪಟ್ಟಿರುತ್ತದೆ. ಜೀವಾತ್ಮನು ೨೫ನೆಯ ತತ್ವವೆಂದೂ ೨೬ನೆಯ ತತ್ವವು ಈಶ್ವರನೆಂದೂ ಶ್ರೀ ವ್ಯಾಸರು ಮೋಕ್ಷ ಧರ್ಮದಲ್ಲಿ ಹೇಳಿರುತ್ತಾರೆ. "**ಅನ್ಯಶ್ಚ ರಾಜನ್ ಸಪರಃ ಪಂಚವಿಂಶಕಃ। ತಂಷಡ್ವಿಂಶಕ ಮಿತ್ಯಾಹುಃ॥**" ಎಂಬ ಪ್ರಮಾಣವು ಜೀವ ಪರಮಾತ್ಮ ಭೇದವನ್ನು ವ್ಯಕ್ತವಾಗಿ ಬೋಧಿಸುತ್ತದೆ. ಹೀಗೆ ತತ್ವತ್ರಯಗಳಾದ ಅಚಿತ್ತು ಚಿತ್ತು ಈಶ್ವರರು ೨೬ ತತ್ವಗಳಾಗಿ ವಿಭಾಗಿಸಲ್ಪಟ್ಟವೆ.

ಮಕಾರವು, **ಮನಜ್ಞಾನೇ** ಎಂಬ ಧಾತುವ್ಯುತ್ಪತ್ತಿಯಿಂದ ಜ್ಞಾನಸ್ವರೂಪನು ಮತ್ತು ಜ್ಞಾನಗುಣಗಳುಳ್ಳವನೆಂಬುದು ತೋರಿಬರುತ್ತದೆ. ಈ ಜ್ಞಾನಗುಣವನ್ನು ಧರ್ಮಭೂತ ಜ್ಞಾನವೆನ್ನುವರು; ಇದು ದೇಹಗುಣಗಳಿಂದ ತಿರೋಹಿತವಾಗಿ

ಜ್ಞಾನ ಸಂಕೋಚವನ್ನು ಹೊಂದುತ್ತದೆ. ಇದು **ಜ್ಞೋತೆ ಏವ** ಎಂಬ ಬ್ರಹ್ಮ ಸೂತ್ರದಲ್ಲಿ ಉಪಪಾದಿತವು. ಮುಕ್ತದೆಶೆಯಲ್ಲಿ ಈ ಜ್ಞಾನ ತಿರೋಹಿತತ್ವವು ಕಳೆದು ಹೋಗಿ **ಸ್ವೇನರೂಪೇಣಾಭಿ ನಿಷ್ಪದ್ಯತೇ** ಎಂದು ಹೇಳಲ್ಪಟ್ಟ ಸರ್ವಜ್ಞತ್ವ ಆನಂದತ್ವ ಅಮಲತ್ವಾದಿಗಳನ್ನು ಜೀವನು ಹೊಂದುವನು. **ಮನು ಅವಬೋಧನೇ** ಎಂಬ ಧಾತುವ್ಯುತ್ಪತ್ತಿಗಳ ಮೂಲಕ ಈ ಮೇಲಿನ ಅಭಿಪ್ರಾಯಗಳು ಉಂಟಾಗುತ್ತವೆ. ಇದನ್ನೇ ಶ್ರುತಿಯು "**ಏಷಹಿ ದ್ರಷ್ಟಾ, ಶ್ರೋತಾ, ಘ್ರಾತಾ, ರಸಯಿತಾ, ಮಂತಾ, ಬೋದ್ಧಾ, ಕರ್ತಾ ವಿಜ್ಞಾನಾತ್ಮಾ ಪುರುಷಃ**" ಎಂದು ಉಪಪಾದಿಸುತ್ತದೆ. ಜೀವನಿಗೆ ಇದರಿಂದ ಕರ್ತೃತ್ವ ಭೋಕ್ತೃತ್ವಾದಿಗಳುಂಟೆಂದು ಹೇಳಲ್ಪಟ್ಟವು. **ಜ್ಞಾನಾನಂದ ಮಯ ಸ್ತ್ವಾತ್ಮಾ** ಎಂಬುದರಿಂದ ಜ್ಞಾನ ಸ್ವರೂಪವು ಬೋಧಿತವು. **ಮಸ ಪರಿಮಾಣೇ** ಎಂಬ ಧಾತುವ್ಯುತ್ಪತ್ತಿಯಿಂದ ಜೀವಾತ್ಮನು ಅಣುಪರಿಮಾಣವುಳ್ಳವನೆಂಬುದು ತೋರಿ ಬರುತ್ತದೆ. "**ಏಷೋಣು ರಾತ್ಮಾ**", "**ವಾಲಾಗ್ರಶತ ಭಾಗಸ್ಯ ಶತಧಾಕಲ್ಪಿತಸ್ಯ ಚ**" ಎಂಬ ಶ್ರುತಿ ಪ್ರಮಾಣಗಳು ಈ ಜೀವ ಸ್ವರೂಪವನ್ನು ಬೋಧಿಸುತ್ತವೆ. ಇದರಿಂದಲೇ ಗೀತೆಯಲ್ಲಿ "**ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ । ನಚೈನಂ ಕ್ಲೇದಯ ನ್ತ್ಯಾಪೋ ನ ಶೋಷಯತಿ ಮಾರತುಃ**" ಜೀವಾತ್ಮನನ್ನು ಶಸ್ತ್ರಗಳು ಕತ್ತರಿಸಲಾರವು; ನೀರು ತೋಯಿಸಲಾರದು; ಅಗ್ನಿಯು ದಹಿಸಲಾರದು; ವಾಯುವು ಶೋಷಿಸಲಾರದೆಂದು ಹೇಳಲ್ಪಟ್ಟಿರುತ್ತದೆ. ಹೀಗೆ ಈ ಮೂರು ಧಾತುಗಳಿಂದ ಜೀವಾತ್ಮನು ಅಣುವಾಗಿಯೂ, ಜ್ಞಾನ ಸ್ವರೂಪನಾಗಿಯೂ, ವಿಭುವಾದ ಜ್ಞಾನ ಗುಣವನ್ನು ಮುಕ್ತದೆಶೆಯಲ್ಲೂ ಹೊಂದಿ, ಬದ್ಧ ದೆಶೆಯಲ್ಲಿ ಮಾತ್ರ ಜ್ಞಾನ ಸಂಕೋಚವುಳ್ಳವನೆಂಬುದು ಸ್ಥಾಪಿತವು. ಈ **ಮಕಾರವು** ಅತ್ಯಲ್ಪ ಪರಿಮಾಣವುಳ್ಳದ್ದಾಗಿ ಜ್ಞಾತೃತ್ವವುಳ್ಳದ್ದು ಜೀವಾತ್ಮ ತತ್ವವು ಎಂದು ನಿರೂಪಿಸುತ್ತದೆ. ಹೀಗೆ ಜ್ಞಾನ ಸ್ವರೂಪನಾದುದರಿಂದ ವಿಜ್ಞಾನ ಶಬ್ದದಿಂದ **ವಿಜ್ಞಾನಂ ಯಜ್ಞಂ ತನುತೇ** ಎಂಬಲ್ಲಿ ಜೀವಾತ್ಮನೇ ಹೇಳಲ್ಪಟ್ಟಿರುತ್ತಾನೆ. ಈ ಜೀವಾತ್ಮನು **ತದುಪಕರಣಂ** – ವಿಷ್ಣುವಿನ ನಿತ್ಯ ಸಙ್ಕಲ್ಪದಿಂದ ನಿತ್ಯವಾಗಿರತಕ್ಕೆಂಬದಾಗಿ ಉಂಟಾದವನಾಗಿ ಅವನ ವಿಭೂತಿಗೆ ಸೇರಿದವನು; ಆದುದರಿಂದ ಆ ಪರಮಾತ್ಮನಿಗೆ ಶೇಷಭೂತನು. ಇದು ಅಕಾರದ ಲುಪ್ತ ಚತುರ್ಥಿಯಿಂದಲೇ ತೋರುವ ಅರ್ಥವು. ಆದುದರಿಂದ **ವೈಷ್ಣವಮಿದಂ** ವಿಷ್ಣು ಸಂಬಂಧಿ ಎಂದು ಹೇಳಲ್ಪಟ್ಟಿತು. ಅಥವಾ **ಮಕಾರಾರ್ಥೋ ಜೀವಃ ತದುಪಕರಣಂ** ಎಂಬುದಕ್ಕೆ ಇನ್ನೊಂದು ವಿಧವಾಗಿಯೂ ಅರ್ಥ ಹೇಳಬಹುದು. **ತದುಪಕರಣಂ** ಆ ಜೀವಾತ್ಮನಿಗೆ **ಉಪಕರಣಂ** ಶೇಷಭೂತವಾದ ಶುದ್ಧ ಸತ್ವ ಮಿಶ್ರಸತ್ವ ಸತ್ವಶೂನ್ಯ ಬೇಧದಿಂದ ಮೂರು ವಿಧ ಅಚೇತನವೂ **ವೈಷ್ಣವ ಮಿದಮ್** – ವಿಷ್ಣು ಸಂಬಂಧವಾದುದು. ಈ ಜಗತ್ತಿನಲ್ಲಿ ಜೀವಾತ್ಮನು ಈ ಜಡ ಪದಾರ್ಥದೊಂದಿಗೇ ಸೇರಿ ಇರುವನು. ಹಾಗೆ ಮಾಡುವವನು ತಾನೇ

ಎಂದು ಗೀತೆಯಲ್ಲಿ ಹೇಳಿಕೊಂಡಿರುತ್ತಾರೆ:- **ಮಮ ಯೋನಿ ರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದದಾಮ್ಯಹಮ್** – ಮಹದ್ಬ್ರಹ್ಮವಾದ ಪ್ರಕೃತಿಯನ್ನು ಇಲ್ಲಿ ಈ ಗರ್ಭಭೂತನಾದ ಜೀವಾತ್ಮನನ್ನು ನಾನೇ ಸೇರಿಸುವವನು ಎಂದರೆ ನನ್ನ ಸಙ್ಕಲ್ಪದಿಂದಲೇ ಜೀವಾತ್ಮನಿಗೆ ಶರೀರವನ್ನುಂಟು ಮಾಡುವೆನೆಂಬರ್ಥವು. ಇದರಿಂದ **ಕ್ಷರಾತ್ಮಾನೌ ಈಶತೇ ದೇವ ಏಕಃ** ಎಂಬ ಶ್ರುತ್ಯರ್ಥವು ಬೋಧಿತವು. ಹಾಗೆಯೇ ಸ್ವರ್ಗಾದಿ ಇತರ ಲೋಕಗಳಲ್ಲೂ ಮುಕ್ತದೆಶೆಯಲ್ಲಾದರೋ ಶುದ್ಧ ಸತ್ವಮಯ ಶರೀರದಿಂದ ಕೂಡಿರುವನು. ಇದು ಮಕಾರದಲ್ಲಿ ತೋರಿಬರುವುದಲ್ಲದೆ ಅಕಾರವು ಜಗತ್ಕಾರಣನನ್ನು ಬೋಧಿಸುವುದರಿಂದಲೂ ವ್ಯಕ್ತವು. ಲುಪ್ತ ಚತುರ್ಥಿ ಯಾದುದರಿಂದ ಅಚಿತ್ತೂ ಚಿತ್ತೂ ಎರಡೂ ಸ್ವಾಮಿಗೆ ಶೇಷಭೂತವೆಂದು ಹೇಳಿದಂತಾಯಿತು. "**ಪತಿಂ ವಿಶ್ವಸ್ಯ**" ಎಂಬಲ್ಲಿ ವಿಶ್ವವೆಲ್ಲಾ ವಿಷ್ಣುವಿನ ಸ್ವತ್ತು ಎಂದು ತಿಳಿಸುತ್ತದೆ. ಹಾಗೆಯೇ "**ಸ್ವತ್ವ ಮಾತ್ಮನಿ ಸಂಜಾತಂ ಸ್ವಾಮಿತ್ವಂ ಬ್ರಹ್ಮಣಿ ಸ್ಥಿತಮ್**" ಎಂಬುದು ಪರಬ್ರಹ್ಮವು ಎಲ್ಲಕ್ಕೂ ಸ್ವಾಮಿಯು, ಜೀವಾತ್ಮನು ಆತನ ಸ್ವತ್ತು ಎಂದು ಹೇಳುತ್ತದೆ. "**ಸ್ವೋಜ್ಜೀವನೇ ಚಾಭಿ ಯದಿತೇ ಸ್ವಸತ್ತಾಯಾಂ ಸ್ಪೃಹಾಯದಿ। ಆತ್ಮ ದಾಸ್ಯಂ ಹರೇಸ್ಸ್ವಾಮ್ಯಂ ಸ್ವಭಾವಂಚ ಸದಾಸ್ಮರ ॥** ನಿನ್ನ ಆತ್ಮೋಜ್ಜೀವನದಲ್ಲಿ ನಿನಗೆ ಇಚ್ಛೆ ಇದ್ದರೆ, ನಿನ್ನ ಸ್ವರೂಪವನ್ನು ಕಾಪಾಡಿಕೊಳ್ಳುವ ಆಶೆಯೂ ಇದ್ದರೆ, ನೀನು ಶ್ರೀ ಹರಿಗೆ ದಾಸನೆಂಬುದನ್ನೂ ನಿನಗೆ ಶ್ರೀ ಹರಿಯೇ ಸ್ವಾಮಿ ಎಂಬುದನ್ನೂ ಆತನು ಅತ್ಯಂತ ಕೃಪಾನಿಧಿ ಮೊದಲಾದ ಕಲ್ಯಾಣ ಗುಣಗಳನ್ನೂ ಸ್ಮರಿಸು. "**ದಾಸ ಭೂತಾ ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ**" ಇತ್ಯಾದಿ ಪ್ರಮಾಣಗಳೆಲ್ಲಾ ಅನುಸಂಧೇಯವು.

ಪ್ರಣವದ ಮಹಾತ್ಮ್ಯೆಯು ಮುಂದೆ ಹೇಳಲ್ಪಡುತ್ತದೆ. **ತ್ರಯೀಸಾರಃ**– ಈ ಮೂರು ಅಕ್ಷರಗಳೂ ಮೂರು ವೇದಾರ್ಥಗಳ ಸಾರಭೂತವಾದುವು. ಮತ್ತು **ತ್ರ್ಯಾತ್ಮಾ**– ಪ್ರಣವವು ಹೀಗೆ ಮೂರು ಅಕ್ಷರಗಳನ್ನುಳದ್ದಾಗಿ ಮೂರು ವೇದಗಳ ಸ್ವರೂಪವನ್ನುಳ್ಳವು. **ಓಂಕಾರಃ ಭೂರಿತಿ ಋಗ್ವೇದಾದ ಜಾಯತ, ಭುವ ಇತ್ಯಜುರ್ವೇದಾತ್, ಸುವರಿತಿ ಸಾಮವೇದಾತ್** ಆದುದರಿಂದ **ಓಂ ಭೂರ್ಭುವ ಸ್ಸುವಃ** ಎಂಬ ಪ್ರಯೋಗವು. ಇವುಗಳಿಂದ "**ತ್ರಯೋ ವರ್ಣಾ ಅಜಾಯಂತ, ಅಕಾರ ಉಕಾರ, ಮಕಾರ ಇತಿ** ಆದುದರಿಂದ **ತ್ರಯೀಸಾರವು ತ್ರ್ಯಾತ್ಮಾ ಸಹ**. ಇನ್ನೊಂದು ಪ್ರಮಾಣವು:- **ಅಕಾರಂ ಚಾ ಪ್ಯುಕಾರಂಚ ಮಕಾರಂಚ ಪ್ರಜಾಪತಿಃ। ವೇದತ್ರಯಾ ನ್ನಿರಬೃಹ ದ್ಭೂರ್ಭುವಸ್ಸುವ ರಿತೀತಿಚ ॥**" ಈ ಪ್ರಣವದ ಮಹಾತ್ಮ್ಯೆಯು ತೈತ್ತರೀಯದಲ್ಲಿ ವ್ಯಕ್ತವು. ಪ್ರತಿಯೊಂದು ವೇದಾರಂಭದಲ್ಲೂ ನಿಗಮನದಲ್ಲೂ **ಹರಿಃ ಓಮ್** ಎಂದು ಹೇಳಬೇಕೆಂಬ ನಿಯಮವು "**ಯದ್ವೇದೌ ಸ್ವರಪ್ರೋಕ್ತೋ ವೇದಾನ್ತೇ ಚ**

೨. ಮನ್ತ್ರ ಬ್ರಹ್ಮಣಿ ಮಧ್ಯಮೇನ ನಮಸಾ ಪುಂಸ ಸ್ಸ್ವರೂಪಂಗತಿ
ರ್ಗಮ್ಯಂ ಶಿಕ್ಷಿತ ಮೀಕ್ಷಿತೇನ ಪುರತಃ ಪಶ್ಚಾದಪಿ ಸ್ಥಾನತಃ ।
ಸ್ವಾತಂತ್ರ್ಯಂ ನಿಜ ರಕ್ಷಣಂ ಸಮುಚಿತಾ ವೃತ್ತಿಶ್ಚ ನಾನ್ಯೋಚಿತಾ
ತಸ್ಯೈವೇತಿ ಹರೇ ರ್ವಿವಿಚ್ಯ ಕಥಿತಂಸ್ವಸ್ಯಾಪಿ ನಾರ್ಹಂ ತತಃ ॥

ಪ್ರತಿಷ್ಠಿತಃ। ತಸ್ಯ ಪ್ರಕೃತಿ ಲೀನಸ್ಯಯಃಪರ ಸ್ಸಮಹೇಶ್ವರಃ" ಆ ಮಹೇಶ್ವರನು ಯಾರು ಎಂದರೆ **ಶ್ರೀ ಹರಿಃ** ಮಹಾವಿಷ್ಣುವು.

ಹೀಗೆ ಮೇಲೆ ಹೇಳಿದ ಅರ್ಥವನ್ನೆಲ್ಲಾ ಈ ಪ್ರಣವವು ಪ್ರಕಟಿಸುತ್ತದೆ. ಎಂಬ ಭಾವವು.

ಅವತಾರಿಕೆ:—ಈ ಶ್ಲೋಕದಲ್ಲಿ ಅಷ್ಟಾಕ್ಷರದ ದ್ವಿತೀಯ ಪದವಾದ ನಮ ಶ್ಯಬ್ದದಿಂದ ತೋರುವ ಅರ್ಥಗಳನ್ನು ಬೋಧಿಸುತ್ತಾರೆ. ಈ ನಮಶಬ್ದವನ್ನು ಹಿಂದಿನ ಪ್ರಣವದೊಂದಿಗೂ ಮುಂದಿನ ನಾರಾಯಣಾಯ ಎಂಬ ಪದದೊಂದಿಗೂ ಅನ್ವಯಿಸಿ, ಸ್ವರೂಪ, ಉಪಾಯ, ಪುರುಷಾರ್ಥ ಪರವಾಗಿ ಅರ್ಥಗಳನ್ನು ಹೇಳಿ, ಸ್ವಾತಂತ್ರವೂ, ತನ್ನ ರಕ್ಷಣೆಯೂ, ಮಾಡುವ ಕೈಂಕರ್ಯ ರೂಪ ವ್ಯಾಪಾರವೂ ಇವು ಮೂರೂ ಶ್ರಿಯಃ ಪತಿಗೆ ಸೇರಿದುದೇ ವಿನಾ, ತನಗಲ್ಲವೆಂದು ಉಪದೇಶಿಸುತ್ತಾರೆ.

ಅರ್ಥವು :—ಮನ್ತ್ರಬ್ರಹ್ಮಣಿ—ಈ ವೇದ ಮನ್ತ್ರವಾದ ಅಷ್ಟಾಕ್ಷರದಲ್ಲಿ, ವ್ಯಾಪಕ ಮನ್ತ್ರಗಳಲ್ಲೆಲ್ಲಾ ಸರ್ವೋತ್ಕೃಷ್ಟವೆನಿಸಿದ ಮೂಲ ಮನ್ತ್ರದಲ್ಲಿ, ಇಲ್ಲಿ ಬ್ರಹ್ಮ ಶಬ್ದವು ವೇದ ಪರವು. **ಮಧ್ಯಮೇನ ನಮಸಾ** – ಅದರಲ್ಲಿರುವ ಮೂರು ಪದಗಳ ಮಧ್ಯದಲ್ಲಿರುವ ನಮಶ್ಯಬ್ದದಿಂದ, **ಸ್ಥಾನತಃ** – ಆ ನಮಸ್ಸಿರುವ ಸ್ಥಾನದಿಂದ, **ಪುರತಃ ಈಕ್ಷೀತೇನ** – ಹಿಂದಿರುವ ಪ್ರಣವವನ್ನು ನೋಡುವದರಿಂದ ಎಂದರೆ **ನಮ** ಶ್ಯಬ್ದವನ್ನು **ಪ್ರಣವ**ದೊಂದಿಗೆ ಅನ್ವಯಿಸುವುದರಿಂದಲೂ ಮತ್ತು **ಪಶ್ಚಾದಪಿ** – ಮುಂದೆ ಇರುವ **ನಾರಾಯಣಾಯ** ಎಂಬುದರೊಂದಿಗೆ **ಈಕ್ಷಿತೇನ** – ನೋಡುವುದರಿಂದ ಎಂದರೆ **ನಮಃ ನಾರಾಯಣಾಯ** ಎಂದು ಅನ್ವಯಿಸುವುದರಿಂದಲೂ, ಹೀಗೆ **ಅ, ಉ, ಮ ನಮಃ** ಎಂದು ಅನ್ವಯಿಸುವುದರಿಂದಲೂ **ನಮಃ ನಾರಾಯಣಾಯ** ಎಂದು ಅನ್ವಯಸುವುದರಿಂದಲೂ **ಪುಂಸಃ** ಪರಿಶುದ್ಧನಾದ ಈ ಜೀವಾತ್ಮನ, **ಸ್ವರೂಪಂ** – ಜೀವಾತ್ಮನ ಪರಮಾತ್ಮನಿಗೇನೇ ಶೇಷನಾಗಿರುವ ಸ್ವರೂಪವೂ, ಹೇಗೆಂದರೆ **ಮ್ ಅಯ್ಯೈವ ನಮಮ** ಜೀವಾತ್ಮನು ಪರಮಾತ್ಮನಿಗೇ ಶೇಷಭೂತನು ತಾನು ತನಗಲ್ಲವು ಎಂಬುದರಿಂದ, **ಗತಿಃ**—ಉಪಾಯವು ಹೇಗೆಂದರೆ **ನಮೋ ನಮಃ – ನಮಃ** ಪ್ರ ಣಾ ಮ ರೂ ಪ ಶರಣಾಗತಿಯು ಪರಮಾತ್ಮನಿಗೇನೆ, ಅದು ತನಗಾಗಿ ಅಲ್ಲವು; **ಗಮ್ಯಂ** ಎಂದರೆ ಪ್ರಾಪ್ಯವೂ, ತಾನು ಮಾಡುವ **ಕೈಂಕರ್ಯ**ವೆಲ್ಲವೂ ಪರಮ **ಪುರುಷ**ನಿಗೇ ವಿನಾ ತನಗಾಗಿ ಅಲ್ಲವು.

ನಾರಾಯಣಾಯ ಮಃಸ – ಸರ್ವ ಪ್ರವೃತ್ತಿರೂಪ ಕೈಂಕರ್ಯವೂ ಲಕ್ಷ್ಮೀಸಹಿತನಾಥ ನಾರಾಯಣನಿಗೇ ವಿನಾ ತನಗಲ್ಲವು; ಹೀಗೆ ಸ್ವರೂಪವೂ, ಗತಿಯಾದ ಉಪಾಯವೂ, ಗಮ್ಯವಾದ ಪ್ರಾಪ್ಯವೂ ಈ ಮೂರೂ **ಶಿಕ್ಷಿತಂ** ಶಿಕ್ಷಿಸಲ್ಪಟ್ಟವು, ಉಪದೇಶಿಸಲ್ಪಟ್ಟವು. ಈ ಮೇಲಿನ ಉಪದೇಶದಿಂದ ತೋರಿಬರುವ ಮೂರು ಪ್ರಯೋಜನಗಳನ್ನು ತಿಳಿಸುತ್ತಾರೆ. **ಸ್ವಾತಂತ್ರ್ಯಂ** – ಸ್ವಾತಂತ್ರ್ಯವೂ, **ನಿಜರಕ್ಷಣಂ** – ಚೇತನನಾದ ತನ್ನ ರಕ್ಷಣವೂ, **ಸಮುಚಿತಾ ವೃತ್ತಿಶ್ಚ** – ಶೇಷ ಭೂತನಾಗಿ ಎಂದರೆ ದಾಸಭೂತನಾಗಿರುವ ತನಗೆ ಯೋಗ್ಯವಾದ ವ್ಯಾಪಾರವೆಲ್ಲವೂ ಸಹ, **ತಸ್ಯೈವ** – ಸರ್ವಶೇಷಿಯಾದ **ಹರೇಃ** – ಶ್ರಿಯಃಪತಿಗೇನೇ ವಿನಾ, **ನಾನ್ಯೋಚಿತಾ** – ಇನ್ನು ಯಾರಿಗೂ ಯೋಗ್ಯವಾದುದಲ್ಲವು; **ಇತಿ** – ಈ ಪ್ರಕಾರವಾಗಿ, **ವಿವಿಚ್ಯ** – ವಿವೇಕಿಸಿ ವಿಭಜನಮಾಡಿ, **ಕಥಿತಂ** – ಹೇಳಲ್ಪಟ್ಟಿತು; **ತತಃ** – ಆ ಕಾರಣದಿಂದ, **ಸ್ವಸ್ಯಾಪಿ** – ತನಗಾದರೋ, ಶೇಷನಾಗಿ, ಅಸ್ವತಂತ್ರನಾಗಿ, ತನ್ನ ರಕ್ಷಣೆಯಲ್ಲಿ ಅಶಕ್ತನಾಗಿರುವ ತನಗಾದರೋ ಇವು ಯಾವುವೂ **ನಾರ್ಹಂ** – ಯೋಗ್ಯವಾದವಲ್ಲವು. ಎರಡನೆಯ ಪದವಾದ ನಮಸ್ಸನ್ನು ಮೊದಲಿನ ಪದವಾದ ಓಂ ಎಂಬುದರೊಂದಿಗೂ ಮತ್ತು ಅದನ್ನು ಮೂರನೆಯ ಪದವಾದ ನಾರಾಯನಾಯ ಎಂಬುದರೊಂದಿಗೂ ಅನ್ವಯಿಸುವುದರಿಂದ ಜೀವಾತ್ಮನ ಸ್ವರೂಪವೂ ಆತನು ಅನುಷ್ಠಿಸುವ ಉಪಾಯವೂ ಆತನು ಹೊಂದುವ ಪ್ರಾಪ್ಯವೂ ಉಪದಿಷ್ಟವೆಂದು ಪೂರ್ವಾರ್ಧದಲ್ಲಿ ಹೇಳಿ, ಅದರಿಂದ ಉಂಟಾಗುವ ಮೂರು ಅಭಿಪ್ರಾಯಗಳು, ಶ್ರಿಯಃ ಪತಿಯೇ ಸ್ವತಂತ್ರನು, ತಾನು ಅಸ್ವತಂತ್ರನೆಂದೂ, ತನ್ನನ್ನು ರಕ್ಷಿಸಲು ಆತನೇ ವಿನಾ ತಾನು ಅಶಕ್ತನೆಂದೂ, ಕಿಂಕರನಾದ ತಾನು ಮಾಡುವ ಸದ್ವೃತ್ತಿಗಳೆಲ್ಲಾ ಆತನಿಗೆ ಕೈಂಕರ್ಯ ರೂಪವಾದುವೆಂದೂ ಅವು ತನಗಲ್ಲವೆಂದೂ ಹೇಳಲ್ಪಟ್ಟಿತು.

ತಾತ್ಪರ್ಯವು:—ಮಂತ್ರಬ್ರಹ್ಮಣಿ ಎಂಬಲ್ಲಿ ಈ ಮೂಲಮಂತ್ರವು ವೇದಪ್ರತಿಪಾದ್ಯವಾದುದರಿಂದ ಹಾಗೆ ಪ್ರಯೋಗವು "**ಓಮಿತ್ಯೇಕಾಕ್ಷರಂ, ನಮ ಇತಿದ್ವೇಕ್ಷರೇ, ನಾರಾಯಣಾಯೇತಿ ಪಂಚಾಕ್ಷರಾಣಿ**" ಎಂಬುದು ಅನುಸಂಧೇಯವು. "**ಓಮಿತಿ ಬ್ರಹ್ಮ**" ವೆಂದು ಶಿಕ್ಷಾವಲ್ಲಿಯ ಪ್ರಯೋಗವು. ಗೀತೆಯಲ್ಲಿ "**ಓಮಿತ್ಯೇಕಾಕ್ಷರಂ ಬ್ರಹ್ಮವ್ಯಾಹರನ್ ಮಾಮನುಸ್ಮರನ್**" ಎಂದಿರುತ್ತದೆ. ಇಲ್ಲೆಲ್ಲಾ ಶಬ್ದಬ್ರಹ್ಮವಾದ ವೇದವು ಹೇಳಲ್ಪಟ್ಟಿತು. ಶ್ರೀರಂಗ ರಾಮಾನುಜರು **ಓಮಿತಿ ಬ್ರಹ್ಮ** ಎಂಬುದಕ್ಕೆ ಪ್ರಣವವು ಬ್ರಹ್ಮಸಾಧಕವಾದುದ ರಿಂದ ಬ್ರಹ್ಮವೇ ಎಂದು ವ್ಯಾಖ್ಯಾನ ಮಾಡಿರುತ್ತಾರೆ. ಶ್ರೀವ್ಯಾಸರು ಇದನ್ನೇ **ಓಮಿತ್ಯೇಕಾಕ್ಷರಂಬ್ರಹ್ಮ** ಎಂದು ವ್ಯಾಖ್ಯಾನ ಮಾಡಿರುವದಕ್ಕೆ ಶ್ರೀಯತಿವರ್ಯರು **ಮದ್ವಾಚಕಂ** ಎಂದು ಭಾಷ್ಯ ಬರೆದಿರುವದರಿಂದ ಶಬ್ದಬ್ರಹ್ಮವೆಂಬರ್ಥವೇ ಸರಿಯಾಗಿ ತೋರುತ್ತದೆ. "**ಶಬ್ದಬ್ರಹ್ಮಣಿ ನಿಷ್ಣಾತಃ ಪರಂಬ್ರಹ್ಮಾಧಿಗಚ್ಛತಿ**"

ಚನ್ನಾಗಿ ವೇದಶಾಸ್ತ್ರ ಜ್ಞಾನದಲ್ಲಿ ಪಳಗಿರುವವನು ಉಪಾಯಾನುಷ್ಠಾನವನ್ನು ಮಾಡಿ ಪರಬ್ರಹ್ಮನನ್ನು ಹೊಂದುವನು ಎಂಬಲ್ಲಿ ಶಬ್ದಬ್ರಹ್ಮವೆಂಬುದಕ್ಕೆ ವೇದಶಾಸ್ತ್ರವೆಂದೇ ಅರ್ಥವು. ಅಥವಾ **ಮನ್ತ್ರಬ್ರಹ್ಮಣಿ** ಎಂಬುದಕ್ಕೆ ಸರ್ವೋತ್ಕೃಷ್ಟಮನ್ತ್ರವೆಂದು ಅರ್ಥ ಮಾಡಿರುತ್ತಾರೆ. " **ಯಥಾಸರ್ವೇಷು ವೇದೇಷುನಾಸ್ತಿ ನಾರಾಯಣಾತ್ಪರಃ। ತಥಾ ಸರ್ವೇಷು ಮನ್ತ್ರೇಷು ನಾಸ್ತಿ ಚಾಷ್ಟಾಕ್ಷರಾತ್ಪರಃ। ಭೂತ್ವೋರ್ಧ್ವಬಾಹುರದ್ಯಾತ್ರ ಸತ್ಯಪೂರ್ವಂ ಬ್ರವೀಮಿವಃ। ಹೇ ಪುತ್ರ ಶಿಷ್ಯಾಶ್ಶೃಣುತ ನ ಮನ್ತ್ರೋಷ್ಟಾಕ್ಷರಾತ್ಪರಃ। ಸರ್ವವೇದಾಂತ ಸಾರಾರ್ಥಸ್ಸಂಸಾರಾರ್ಣವ ತಾರಕಃ। ಗತಿ ರಷ್ಟಾಕ್ಷರೋ ನೃಣಾಮಪುನರ್ಭವ ಕಾಂಕ್ಷಿಣಾಮ್॥ ನತತ್ಸಮ ಶ್ಚಾಭ್ಯಧಿಕಶ್ಚ ಶ್ರೂಯತೇ"** ಎಂಬಲ್ಲಿ ಹೇಳಿರುವ ಶ್ರೀಮನ್ನಾರಾಯಣನಿಗಿಂತ ಶ್ರೇಷ್ಠವಾಗಿ ಹೇಗೆ ಯಾರೂ ಇಲ್ಲವೋ ಹಾಗೆಯೇ ಮೂಲಮನ್ತ್ರಕ್ಕಿಂತ ಶ್ರೇಷ್ಠವಾದ ಮನ್ತ್ರವಿಲ್ಲವು! ಓ ಪುತ್ರ ಶಿಷ್ಯರುಗಳಿರಾ! ಈ ರಹಸ್ಯವನ್ನು ನಿಮಗೆ ಹೇಳುವೆನು ಕೇಳಿ. ಈ ಮನ್ತ್ರವೇ ಸರ್ವ ವೇದಾಂತದ ಸಾರ ಭೂತಾರ್ಥವು, ಸಂಸಾರ ಸಾಗರವನ್ನು ದಾಟಿಸುವಂತಾದ್ದು; ಪುನರ್ಜನ್ಮ ಬೇಡವೆಂಬುವರಿಗೆ ಇದೇ ಮುಖ್ಯವಾದ ಉಪಾಯವು ಎಂದು ಶ್ಲಾಘಿಸಲ್ಪಟ್ಟಿರುತ್ತದೆ. ಹಾಗೆಯೇ " **ಐಹಲೌಕಿಕಮೈಶ್ವರ್ಯಂ ಸ್ವರ್ಗಾದ್ಯಂ ಪಾರಲೌಕಿಕಮ್। ಕೈವಲ್ಯಂ ಭಗವಂತಂ ಚ ಮನ್ತ್ರೋಯಂ ಸಾಧಯಿಷ್ಯತಿ। ಕಿಂ ತತ್ರ ಬಹು ಭಿರ್ಮನ್ತ್ರೈಃ ಕಿಂತತ್ರ ಬಹುಭಿರ್ವ್ರತೈಃ। ನಮೋ ನಾರಾಯಣಾಯೇತಿ ಮನ್ತ್ರಸ್ಸರ್ವಾರ್ಥಸಾಧಕಃ। ಋ ಚೋ ಯ ಜೂ ಂ ಷಿ ಸಾಮಾನಿ ತಥೈವಾಥರ್ವಣಾನಿಚ। ಸರ್ವ ಮಷ್ಟಾಕ್ಷರಾಂತಸ್ಥಂ ಯಚ್ಚಾನ್ಯದ ಪಿ ವಾಙ್ಮಯಮ್।** " ನಾಲ್ಕು ವಿಧ ಪುರುಷಾರ್ಥಗಳನ್ನೂ ಸಾಧಿಸಿ ಕೊಡುವ ಶಕ್ತಿಯು ಈ ಮನ್ತ್ರಕ್ಕೆ ಉಂಟೆಂದೂ, ಇತರ ಬಹುಮನ್ತ್ರಗಳಿಂದಲೂ ವ್ರತಗಳಿಂದಲೂ ಆಗತಕ್ಕದ್ದೇನು. ನಾಲ್ಕು ವೇದಗಳ ಸಾರ ಭೂತಾರ್ಥಗಳೆಲ್ಲವೂ ಈ ಮೂಲ ಮನ್ತ್ರದಲ್ಲಿ ತೋರಿಬರುವದರಿಂದ ಎಲ್ಲಾ ಅಧ್ಯಾತ್ಮೋಪದೇಶವೆಲ್ಲಾ ಈ ಮೂಲ ಮನ್ತ್ರದಲ್ಲೇ ಇವೆ. ಇನ್ನು ಮಿಕ್ಕವೆಲ್ಲಾ ಶುಷ್ಕ ಮಾತುಗಳೇ ಸರಿ. ಇಲ್ಲಿ **ನಮೋ ನಾರಾಯಣಾಯ** ಎಂದು ಪ್ರಣವವಿಲ್ಲದೆ ಮನ್ತ್ರವನ್ನು ಹೇಳಿರುವದು ಶೂದ್ರಾದಿ ಸರ್ವರಿಗೂ ಅಧಿಕಾರವುಂಟಾಗುವದಕ್ಕಾಗಿ ಎಂದು ತಿಳಿಯತಕ್ಕದ್ದು. ಮನ್ತ್ರವು **ಮನ್ತಾರಂ ತ್ರಾಯತಿ** ಎಂಬುದರಿಂದ ಒಂದು ಸಾಧನವು. ಉಪಾಯಾನುಷ್ಠಾನಕ್ಕೆ ಅದು ಉಪಾಸಕನನ್ನು ರಕ್ಷಿಸುವ ಒಂದು ಒಳ್ಳೆಯ ಸಾಧನವೆಂದು ಉಪದೇಶಿಸುವರ ಗುರುವು. ಆ ಉಪಾಯಾನುಷ್ಠಾನದಿಂದ ಪ್ರೀತನಾದ ಶ್ರೀಯಃಪತಿಯು ಪುರುಷಾರ್ಥಪ್ರದನು. ಆದುದರಿಂದ, **ಮನ್ತ್ರನಾಥಂ ಗುರುಂ ಮನ್ತ್ರಂ ಸಮತ್ವೇನಾನುಭಾವಯೇತ್** ಎಂದು ಹೇಳಲ್ಪಟ್ಟಿರುತ್ತದೆ, ಹಾಗೆಯೇ ' **ಮನ್ತ್ರೇತದ್ದೇವತಾಯಾಂಚ ತಥಾಮನ್ತ್ರಪ್ರದೇಗುರೌ। ತ್ರಿಷುಭಕ್ತಿಸ್ಸದಾಕಾರ್ಯಾಸಾಹಿ**

ಪ್ರಥಮ ಸಾಧನಮ್" ಎಂದು ಹೇಳಲ್ಪಟ್ಟಿರುತ್ತದೆ. ಈ ಮನ್ತ್ರಕ್ಕೆ ಬದರಿಕಾಶ್ರಮ ವಾಸಿ ಶ್ರೀಮನ್ನಾರಾಯಣನು ದೇವತಾ.

ನಮಃ ಎಂಬ ಪದವು ಓಂ ಎಂಬ ಪ್ರಣವ ಮತ್ತು **ನಾರಾಯಣಾಯ** ಎಂಬ ಪದಗಳ ಮಧ್ಯದಲ್ಲಿರುತ್ತದೆ. ಇದನ್ನು ಎರಡು ವಿಧವಾಗಿ ಅನ್ವಯಿಸಬಹುದು. (೧) ಸಖಂಡ **ಮಃನ** ಎಂಬದಾಗಿ (೨) ಅಖಂಡ **ನಮಸ್ಸಾಗಿ**. ಸಖಂಡವೆಂದು ಭಾವಿಸಿ **ಪುರತಃ ಈಕ್ಷಿತೇನ** ಮೊದಲು ಇರುವ ಪ್ರಣವದೊಡನೆ ಅನ್ವಯಿಸಿದರೆ, **ಪುನಃ ಸ್ವರೂಪಂ ಶಿಕ್ಷಿತಂ ಭವತಿ**- ಚೇತನನ ಸ್ವರೂಪವಾದ ಭಗವಚ್ಛೇಷತ್ವವು ಉಪದೇಶಿಸಲ್ಪಡುತ್ತದೆ. ಅದು ಹೇಗೆಂದರೆ? **ಮ್ ಅಯ್ಯೈವ, ಮಃನ**–ಜೀವಾತ್ಮನು ಪರಮಾತ್ಮನಿಗೇನೇ ಶೇಷಭೂತನು, ನನಗಲ್ಲವು; ಇದರಿಂದ **ಚೇತನನು** ಈಶ್ವರಾಧೀನನು, ಪರಮಾತ್ಮನೇ **ಸ್ವತಂತ್ರನೂ** ಎಂದೂ ಹೇಳಿದಂತಾಯಿತು. **ಯೋನ್ಯಥಾ ಸಂತ ಮಾತ್ಮಾನಂ ಯೋನ್ಯಥಾಪ್ರತಿಪದ್ಯತೇ। ಕಿಂತೇನ ನಕೃತಂ ಪಾಪಂ ಚೋರೇಣಾತ್ಮಪಹಾರಿಣಾ ॥** ಯಾವನು ಪರಮಾತ್ಮಾಧೀನನಾದ ಈ ಆತ್ಮವನ್ನು ಅನ್ಯಥಾವಾಗಿ ಭಾವಿಸಿ, ತಾನೇ ಸ್ವತಂತ್ರನೆಂದು ಭಾವಿಸುವನೋ ಅವನು ಪರಮ ಪುರುಷನ ಸ್ವತ್ತನ್ನು ಅಪಹರಿಸಿ ಚೋರ ಕೃತ್ಯವನ್ನು ಮಾಡಿರುವನಿಂದ ಯಾವ ಪಾಪವು ತಾನೇ ಮಾಡಲ್ಪಡದೇ ಇರುತ್ತದೆ. ಹಾಗೆಯೇ "**ಅನಾತ್ಮನ್ಯಾತ್ಮ ಬುದ್ಧಿರ್ಯಾ ಅಸ್ವೇಸ್ವಮಿತಿಯಾಮತಿಃ। ಅವಿದ್ಯಾತರುಸಂಭೂತಂ ಬೀಜ ಮೇತದ್ದ್ವಿಧಾಸ್ಥಿತಮ್**" ಜಡವಾದ ದೇಹವೇ ಆತ್ಮಾ ಎಂಬ ಬುದ್ಧಿಯು ಯಾವನಿಗೋ (ಚಾರ್ವಾಕ) ತನ್ನ ಸ್ವತ್ತಲ್ಲದೆ ಪರಮಾತ್ಮನ ಸ್ವತ್ತಾದ ತನ್ನ ಆತ್ಮಾ ತನ್ನದು ಎಂಬ ಬುದ್ಧಿಯು ಯಾವನಿಗೋ, ಎಂದರೆ ದೇಹಾತ್ಮ ಭ್ರಮವೇನು ಸ್ವತಂತ್ರಾತ್ಮ ಭ್ರಮವೇನು ಇವೆರಡೂ ಅಜ್ಞಾನವೆಂಬ ವೃಕ್ಷದಲ್ಲಿ ಉಂಟಾದ ಎರಡು ಬೀಜಗಳಾಗಿವೆ, ಎಂಬೀ ಪ್ರಮಾಣಗಳು ಅನುಸಂಧೇಯವು. ಅಥವಾ **ನಮಃ** ಎಂದರೆ **ನಮಮ** ಎಂದಾಗುತ್ತದೆ. ಇದಕ್ಕೆ ಅಹಂ ಎಂದು ಸೇರಿಸಿಕೊಂಡರೆ **ನಮಮಾಹಮ್** ಎಂದಾಗಿ ಸ್ವಶೇಷಿತ್ವನಿಷೇದವು ತೋರಿಬರುತ್ತದೆ.

ಅದೇ **ನಮಃ** ಎಂಬ ಪದವನ್ನು ಅಖಂಡವಾದುದೆಂದು ಭಾವಿಸಿದರೆ, ಶರಣಾಗತಿಗೆ ಆವಶ್ಯಕವಾದ ಪ್ರಣಾಮರೂಪವಾದ **ಉಪಾಯಾ** ನುಷ್ಠಾನವು ಬೋಧಿತವು. ಮಾರ್ಕಂಡೇಯರು ಪಾಂಡವರನ್ನು ಕುರಿತು, ಶ್ರೀ ಕೃಷ್ಣನು ಸಾಧಾರಣ ಮನುಷ್ಯನಲ್ಲವು; ಆತನು ವಿಷ್ಣ್ವವತಾರಿಯಾದುದರಿಂದ ಆತನಲ್ಲಿ ಶರಣಾಗತಿಯನ್ನು ಅನುಷ್ಠಿಸಿ ಎಂದು "**ಗಚ್ಛಧ್ವಮೇನಂ ಶರಣಂ ಶರಣ್ಯಂ ಪುರುಷರ್ಷಭಾಃ**" ಎಂದು ಹೇಳಿದುದರಿಂದ, "**ಏವಮುಕ್ತಾಃ ತೇ ಪಾರ್ಥಾ ಯಮೌಚ ಪುರುಷರ್ಷಭೌ। ದ್ರೌಪದ್ಯಾ ಸಹಿತಾಃ ಸರ್ವೇನಮಶ್ಚಕ್ರುರ್ಜನಾರ್ದನಮ್**" (ವನ. ಭಾರ. ೧೯೨. ೫೬೫೭) ಪೃಥುವಿನ ಪುತ್ರರಾದ ಧರ್ಮರಾಜ, ಭೀಮಾರ್ಜುನರೂ, ಅವಳಿ ಮಕ್ಕಳಾದ ನಕುಲ ಸಹದೇವರೂ ದ್ರೌಪದಿಯೊಂದಿಗೆ ಶ್ರೀಕೃಷ್ಣನಲ್ಲಿ

ನಮಶ್ಶಕ್ತ್ರೀಃ-ಶರಣಾಗತಿಯನ್ನು ಅನುಷ್ಠಿಸಿದರು. ಇಲ್ಲಿ ನಮಶ್ಶಬ್ದಕ್ಕೆ ಶರಣಾ ಗತಿಯಿಂದೇ ಅರ್ಥಮಾಡಬೇಕಾಗಿರುವದರಿಂದ **ನಮಶ್ಶಬ್ದವು ಉಪಾಯ** ವನ್ನು ಬೋಧಿಸುತ್ತದೆ ಎಂದು ಮೂಲದಲ್ಲಿ ಹೇಳಲ್ಪಟ್ಟಿತು. ಆದುದರಿಂದ, ಈ ಸಂದರ್ಭ ದಲ್ಲಿ **ಗತಿಃ** ಎಂದರೆ ಉಪಾಯವು **ಶಿಕ್ಷಿತಂ** - ಶಿಕ್ಷಿಸಲ್ಪಟ್ಟಿತು. ಇದರಿಂದಲೇ **ನಿಜರಕ್ಷಣಂ** - ತನ್ನ ರಕ್ಷಣವು ಪರಮಾತ್ಮನಿಗೆ ಸೇರಿದುದೇ ವಿನಾ ತನಗೆ ಸೇರಿದುದಲ್ಲ ವೆಂದು ಹೇಳುತ್ತಾರೆ.

ಸ್ಥಾನತಃ ಈಕ್ಷಿತೇನ ಅಖಂಡ ನಮೋನ್ವಿತೇನ ನಮಸಾ-ಸ ಖಂ ಡ ನಮಸ್ಸನಿಂದ, **ನಮೋ ಮಃನ, ನಮಃ ನ ಮಮ**– ಈ ರಕ್ಷಣೋಪಾಯವು ನನಗೆ ಸೇರಿದುದು ಅಲ್ಲವು. ಭಗವಂತನಿಗೇನೆ ಎಂಬರ್ಥವು ಉಂಟಾಗುತ್ತದೆ. ಈ ಅಭಿಪ್ರಾಯವು **"ಅಮೃತಸ್ಯೈಷ ಸೇತುಃ"** (ಮುಂ. ೨. ೨. ೫.) ಪರಮ ಪುರುಷನೇ ಸಂಸಾರವೆಂಬ ಆಚೇ ದಡದಲ್ಲಿರುವ ದಿವ್ಯ ವೈಕುಂಠಕ್ಕೆ ಸೇರಿಸುವ ಸೇತುವೆಯು ಎಂದರೆ ತನ್ನನ್ನು ಬಂದು ಸೇರಲು ತಾನೇ ಗತಿಯು ಉಪಾಯವು ಎಂಬ ಭಾವವು. ಹಾಗೆಯೇ **ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ ಜುಷ್ಟಸ್ತತಸ್ತೇನಾಮೃತತ್ವ ಮೇತಿ"** ಎಂಬ, **"ಸಂಸಾರಾರ್ಣವ ಮಗ್ನಾನಾಂ ವಿಷಯಾಕ್ರಾಂತ ಚೇತಸಾಂ। ವಿಷ್ಣುಪೋತಂ ವಿನಾ ನಾನ್ಯತ್ಕಿಂಚಿದಸ್ತಿ ಪರಾಯಣಮ್"** ಎಂಬ, **"ದೈವೀ ಹ್ಯೇಷಾ ಗುಣಮಯೀ ಮಮಮಾಯಾ ದುರತ್ಯಯಾ। ಮಾ ಮೇವ ಯೇ ಪ್ರಪದ್ಯನ್ತೇ ಮಾಯಾ ಮೇತಾಂ ತರನ್ತಿತೇ"** ಎಂಬ ಪ್ರಮಾಣಗಳು ಅನುಸಂಧೇಯಗಳು. **ಪರಾಯಣಂ** ಎಂಬಲ್ಲಿ ರುವ ಅಯನ ಶಬ್ದವು ಉಪಾಯವನ್ನು ಬೋಧಿಸುತ್ತದೆ. ಈ ಪದವು ನಾರಾಯಣಾಯ ಎಂಬಲ್ಲೂ ಇರುತ್ತದೆ. ಪ್ರಪದನವೇ ತನ್ನನ್ನು ಬಂದು ಸೇರಲು ಉಪಾಯವೆಂದು ಮಾರ್ಗವನ್ನು ಶ್ರೀ ಕೃಷ್ಣನು ತಿಳಿಸಿರುತ್ತಾನೆ. ಆದುದರಿಂದ **"ಯೇಚ ವೇದವಿದೋ ವಿಪ್ರಾಃಯೇ ಚಾಧ್ಯಾತ್ಮ ತಪೋಧನಾಃ। ತೇಂವದನ್ತಿ ಮಹಾತ್ಮಾನಂ ಕೃಷ್ಣಂಧರ್ಮಂ ಸನಾತನಮ್** ಇಲ್ಲಿ "ಧರ್ಮಂ" ಎಂಬ ಶಬ್ದದಿಂದ ಸ್ವಾಮಿಯೇ ಉಪಾಯನಾಗಿರುವ ಭಾವವು ಬೋಧಿತವು. ಯಾರು ವೇದವನ್ನು ತಿಳಿದ ವಿಪ್ರರೋ, ಯಾರು ಭಕ್ತಿಯೋಗ ಮೂಲಕ ಪರಮಾತ್ಮನನ್ನು ಉಪಾಸಿಸುತ್ತಾರೋ, ಅವರೆಲ್ಲಾ ಸನಾತನನಾದ ಕೃಷ್ಣನೇ ಮಾರ್ಗದರ್ಶಿಯಾದ ಸಿದ್ಧೋಪಾಯನೆಂದು ಹೇಳುವರು ಎಂಬರ್ಥವು. **"ಸಕೃದೇವ ಪ್ರಪನ್ನಾಯ"** ಎಂಬ ಶ್ಲೋಕದಲ್ಲೂ ಶರಣಾಗತಿಯೇ ಉಪಾಯವೆಂದು ತಾನೇ ಮಾರ್ಗವನ್ನು ತೋರಿಸಿರುತ್ತಾನೆ. **"ಸಂಸಾರ ಸಾಗರಂ ಘೋರ ಮನಂತ ಕ್ಲೇಶ ಭಾಜನಮ್। ತ್ವಾಮೇವ ಶರಣಂ ಪ್ರಾಪ್ಯ ನಿಸ್ತರಂತಿ ಮನೀಷಿಣಃ"** ಇಲ್ಲಿ **ಶರಣಂ** ಎಂದರೆ ಉಪಾಯವು, ಹಾಗೆಯೇ ಭಾಗವತದಲ್ಲಿ **"ಸಂಸಾರ ಸಿಂಧು ಮತಿದುಸ್ತರ ಮುತ್ತಿತೀರ್ಷೋಃ ನಾನ್ಯಃ ಪ್ಲವೋ ಭಗವತಃ ಪುರುಷೋತ್ತ**

ಮಸ್ಯ" (ಭಾಗ ೧೨. ೪. ೩೯.) ಸಂಸಾರ ಸಮುದ್ರವನ್ನು ದಾಟುವದಕ್ಕೆ ಪುರುಷೋತ್ತಮನಲ್ಲದೆ ಬೇರೆ ದೋಣಿಯು ಇಲ್ಲವೆಂದು ಹೇಳಲ್ಪಟ್ಟಿರುತ್ತದೆ. "**ದಿಷ್ಟ್ಯಾಸೋ ಭಗವಾನ್ ದೃಷ್ಟೋ ಮಗ್ನಾನಾಂ ವ್ಯಸನಾರ್ಣವೇ। ಕರ್ಣಧಾರ ಇವಾಪಾರೇ ಭಗವಾನ್ ಪಾರದರ್ಶಿನಃ**" ಈ ಶ್ಲೋಕದಲ್ಲಿ ವ್ಯಸನ ಸಮುದ್ರದಲ್ಲಿ ಮುಳುಗಿರುವವರನ್ನು ಎತ್ತಿ ಆಚೆ ದಡಕ್ಕೆ ಕರೆದುಕೊಂಡು ಹೋಗುವ ನಾವಿಕನು ಭಗವಂತನೇ ಎಂದು ಹೇಳಲ್ಪಟ್ಟಿರುತ್ತದೆ. ಹೀಗೆ ಸಾವಿರಾರು ಮಹರ್ಷಿ ದಿವ್ಯ ಸೂಕ್ತಿಗಳುಂಟು. ಸ್ವಾಮಿಯ **ಪಾದಾರವಿಂದ**ವನ್ನು **ಭವಸಿಂಧು ಪೋತ**ವೆಂದು ಅನೇಕ ಕಡೆಗಳಲ್ಲಿ ವರ್ಣಿಸಿರುತ್ತಾರೆ.

ಪಶ್ಚಾದೀಕ್ಷಿತೇನ ನಮಸಾ - ಕಾಕಾಕ್ಷಿ ನ್ಯಾಯದ ಪ್ರಕಾರ **ನಮಃ** ಎಂಬುವುದನ್ನು ಮುಂದಿನ ಪದವಾದ **ನಾರಾಯಣಾಯ** ಎಂಬುದರೊಂದಿಗೆ ಸೇರಿಸಿ ಅನ್ವಯಿಸುವುದರಿಂದ, **ಗಮ್ಯಂ** ಎಂದರೆ ಪ್ರಾಪ್ಯವು, ಶಿಕ್ಷಿತವು ಎಂದು ಹೇಳುತ್ತಾರೆ. ಈ ಸಂದರ್ಭದಲ್ಲಿ **ನಮುಸ್ಸು** ಸಖಂಡವು, ಪ್ರಾಪ್ಯಾರ್ಥ ಹೇಗೆಂದರೆ? ಸರ್ವಶೇಷಿಯಾದ ಶ್ರೀಮನ್ನಾರಾಯಣನಿಗೆ ಸರ್ವವಿಧ ಕೈಂಕರ್ಯಗಳನ್ನೂ ಮಾಡುವೆನು; ಅವು ನನಗಾಗಿ ಅಲ್ಲವು. **ನಾರಾಯಣಾಯ** (ಸರ್ವ ಕೈಂಕರ್ಯಾಣಿ) ಮಃನ ಎಂದರೆ **ಮಮನ** ನನಗಲ್ಲವು. ಕೈಂಕರ್ಯಾರ್ಥವು ಎಲ್ಲಿಂದ ಬಂತು? ಎಂದರೆ ನಾರಾಯಣ ಶಬ್ದದ **ಚತುರ್ಥಿ**ಯಿಂದ ತೋರಿಬರುತ್ತದೆ. ಈ ವಿಷಯದಲ್ಲಿ ತೈತ್ತರೀಯವು. "**ಬ್ರಹ್ಮವಿದಾಪ್ನೋತಿ ಪರಮ್**" ಪರಬ್ರಹ್ಮವನ್ನು ಉಪಾಸಿದವನು ತತ್ಕ್ರತು ನ್ಯಾಯದ ಪ್ರಕಾರ ಎಲ್ಲರಿಗಿಂತಲೂ ಶ್ರೇಷ್ಠನಾದ ಪರಬ್ರಹ್ಮನನ್ನೇ ಹೊಂದುವನು; "**ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತೇತಿ**" ಪರಬ್ರಹ್ಮನಿಗೆ ಸರ್ವವಿಧ ಕೈಂಕರ್ಯಗಳನ್ನೆಸಗುತ್ತಾ ಪ್ರಕಾರ ಪ್ರಕಾರಿ ಭಾವದಿಂದ ಅವನೊಂದಿಗೆ ಏಕೀಭವಿಸಿ ಆತನ ಕಲ್ಯಾಣ ಗುಣಗಳನ್ನೆಲ್ಲಾ ಅನುಭವಿಸುವನು. ಏಕೀಭಾವ ಹೇಗೆ ಎಂದರೆ ಈ ಮುಕ್ತನು ಪರಬ್ರಹ್ಮನಿಗೆ ಶರೀರವು, ಆತನು ಆತ್ಮಾ ಹೀಗೆ ಒಟ್ಟಿಗೆ ಸೇರಿ ಸಾಮಾನಾಧಿಕಾರಣ್ಯದಲ್ಲಿ ಅಹಂ ಬ್ರಹ್ಮಾಸ್ಮಿ ಎಂದು ತಿಳಿದು ಆನಂದಿಸಿ ಆತನಿಗೆ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಕೈಂಕರ್ಯಗಳನ್ನೆಲ್ಲಾ ಎಸಗುವನು. ಈ ಅಭಿಪ್ರಾಯವೇ ಶ್ರೀಮದ್ರಾಮಾಯಣದಲ್ಲಿ ಲಕ್ಷ್ಮಣ ವಾಕ್ಯದಲ್ಲಿ ವಿದಿತವು. "**ಭವಾಂಸ್ತು ಸಹ ವೈದೇಹ್ಯಾ ಗಿರಿ ಸಾನುಷು ರಂಸ್ಯತೇ। ಅಹಂ ಸರ್ವಂಕರಿಷ್ಯಾಮಿ ಜಾಗ್ರತ ಸ್ಸ್ವಪತಶ್ಚತೇ**" ಎಂಬುದು ಅನುಸಂಧೇಯವು. ಹೀಗೆ ಸ್ವರೂಪವೂ, ಉಪಾಯವೂ, ಪುರುಷಾರ್ಥಗಳು ಶಿಕ್ಷಿತವೆಂದು ತಿಳಿಸುವುದಕ್ಕಾಗಿ **ಸ್ವರೂಪಂ ಗತಿ ರ್ಗಮ್ಯಂ** ಎಂದು ಮೂಲದಲ್ಲಿ ಪ್ರಯೋಗಗಳು.

ನಮುಶ್ಶಬ್ದಕ್ಕೆ ಮೂರು ವಿಧ ಯೋಜನೆಯು ಹೇಳಲ್ಪಟ್ಟಿರುವದು. ೧. ಸ್ಥೂಲ, ೨. ಸೂಕ್ಷ್ಮ, ೩. ಪರವೆಂಬದಾಗಿ; ೧. ಸ್ಥೂಲ ಯೋಜನೆಯಲ್ಲಿ **ಗತಿ** ಯಾದ ಎಂದರೆ ಉಪಾಯವಾದ ಸಪರಿಕರ ಪ್ರಪದನವು ಶಿಕ್ಷಿತವು ೨. ಸೂಕ್ಷ್ಮ

ಯೋಜನೆಯಲ್ಲಿ ಸಖಂಡ ಸಮಸ್ತೆಂದು ಭಾವಿಸಿ, **ಮಮನ** ಎಂದು ಮೇಲೆ ಹೇಳಿದ ಹಾಗೆ ನಾನೂ, ನನಗೆ ಸಂಬಂಧಿಸಿದ ವಸ್ತುಗಳು ಯಾವುವೂ, ನನ್ನದಲ್ಲವು. ನಾನು ಸ್ವತಂತ್ರನಲ್ಲವು. ಇದರಿಂದ ಅಹಂಕಾರ ಮಮಕಾರಗಳು ನನಗಿಲ್ಲವು. ೩. **ಪರಯೋಜನೆಯಲ್ಲಿ** ನ, ಮ, ವಿಸರ್ಗವಿರುವದರಿಂದ **ನ** ಕಾರವು ಮಾರ್ಗ ವನ್ನೂ, **ಮ** ಎಂಬುದು ಮುಖ್ಯವಾದುದನ್ನೂ, ವಿಸರ್ಗವು ಸರ್ವೇಶ್ವರನನ್ನೂ ಬೋಧಿಸುತ್ತದೆ. ಮುಖ್ಯ ಸಿದ್ಧೋಪಾಯನು, ಶ್ರೀಯಃಪತಿಯು, ಆತನೇ ಪ್ರಾಪಕನೂ, ಪ್ರಾಪ್ಯನೂ ಎಂಬರ್ಥಗಳುಂಟಾಗುತ್ತವೆ.

ಹೀಗೆ ತಿಳಿಯುವದರಿಂದುಂಟಾಗುವ ಪ್ರಯೋಜನವನ್ನು ಉತ್ತರಾರ್ಧದಿಂದ ತಿಳಿಸುತ್ತಾರೆ. **ಸ್ವಾತಂತ್ರ್ಯಂ ತಸ್ಯೈವಹರೇಃ ಉಚಿತಂ ಅನ್ಯೋಚಿತಂ ನ** - ಸ್ವಾತಂತ್ರ್ಯವು ಆ ಹರಿಗೇನೇ ವಿನಾ, ಇತರರಾದ ಬ್ರಹ್ಮ ರುಂದ್ರೇಂದ್ರಾದಿ ದೇವತೆಗಳಿಗೂ ಮನುಷ್ಯರಿಗೂ ಉಚಿತವಲ್ಲವು. **ಹರತೀತಿ ಹರಿಃ** ಎಂಬ ವ್ಯುತ್ಪತ್ತಿ ಮೂಲಕ ಎಲ್ಲವೂ ತನ್ನ ಭೋಗಾರ್ಥವಾಗಿಯೇ ಎಂದು ಅಪಹರಿಸುವನು ಅಥವಾ ವಶಮಾಡಿಕೊಳ್ಳುವನು. ಅದುದರಿಂದ ಆತನೇ ಸ್ವತಂತ್ರನು. ನಾವೆಲ್ಲಾ ಆತನಿಗೆ ಅಧೀನರಾಗಿರುವುದರಿಂದ ಅಸ್ವತಂತ್ರರು. "**ಸರ್ವಸ್ಯವಶೀ**" "**ಸರ್ವಸ್ಯೇಶಾನಃ**" ಎಂಬ ಶ್ರುತಿ ಪ್ರಯೋಗಗಳು ಆತನು ಸರ್ವಸ್ವತಂತ್ರನೆಂದು ಬೋಧಿಸುತ್ತವೆ. "**ಸೋಕ್ಷರಃ ಪರಮ ಸ್ಸ್ವರಾಟ್**" - ಸ್ವರೂಪ ಸ್ವಭಾವಾದಿ ವಿಕಾರ ರಹಿತನು, ಆತನಿಗೆ ಸಮರೂ ಅಧಿಕರೂ ಇಲ್ಲದವನು; ಕರ್ಮಗಳಿಗೆ ವಶನಲ್ಲವು. "**ನತಸ್ಯೇಶೇ ಕಶ್ಚನ, ತಸ್ಯ ನಾಮ ಮಹದ್ಯಶಃ**" (ತೈಅಂಭಸಿ ೯) ಆತನಿಗೆ ನಿಯಾಮಕನು ಯಾರೂ ಇಲ್ಲವು. ಆತನಿಗೇ, ಸಮಸ್ತದ ಸೃಷ್ಟಿ ಸ್ಥಿತಿ ರಕ್ಷಣೆ ಲಯ ಮೊದಲಾದವುಗಳಿಗೆ ಕಾರಣನೆಂಬ ಮಹತ್ತಾದ ಪ್ರಸಿದ್ಧಿಯು, ಹಾಗೆಯೇ "**ಯ ಸ್ಮಾತ್ಪರಂ ನಾ ಪರ ಮಸ್ತಿ ಕಿಂಚಿದ್ಯ ಸ್ಮಾನ್ನಾಣೀ ಯೋ ನಜ್ಯಾಯೋಸ್ತಿ ಕಶ್ಚಿತ್**" (ಶ್ವೇ. ೩. ೯.) ಪರಬ್ರಹ್ಮನಿಗಿಂತ ಇನ್ನು ಯಾವ ಉತ್ಕೃಷ್ಟನೂ ಇಲ್ಲವು; ಅವನಿಗಿಂತ ಸೂಕ್ಷ್ಮವಾದುದೂ ಇಲ್ಲವು; ಬೃಹತ್ತಾದುದೂ ಇಲ್ಲವು ಎಂದು ಹೇಳಲ್ಪಟ್ಟಿರುತ್ತದೆ. ಎಲ್ಲಿವೂ ಆತನಿಗೆ ಶರೀರವಾಗಿ ಎಲ್ಲಕ್ಕೂ ತಾನು ಆತ್ಮಾವಾಗಿ ನಿಯಾಮಕನಾಗಿದ್ದಾನೆಂಬ ಭಾವವು. ಶ್ವೇತಾಶತ್ವರದ ಇನ್ನೊಂದು ಕಡೆಯಲ್ಲಿ (೬-೭) **ತಮೀಶ್ವರಾಣಾಂ ಪರಮಂ ಮಹೇಶ್ವರಂ। ತಂ ದೇವತಾನಾಂ ಪರಮಂಚ ದೈವತಮ್। ಪತಿಂ ಪತೀನಾಂ ಪರಮಂ ಪರಸ್ತಾತ್**" ಎಲ್ಲಾ ನಿಯಾಮಕರಿಗೂ ಪರಬ್ರಹ್ಮನು ಸರ್ವೋತ್ಕೃಷ್ಟ ನಿಯಾಮಕ ನೆಂದೂ, ಎಲ್ಲಾ ಕರ್ಮಗಳಿಂದ ಆರಾಧಿಸಲ್ಪಡುವ ದೇವತೆಗಳಿಗಿಂತ ಸರ್ವೋತ್ಕೃಷ್ಟ ನಾದ ಸರ್ವ ಕರ್ಮಾರಾಧ್ಯನು; ಎಲ್ಲಾ ಸ್ವಾಮಿಗಳೆಂದು ಹೇಳಿಸಿಕೊಳ್ಳುವ ರಾಜರು ಗಳಿಗೂ, ಬ್ರಹ್ಮರುಂದ್ರೇಂದ್ರಾದಿ ಸಮಸ್ತರಿಗೂ ಸರ್ವೋತ್ಕೃಷ್ಟ ಸ್ವಾಮಿಯು ಎಂದು ಹೇಳಲ್ಪಟ್ಟರುತ್ತದೆ. ಇನ್ನೊಂದು ಕಡೆಯಲ್ಲಿ "**ರುದ್ರಂ ಸಮಾಶ್ರಿತಾ**

ದೇವಾ ರುದ್ರೋ ಬ್ರಹ್ಮಾಣ ಮಾಶ್ರಿತಃ ॥ ಬ್ರಹ್ಮಾ ಮಮಾಶ್ರಿತೋ ರಾಜನ್ ನಾಹಂ ಕಂಚಿದು ಪಾಶ್ರಿತಃ" ಅರ್ಥವು ಸ್ಪಷ್ಟವು. ಇತ್ಯಾದ್ಯನೇಕ ಪ್ರಮಾಣ ಗಳು, ಸ್ವಾತಂತ್ರ್ಯವು ಪರಮ ಪುರುಷನಿಗೇ ಉಚಿತವೇ ವಿನಾ ಇನ್ಯಾರಿಗೂ ಇಲ್ಲವೆಂದು **" ನಾನ್ಯೋಚಿತಾ ತಸ್ಸ್ಯೈವೇತಿ ಹರೇಃ "** ಎಂದು ಹೇಳಲ್ಪಟ್ಟಿತು. ಹಾಗೆಯೇ **ನಿಜರಕ್ಷಣಂ** - ತನ್ನ ರಕ್ಷಣವು ಶ್ರೀ ಹರಿಗೆ ಸೇರಿದುದೇ ವಿನಾ ಇತರರಿ ಗಿಲ್ಲವೆಂದು ಈ **ನಮಶ್ಶಬ್ದ**ವು ತಿಳಿಸುತ್ತದೆಂದು ಹೇಳಿರುತ್ತಾರೆ. ಹೇಗೆಂದರೆ ನಿಜರಕ್ಷಣೆಯು **ಮಃ** ಎಂದರೆ ಮಮ ನನಗೆ ನ - ಇಲ್ಲವು ಶ್ರೀ ಹರಿಗೇನೇ ಅದೂ ಉಚಿತವು. **ಹರಿರ್ಹರತಿ ಪಾಪಾನಿ** ಎಂಬಲ್ಲಿ ಹೇಳಿರುವ ಹಾಗೆ ಮೋಕ್ಷವನ್ನು ಹೊಂದುವದಕ್ಕೆ ಸರ್ವ ಪಾಪಗಳ ವಿನಾಶವು ಆವಶ್ಯಕವು. ಅವನ್ನು ಶ್ರೀ ಹರಿಯೇ **" ಅಹಂತ್ವಾ ಸರ್ವಪಾಪೇ ಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ "** ಎಂದು ಹೇಳಲು, ಶಕ್ತಿಯುಳ್ಳವನೇ ವಿನಾ ಮಿಕ್ಕವರೆಲ್ಲಾ ಅ ಶ ಕ್ತ ರಾ ದು ದ ರಿಂ ದ **' ಯತೋವಾ ಇಮಾನಿ ಭೂತಾನಿ "** ಎಂಬ ತೈತ್ತರೀಯ ಭೃಗುವಲ್ಲಿ ವಾಕ್ಯ ದಲ್ಲಿ **" ಯೇನ ಜಾತಾನಿ ಜೀವಂತಿ "** ಯಾವನಿಂದ ಹುಟ್ಟಿದ ಭೂತಗಳು ಸತ್ತೆಯನ್ನು ಹೊಂದುತ್ತವೆಯೋ ಎಂದು ಹೇಳಿ **ಯತ್ಪ್ರಯನ್ತಿ** ಎಂಬುದರಿಂದ ಮೋಕ್ಷ ಪ್ರಾಪಕತ್ವವೂ ಪರಬ್ರಹ್ಮನಿಗೆ ಹೇಳಲ್ಪಟ್ಟಿರುತ್ತದೆ. **" ನಹಿ ಪಾಲನ ಸಾಮರ್ಥ್ಯ ಮೃತೇ ಸರ್ವೇಶ್ವರಂ ಹರಿಮ್ "** ರಕ್ಷಿಸುವ ಶಕ್ತಿಯು ಶ್ರೀ ಹರಿಗೆ ಮಾತ್ರವೇ ವಿನಾ ಇನ್ನು ಯಾರಿಗೂ ಇಲ್ಲವೆಂದು ಹೇಳಲ್ಪಟ್ಟಿರುತ್ತದೆ. ಪ್ರಹ್ಲಾದ, ಅಂಬರೀಷ, ಅರ್ಜುನಾದಿಗಳೆಲ್ಲಾ ಇದಕ್ಕೆ ನಿದರ್ಶನವು. **" ಬಹ್ಮಾ ಸ್ವಯಂ ಭೂ ಶ್ಚತುರಾನನೋವಾ "** (ರಾಮ - ಸುಂದರ) ಎಂಬಲ್ಲಿ ಬ್ರಹ್ಮರುದ್ರೇಂದ್ರಾದಿಗಳು ರಕ್ಷಿಸಲು ಯೋಗ್ಯರಲ್ಲವೆಂದು ಹೇಳಲ್ಪಟ್ಟಿರುತ್ತದೆ. ಹಾಗೆಯೇ **" ಲಕ್ಷ್ಮ್ಯಾ ಸಹ ಹೃಷೀಕೇಶೋ ದೇವ್ಯಾ ಕಾರುಣ್ಯ ರೂಪಾಯ । ರಕ್ಷಕ ಸ್ಸರ್ವ ಸಿದ್ಧಾನ್ತೇ ವೇದಾನ್ತೇಷು ಗೀಯತೇ ॥"** ಹೀಗೆ ರಕ್ಷಿಸುವಾಗ ಲಕ್ಷ್ಮಿಯೊಂದಿಗೆ ಸೇರಿಯೇ ಪ್ರೇರಿತನಾದ ಪರಮಾತ್ಮನು ರಕ್ಷಿಸುವನೆಂದು ಎಲ್ಲಾ ಶಾಸ್ತ್ರದಲ್ಲೂ ವೇದಾಂತದಲ್ಲೂ ಹೇಳಲ್ಪಟ್ಟಿರುತ್ತದೆ ಎಂದು ಬೋಧಿತವು; ಲಕ್ಷ್ಮಿಯು ಎಂತವಳೆಂದರೆ, ಪರಮ ಪುರುಷನೊಂದಿಗೆ ಸದಾ ಸೇರಿರುವಳಾಗಿ ಕಾರುಣ್ಯ ರೂಪಿಯು. ಈ ಪ್ರಮಾಣದಿಂದ ಲಕ್ಷ್ಮಿಯು ಕೂಡ ಪತಿಗೆ ಸಹಾಯಕಳಾಗಿ ಉಪಾಯ ಭೂತಳೂ ಮತ್ತು ರಕ್ಷಕಳೂ ಎಂಬುದು ವ್ಯಕ್ತವು. ಮಹರ್ಷಿಯೂ **" ಅಲ ಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್ "** ಎಂಬ ತ್ರಿಜಟಾ ವಾಕ್ಯದ ಮೂಲಕ ಈ ಅಂಶವನ್ನು ಉಪದೇಶಿಸುತ್ತಾರೆ. ಹೀಗೆ ರಕ್ಷಣದಲ್ಲಿ ಲಕ್ಷ್ಮಿಗೆ ಅನ್ವಯವಿರುವುದರಿಂದಲೇ ಬ್ರಾಹ್ಮ ಪುರಾಣದಲ್ಲಿ **ಸರ್ವಾರ್ತಿ ಪ ರಿ ಶೋ ಷ ಣೀ** ಎಂಬ, ಸಾತ್ವದಲ್ಲಿ **"ಯಾಮಾಲಂಬ್ಯ ಸುಖೇ ನೇಮಂ ದುಸ್ತರಂ ಹಿ ಗುಣೋದಧಿಂ। ನಿಸ್ತರಂತಿ"** ಎಂಬ, ವಿಷ್ಣು ಪುರಾಣದಲ್ಲಿ **" ವಿಮುಕ್ತಿ ಫಲದಾಯಿನೀ "** ಎಂಬ, ಪ್ರಯೋಗ

ಗಳಿವೆ. **ಸಮುಚಿತಾವೃತ್ತಿಶ್ಚ** - ಜೀವಾತ್ಮನಾದ ತನ್ನ ಸ್ವರೂಪಕ್ಕೆ ಅನುಗುಣವಾದ ವ್ಯಾಪಾರವು, ಯಾವುದೆಂದರೆ ಶೇಷ ವೃತ್ತಿಯು; ಕೈಂಕರ್ಯವು. ಸರ್ವಶೇಷಿಗಳಾದ ಲಕ್ಷ್ಮೀನಾರಾಯಣನಿಗೇ ಇಲ್ಲಿ ತಾನು ಮಾಡುವ ಸರ್ವಸದ್ವ್ಯಾಪಾರವು. ಮೋಕ್ಷಾರ್ಥಿಯಾಗಿ ಪ್ರಪನ್ನನಾಗಿರುವ ತನಗೆ ಯೋಗ್ಯವಾದ ಸರ್ವವಿಧ ಉತ್ತರ ಕೃತ್ಯಗಳೂ, ನಿತ್ಯ ನೈಮಿತ್ತಿಕಾನುಷ್ಠಾನಗಳೂ, ಭಗವದ್ಭಾಗವತ ಕೈಂಕರ್ಯಗಳೂ, ಲೋಕೋಪಕಾರಕಗಳಾದ ಸರ್ವವ್ಯಾಪಾರಗಳೂ, "**ಪತಿಂ ವಿಶ್ವಸ್ಯ**" ಎಂಬಲ್ಲಿ ತೋರಿಬರುವ ಸರ್ವಶೇಷಿಯಾದ ಶ್ರೀಮನ್ನಾರಾಯಣನಿಗೇ ಎಂಬ ಭಾವವು. "**ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್ । ಯತ್ತಪಸ್ಯಸಿ ಕೌನ್ತೇಯ ತತ್ಕುರುಷ್ವ ಮದರ್ಪಣಮ್**" ಎಂಬಲ್ಲಿ ಹೇಳಿರುವ ಹಾಗೆ ಸರ್ವ ಸಾತ್ವಿಕ ಪ್ರವೃತ್ತಿಯೂ, ಶ್ರೀ ಕೃಷ್ಣನಿಗೇ ಯೋಗ್ಯವಾದವೆಂಬ ಭಾವವು. "**ಸರ್ವೇಷು ದೇಶ ಕಾಲೇಷು ಸರ್ವಾವಸ್ಥಾಸು ಚಾಚ್ಯುತ । ಕಿಂಕರೋಸ್ಮಿ ಹೃಷೀಕೇಶ ಭೂಯೋ ಭೂಯೋ ಸ್ಮಿ ಕಿಂಕರಃ**" ಎಂಬ ಜಿತನ್ತಾ ಸ್ತೋತ್ರ ಶ್ಲೋಕವು ಅನುಸಂಧೇಯವು. ಮೋಕ್ಷ ದೆಶೆಯಲ್ಲೂ ಕೂಡ ಹೀಗೆ ಕೈಂಕರ್ಯಪನ್ನನಾಗುವದೇ **ಕಿಂಕರತ್ವಾಧಿ ರಾಜ್ಯಂ** ಎಂಬಲ್ಲಿ ಮುಕ್ತೈಶ್ವರ್ಯವೆಂದು ಕೊಂಡಾಡಲ್ಪಟ್ಟಿರುತ್ತದೆ. ಈ ಅಭಿಪ್ರಾಯವು, ನಮುಶ್ಶಬ್ದವನ್ನು ತೃತೀಯ ಪದದೊಂದಿಗೆ ಅನ್ವಯಿಸಿದರೆ, **ಚತುರ್ಥಿಯಿಂದ** ವ್ಯಕ್ತಪಡುತ್ತದೆ. ಈ ಸ್ವಾತಂತ್ರ್ಯವೂ, ನಿಜ ರಕ್ಷಣವೂ, ಸಮುಚಿತ ವೃತ್ತಿಯೂ ಇವು ಮೂರೂ ಸಖಂಡನಮುಸ್ಸಿನಿಂದ, **ಮಃನ** ಎಂದರೆ **ಮಮನ** ಎಂಬುದರಿಂದ ತೋರಿ ಬರುತ್ತದೆ. ಇವು ಮೂರೂ ಪರಮ ಪುರುಷನಾದ ಶ್ರಿಯಃ ಪತಿಗೆ ಸೇರಿದುದೇ ವಿನಾ ತನಗಲ್ಲವು ಎಂಬರ್ಥವು ತೋರಿಬರುವದರಿಂದ ಎಂಬ ಭಾವವು. ಇದರಿಂದ ಅಹಂಕಾರ ಮಮಕಾರಗಳ ನಿವೃತ್ತಿಯು ಶಿಕ್ಷಿತವು. ಆದುದರಿಂದ ಇವು ಮೂರೂ "**ಹರೇ ರ್ವಿವಿಚ್ಯ ಕಥಿತಂ**" ಹರಿಗೇನೆ ಉಚಿತವೇ ವಿನಾ "**ನಾನ್ಯೋಚಿತಾ**" ಎಂದು ವಿವೇಕಿಸಿ ಹೇಳಲ್ಪಟ್ಟಿತು. **ತತಃ** - ಆ ಕಾರಣದಿಂದ, **ಸ್ವಸ್ಯಾಪಿನಾರ್ಹಂ** - ತನಗೂ ಅವು ಉಚಿತವಾದವಲ್ಲವು. **ಶ್ರಿಯಃ ಪತಿರೇವ (೧) ಸ್ವತಂತ್ರಃ (೨) ರಕ್ಷಕಃ (೩) ಸರ್ವ ಸಮುಚಿತಾ ವೃತ್ತ್ಯರ್ಹಃ ಇತ್ಯರ್ಥಃ.**

"**ದ್ವ್ಯಕ್ಷರಸ್ತು ಭವೇನ್ಮೃತ್ಯುಃ ತ್ರ್ಯಕ್ಷರಂ ಬ್ರಹ್ಮಣಃ ಪದಮ್ । ಮಮೇತಿ ದ್ವ್ಯಕ್ಷರೋ ಮೃತ್ಯುಃ ನಮಮೇತಿ ಚ ಶಾಶ್ವತಮ್**" ಎಂಬುದು ಅನುಸಂಧೇಯವು. ಹೀಗೆ ನಮುಶ್ಶಬ್ದವು ಅಖಂಡವೆಂದು ಭಾವಿಸುವುದರಿಂದ ಪ್ರಣವಬೋಧಿತವಾಗಿ ತಾನು ಪರಮಾತ್ಮನಿಗೆ ಶೇಷಭೂತನೆಂದಾಗುವದರಿಂದ ಅಹಂಕಾರ ನಿವೃತ್ತಿಯೂ, ಸಖಂಡವೆಂದು ಭಾವಿಸುವದರಿಂದ **ಮಃ** ನನಗೆ **ನ** ಅಲ್ಲವು ಎಂಬುದರಿಂದ ಮಮಕಾರ ನಿವೃತ್ತಿಯೂ ಬೋಧಿತವು. ಇದರಿಂದ

ಮೂ. **ಅಕಾರಾರ್ಥಾಯೈವ ಸ್ವಮಹ ಮಥ ಮಹ್ಯಂ ನ ನಿವಹಾ**
ನ ರಾಣಾಂ ನಿತ್ಯಾನಾ ಮಯನ ಮಿತಿ ನಾರಾಯಣ ಪದಮ್ ।
ಯಮಾಹಾಸ್ಮೈ ಕಾಲಂ ಸಕಲ ಮಪಿ ಸರ್ವತ್ರ ಸಕಲಾ
ಸ್ವವಸ್ಥಾ ಸ್ವಾಸ್ಸ್ಯು ರ್ಮಮ ಸಹಜ ಕೈಙ್ಕರ್ಯ ವಿಧಯಃ ॥ ೩ ॥

ತನ್ನ ಅನನ್ಯಾರ್ಹ ಶೇಷತ್ವವೂ, ಅನನ್ಯಶರಣತ್ವವೂ, ಅನನ್ಯ ಭೋಗ್ಯತ್ವವೂ ಸ್ಥಾಪಿತವು.

ಹಿಂದಿನ ಎರಡು ಶ್ಲೋಕಗಳಿಂದ ಪ್ರಣವ ನಮಸ್ಸುಗಳ ಅರ್ಥಗಳನ್ನು ತಿಳಿಸಿ ಅವುಗಳ ಅನುಸಂಧಾನದಿಂದ ಅರ್ಥಾನುವಾದ ಪೂರ್ವಕವಾಗಿ ಮೂರನೆಯ ಪದವಾದ **ನಾರಾಯಣಾಯ** ಎಂಬುದರ ಅರ್ಥವನ್ನು ಉಪಪಾದಿಸುತ್ತಾರೆ. ಸಙ್ಗ್ರಹವಾಗಿ ಪೂರ್ವಾರ್ಧದಲ್ಲಿ ಪ್ರಣವ ನಮಸ್ಸು ನಾರಾಯಣ ಪದಗಳ ಅರ್ಥವನ್ನು ಉಪಪಾದಿಸಿ ಉತ್ತರಾರ್ಧದಲ್ಲಿ ನಾರಾಯಣಾಯ ಎಂಬಲ್ಲಿರುವ ವ್ಯಕ್ತ ಚತುರ್ಥ್ಯರ್ಥವನ್ನು ಉಪದೇಶಿಸುತ್ತಾರೆ.

ಅರ್ಥವು :—ಮೊದಲು ಪ್ರಣವದ ಪ್ರಧಾನಾರ್ಥವನ್ನು ಅನುವಾದರೂಪದಲ್ಲಿ ಹೇಳುತ್ತಾರೆ. **ಅಹಂ** - ನಾನು, **ಅಕಾರಾರ್ಥಾಯೈವ** - ಅಕಾರ ವಾಚ್ಯನಾದ ವಿಷ್ಣುವಿಗೋಸ್ಕರವಾಗಿಯೇ ಇರುವ **ಸ್ವಂ - ಸ್ವತ್ತು** - ಎಂದರೆ ಆತನಿಗೇನೇ ಶೇಷ ಭೂತನು; **ಏವ** ಎಂಬ ಅವಧಾರಣದಿಂದ ಅನ್ಯದೇವತಾದಿ ಇನ್ನು ಯಾರಿಗೂ ಶೇಷನಲ್ಲವು. ತನ್ನ ಸ್ವಾಮಿಯಾದ ಶ್ರಿಯಃಪತಿಗಲ್ಲದೆ ಇನ್ನು ಯಾರಿಗೂ ಶೇಷನಲ್ಲವು. ಇದು ಪ್ರಣವಾರ್ಥವು. **ಅಥ** - ಅನಂತರ ಎರಡನೆಯ ಪದದಿಂದ **ಅಹಂ** - ನಾನು, **ಮಹ್ಯಂನ** - ನನಗೋಸ್ಕರವಾಗಿ ಅಲ್ಲವು, ನಾನು ನನಗೇ ಶೇಷಭೂತನಲ್ಲವು, ಸ್ವತಂತ್ರನಲ್ಲವು, ಪರಮಾತ್ಮನಿಗೆ ಅಧೀನನು. ಇದು ನಮಶ್ಶಬ್ದದ ಅನುವಾದವು. ಮೂರನೆಯ ಪದವಾದ ನಾರಾಯಣ ಶಬ್ದಾರ್ಥವನ್ನು ತಿಳಿಸುತ್ತಾರೆ. **ನರಾಣಾಂ** ಎಂದರೆ **ನಿತ್ಯಾನಾಂ** - ಚಿದಚಿತ್ತು ನಿತ್ಯವಾದವುಗಳ **ನಿವಾಹಾಃ** - ಸಮೂಹಗಳಿಗೆ **ಅಯನಂ** - ಪ್ರಾಪ್ಯ ಪಾಪಕ ಆಧಾರನು. **ನಾರಾಣಾಂ ಅಯನಂ** - ನಾರಾಯಣಃ ಎಂಬವ್ಯುತ್ಪತ್ತಿಯಿಂದ ಷಷ್ಠೀತತ್ಪುರುಷ ದಿಂದ ತೋರುವ ಅರ್ಥವು. ಇಂತಹ **ನಾರಾಃ** - ನಿತ್ಯವಾದವುಗಳ ಸಮೂಹ ಗಳೆಲ್ಲಾ **ಅಯನಂ ಯಸ್ಯಸಃ** - ಆಶ್ರಯವಾಗಿ ಉಳ್ಳವನು ಯಾವನೋ, ಎಂದರೆ ಯಾವ ಚಿದಚಿದಾತ್ಮಕ ಸಕಲ ವಸ್ತುಗಳನ್ನೂ ವ್ಯಾಪಿಸಿ, ಅಂತರಾತ್ಮವಾಗಿ ಅವುಗಳಲ್ಲಿ ವಸಿಸುವನೋ ಅವನು ನಾರಾಯಣನು. ಇದು ಬಹುವ್ರೀಹಿ ಸಮಾಸ ದಿಂದ ತೋರುವ ಅರ್ಥವು. **ಯಂ** - ಇಂತಹ ಪ್ರಸಿದ್ಧ ಶ್ರಿಯಃಪತಿಯನ್ನು ನಾರಾಯಣ ಪದವು **ಆಹ** - ಹೇಳುತ್ತದೆ.

ನಾರಾಯಣಾಯ ಎಂಬ ಪದದಲ್ಲಿರುವ ಚತುರ್ಥಿಯ ಅರ್ಥವನ್ನು ಬೋಧಿಸುತ್ತಾರೆ–**ಅಸ್ಮೈ** – ಇಂತಹ ಕಲ್ಯಾಣ ಗುಣಯೋಗ, ವಿಭೂತಿ ಯೋಗಾದಿಗಳಿಂದ ಸರ್ವಾಧಿಕನಾದ ಪರಮ ಪುರುಷನಾದ ಶ್ರೀಯಃಪತಿ ನಾರಾಯಣನಿಗಾಗಿ **ಸಕಲಂ ಕಾಲಂ** – ಸಮಸ್ತ ಕಾಲಗಳಲ್ಲೂ, **ಸರ್ವತ್ರ** – ಸಮಸ್ತ ಪ್ರದೇಶಗಳಲ್ಲೂ, **ಸಕಲಾಸ್ವವಸ್ಥಾಸು** - ಸಮಸ್ತ ಅವಸ್ಥೆಗಳಲ್ಲೂ; **ಮಮ** - ಶೇಷಭೂತನಾಗಿ ಕಿಂಕರನಾದ ನನ್ನ, **ಸಹಜ ಕೈಂಕರ್ಯ ವಿಧಯಃ** - ಸ್ವರೂಪಕ್ಕೆ ಅನುಗುಣವಾದುದರಿಂದ ಸಹಜವಾದ ಕೈಂಕರ್ಯಾನುಷ್ಠಾನಗಳು, **ಅವಿಸ್ಯುಃ** - ಅವಿದ್ಯಾಕರ್ಮಾದಿ ರೂಪ ಪ್ರತಿಬಂಧಕಗಳೆಲ್ಲಾ ನಿವೃತ್ತಿ ಹೊಂದುವದರ ಮೂಲಕ ಅವಿರ್ಭವಿಸಲಿ. ಹೀಗೆ ಈ ಮೂರನೆಯ ಶ್ಲೋಕದಲ್ಲಿ ಮೂರನೆಯ ಪದದ ಅರ್ಥವನ್ನು ಉಪದೇಶಿಸಿದರು.

ಉಪಪಾದನೆಯು :—ಇಲ್ಲಿ **ಅಕಾರಾರ್ಥಾಯೈವ** ಎಂಬಲ್ಲಿರುವ ಅವಧಾರಣದ ಮೂಲಕ ಜೀವಾತ್ಮನು ಅಕಾರದಿಂದ ಹೇಳಲ್ಪಟ್ಟ ಲಕ್ಷ್ಮೀನಾರಾಯಣರಿಬ್ಬರಿಗೂ ಶೇಷಭತನೇ ವಿನಾ ಇನ್ಯಾರಿಗೂ ಅಲ್ಲವು. ಏಕೇದರೆ **"ನ ಹಿ ಪಾಲನ ಸಾಮರ್ಥ್ಯ ಮೃತೇ ಸರ್ವೇಶ್ವರಂ ಹರಿಮ್"** ಸಂರಕ್ಷಿಸಿ ಕಷ್ಟದಿಂದ ಬಿಡಿಸಿ ನಿರಂತರ ಸುಖವನ್ನೀಯುವ ಶಕ್ತಿಯು ಇನ್ನು ಯಾರಿಗೂ ಇಲ್ಲವಾದುದರಿಂದ. ಇದೇ ಪ್ರಣವದಿಂದ ಉಪದಿಷ್ಟವಾದ ಮುಖ್ಯಾರ್ಥವು. **ನಮಃ** ಎಂಬ ಎರಡನೆಯ ಪದವನ್ನು **ಸಖಂಡ** ಸಮಸ್ನಾಗಿ ಭಾವಿಸಿ ಎಂದರೆ **ಮಃನ ನಮಮ** ಎಂದು ಭಾವಿಸಿ, ಮೂಲ ಮನ್ತ್ರದ ಮೂರು ಪದಗಳೊಂದಿಗೂ ಅನ್ವಯಿಸಿದರೆ, ಮಕಾರ ವಾಚ್ಯನಾದ **ಅಹಂ** ನಾನು **ನಮಮ** ನನಗೆ ಶೇಷಭೂತನಲ್ಲವು; ಇದರಿಂದ ಪರಮ ಪುರುಷನಿಗೆ ತಾನು ಪರತಂತ್ರನೆಂದಾಯಿತು. **ನಮಃಮಮನ** ಎಂಬ ಯೋಜನೆಯಿಂದ ತಾನು ಮಾಡುವ ಪ್ರಣಾಮರೂಪ ಶರಣಾಗತಿಯಲ್ಲಿ ತನಗೇನೂ ಸಂಬಂಧವಿಲ್ಲವು ಎಂದಾಗತ್ತದೆ. **ನಾರಾಯಣಾಯ ಮಮನ** ಎಂಬುದರ ಉಪಪಾದನೆಯು ಈ ಶ್ಲೋಕದಲ್ಲಿ ಹೇಳಲ್ಪಡುತ್ತದೆ.

ನಾರಾಯಣ ಶಬ್ದದಲ್ಲಿನ **ನಾರ** ಶಬ್ದವು **ರೀಙ್ ಕ್ಷಯೇ** ಎಂಬ ಧಾತುವಿನಿಂದ ಉತ್ಪನ್ನವಾದುದು. ಆದುದರಿಂದ **ರಾಃ** ಎಂದರೆ ನಾಶವಾಗುವ ವಸ್ತುಗಳು, **ನರಾಃ** ಉಂದರೆ ನಾಶವಿಲ್ಲದವು; ನಿತ್ಯವಾದವು. ಅಂತಹ ನಿತ್ಯವಾದವುಗಳ ಸಮೂಹಗಳು **ನಾರಾಃ** ಎಂದು ಹೇಳಲ್ಪಡುವುವು. ಅವು ಯಾವುವೆಂದರೆ ಪರಮ ಪುರುಷನ ಪರತ್ವವು ಬೋಧಿತವು. ಹೀಗೆ ಷಷ್ಠೀತತ್ಪುರುಷಾರ್ಥದಿಂದ ಸಮಸ್ತ ಚೇತನರಿಗೂ ಪ್ರಾಪ್ಯನೂ, ಪ್ರಾಪಕನೂ ಮತ್ತು ಸಮಸ್ತ ಚಿದ ಚಿತ್ತುಗಳಿಗೂ ಆಧಾರನೆಂಬ ಮೂರು ಅರ್ಥಗಳು ಬೋಧಿತವು. **"ಜ್ಞಾನಾದಯೋ ಗುಣಾ ರೂಪಂ ಲಕ್ಷ್ಮೀರ್ನಿತ್ಯಾನಪಾಯಿನೀ। ಭೂಮಿ ನೀಳಾದಯೋ ದೇವ್ಯಶ್ಶೇಷಾದ್ಯಾ ನಿತ್ಯ ಸೂರಯಃ। ತದ್ಧಾಮ ಪರಮಂ ಕಾಲಃ ಪುರುಷಃ ಪ್ರಕೃತಿ ಸ್ತಥಾ। ಮಹದಾದಿ ಧರಾಂತಾನಿ ಸಪ್ತ ಚಾವರಣಾನ್ಯಪಿ। ಬ್ರಾಹ್ಮ**

ಮಂಡಂ ತದನ್ತಸ್ಥಾ ಲೋಕಾಶ್ಚ ಸಚರಾ ಚರಾಃ। ಏವ ಮಂಡಾನ್ಯನಂತಾನಿ ತತ್ಸರ್ವಂ ನಾರ ಮುಚ್ಯತೇ।" ಹೀಗೆ ನಾರ ಶಬ್ದದಿಂದ ಹೇಳಲ್ಪಟ್ಟವು ಯಾವುವು ಎಂದು ವಿಸ್ತರಿಸಿ, "**ನಾರಾಣಾ ಮಯನಂ ವಾಸಸ್ತೇ ಚತಸ್ಯಾಯನಂ ಸದಾ। ಅತೋ ನಾರಾಯಣೋ ನಾಮ ಹೇತುಭಿರ್ದರ್ಶಿತಃ ಪರಃ** ಎಂಬುದರಿಂದ ತತ್ಪುರುಷ ನಾರಾಯಣಾರ್ಥವನ್ನು ಹೇಳಿ ಪರತ್ವವನ್ನು ಸ್ಥಾಪಿಸಿರುತ್ತಾರೆ. ತಾನು ಸರ್ವಕ್ಕೂ ಆಧಾರನೆಂದು ಗೀತೆಯಲ್ಲಿ "**ಮಯಿಸರ್ವಮಿದಂ ಪ್ರೋತಂ ಸೂತ್ರೇಮಣಿಗಣಾಇವ**" ಎಂದು ಹೇಳಲ್ಪಟ್ಟಿರುತ್ತದೆ. "**ನಾರಸ್ತಿತಿ ಸರ್ವಪುಂಸಾಂ ಸಮೂಹಃ ಪರಿಕೀರ್ತಿತಃ। ಗತಿರಾಲಂಬನಂ ತಸ್ಯತೇನ ನಾರಾಯಣಸ್ಸ್ಮೃತಃ**" ಎಂಬುದರಿಂದ ಷಷ್ಠೀತತ್ಪುರುಷದಿಂದ ತೋರುವ ಸಿದ್ಧೋಪಾಯನೂ ನಾರಾಯಣನೇ ಎಂದು ಹೇಳಲ್ಪಟ್ಟಿತು. "**ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷ ಮೋತಂ ಮನಸ್ಸಹ ಪ್ರಾಣೈಶ್ಚ ಸರ್ವೈಃ। ತಮೇವೈಕಂ ಜಾನಥಾತ್ಮಾನ ಮನ್ಯಾ ವಾಚೋ ವಿಮುಂಚಥ ಅಮೃತಸ್ಯೈಷಸೇತುಃ**" ಯಾವ ಅಕ್ಷರ ಶಬ್ದ ವಾಚ್ಯನಾದ ಪರಮ ಪುರುಷನಲ್ಲಿ, ದ್ಯು ಪೃಥಿವೀ ಅನ್ತರಿಕ್ಷ ಮನಸ್ಸು ಪ್ರಾಣವೇ ಮೊದಲಾದವೆಲ್ಲಾ ಆಧಾರವನ್ನು ಹೊಂದಿ ಸೇರಿರುವುವೋ ಆತನೇ ಸರ್ವಕ್ಕೂ ಆತ್ಮಾ ಎಂಬದಾಗಿ ತಿಳಿಯತಕ್ಕದ್ದು. ಆತನು ಆತ್ಮವಾಗಿಲ್ಲವೆಂಬ ಪ್ರಲಾಪವನ್ನು ತ್ಯಜಿಸತಕ್ಕದ್ದು; ಏಕೆಂದರೆ ಪ್ರಾಪ್ಯಕ್ಕೆ ಆತನೇ, ಸಂಸಾರ ಪ್ರವಾಹದ ಆಚೇ ದಡಕ್ಕೆ ಸೇರಿಸುವ ಸೇತುವೆ ಮಾರ್ಗವು ಎಂಬರ್ಥವು. ಇದರಲ್ಲಿ ನಾರಾಯಣನೇ ಆಧಾರನು ಪ್ರಾಪ್ಯನೂ ಪ್ರಾಪಕನೂ ಎಂದು ಹೇಳಿದುದಲ್ಲದೆ ಮುಂದೆ ಹೇಳುವ ಬಹುವ್ರೀಹ್ಯರ್ಥದಿಂದ ತೋರಿಬರುವ ಅಂತರ್ವ್ಯಾಪ್ತಿಯೂ ಬೋಧಿತವು. ಈ ಶ್ರುತಿಯು ಆದುದರಿಂದ ನಾರಾಯಣ ಶಬ್ದಾರ್ಥವನ್ನು ನಿಪುಣತರವಾಗಿ ಬೋಧಿಸುತ್ತದೆ.

ಸತ್ಯತ್ವ ಜ್ಞಾನತ್ವ ಅನಂತತ್ವ, ಆನಂದತ್ವ ಮೊದಲಾದ ಸ್ವರೂಪ ಶೋಧಕ ಗುಣಗಳೂ, ಜ್ಞಾನ ಶಕ್ತಿ ತೇಜಸ್ಸೇ ಮೊದಲಾದ ನಿರೂಪಿತ ಸ್ವರೂಪ ವಿಶೇಷಣಗಳೂ, ವಾತ್ಸಲ್ಯ, ಕರುಣಾ ಸೌಶೀಲ್ಯ ಸೌಲಭ್ಯಾದಿಗಳೂ, ದಿವ್ಯ ಮಂಗಳ ವಿಗ್ರಹ ಮತ್ತು ಸದ್ಗುಣಗಳಾದ ಕಾಂತಿ, ಲಾವಣ್ಯ, ತ್ಸಾಕುಮಾರ್ಯಾದಿಗಳೂ, ದಿವ್ಯ ಭೂಷಣಾಯುಧಗಳೂ, ಲಕ್ಷ್ಮಿಯೂ, ಇತರ ದಿವ್ಯಮಹಿಷಿಗಳಾದ ಭೂಮಿ ನೀಳಾದೇವಿಗಳೂ, ಛತ್ರ ಚಾಮರಾದಿಗಳೂ, ನಿತ್ಯಸೂರಿಗಳೂ, ದ್ವಾರಪಾಲಕರೂ, ಗಣಾಧಿಪರೂ, ಮುಕ್ತರೂ, ದಿವ್ಯವೈಕುಂಠವೂ, ಮೂಲಪ್ರಕೃತಿಯೂ, ಬದ್ಧಜೀವರೂ, ಕಾಲವೂ, ಮಹದಾದಿ ವಿಕಾರಗಳೂ, ಅಂಡಗಳೂ, ಅಂಡಗಳಲ್ಲಿರುವ ದೇವತೆಗಳೂ, ಮೊದಲಾದವರೂ, (ಇವರೂ ಬದ್ಧಜೀವರಲ್ಲೇ ಸೇರಿದವರು.) ಇಂತಹ ನಿತ್ಯ ಪದಾರ್ಥ ಸಮೂಹಗಳಾದ ನಾರಾಃ + ಅಯನಂ = ನಾರಾಯಣಃ ಎಂದಾಗುತ್ತದೆ. ಮೇಲೆ ನಿತ್ಯಗಳೆಂದು ಹೇಳಲ್ಪಟ್ಟವು ಕೆಲವು ನಿತ್ಯವಿಭೂತಿಗೆ ಸೇರಿದವುಗಳಾಗಿ ಸರ್ವೇಶ್ವರನ

ಸಂಕಲ್ಪದಿಂದ ಯಾವಾಗಲೂ ನಿತ್ಯವಾಗಿರಲಿ ಎಂದು ಶಾಶ್ವತವಾದುವು; ಇದಕ್ಕೆ ನಿತ್ಯವಿಭೂತಿ ಎಂದು ಹೆಸರು. ಇವುಗಳಿಗೆ ಸೃಷ್ಟಿ ಲಯಾದಿಗಳಿಲ್ಲವು. ಆದರೆ ಲೀಲಾ ವಿಭೂತಿಗೆ ಸೇರಿದ ಪ್ರಕೃತಿಯೂ ತದ್ವಿಕಾರಗಳೂ ನಿತ್ಯವೆಂದು ಹೇಳಲ್ಪಟ್ಟಿದುದು ಹೇಗೆ? ಎಂದರೆ ಇವೆಲ್ಲಾ ಪ್ರವಾಹತಃ ನಿತ್ಯವು. "**ಅಜಾಮೇಕಾಂ ಲೋಹಿತ ಶುಕ್ಲ ಕೃಷ್ಣಾಂ**" ಎಂದು ಹಾಗೆಯೇ ಶ್ರುತಿಯಲ್ಲಿ ಹೇಳಲ್ಪಟ್ಟಿರುತ್ತದೆ. ಸೃಷ್ಟಿ ಸ್ಥಿತಿಲಯಾದಿಗಳು ಇದ್ದರೂ ವಸ್ತುನಾಶವಿಲ್ಲವು. ಇವೆಲ್ಲಾ ಪರಿಣಾಮ ಯುಕ್ತವಾಗಿ ಅನಿತ್ಯಾವಸ್ಥೆಯುಳ್ಳವುಗಳಾಗಿರಲೆಂದು ಸ್ವಾಮಿ ಸಙ್ಕಲ್ಪವು.

ನಾರಾಃ ಅಯನಂ ಎಂಬುದನ್ನು **ನಾರಾಣಾಂ ಅಯನಂ** ಎಂದು ಷಷ್ಠೀ ತತ್ಪುರುಷವನ್ನಾಗಿ ಭಾವಿಸಿದರೆ, ಅಯನ ಶಬ್ದವ್ಯುತ್ಪತ್ತಿಯ ಮೂಲಕ ಮೂರು ವಿಧವಾದ ಅರ್ಥಗಳು ತೋರಿಬರುತ್ತದೆ. (೧) **ಇಣ್ ಗತೌ** ಎಂಬ ಧಾತುವ್ಯುತ್ಪತ್ತಿಯಿಂದುಂಟಾದುದು **ಅಯನ** ಶಬ್ದವು. **ಈಯತೇ ಇತ್ಯಯನಂ** ಎಂಬ ಕರ್ಮಣಿ ವ್ಯುತ್ಪತ್ತಿಯಿಂದ ತನ್ನನ್ನೇ ಹೊಂದಿಸುವವನು ಪ್ರಾಪ್ಯನು ಎಂದರ್ಥವಾಗುತ್ತದೆ. (೨) **ಈಯತೇ ಅನೇನ** ಎಂಬ ಕರಣವ್ಯುತ್ಪತ್ತಿಯಿಂದ ಈತನಿಂದಲೇ ಹೊಂದಿಸುವವನು, ಆದುದರಿಂದ ಪ್ರಾಪಕನು ಅಥವಾ **ಕೃಷ್ಣಂ ಧರ್ಮಂ ಸನಾತನಮ್** ಎಂಬಲ್ಲಿ ಹೇಳಿರುವ ಹಾಗೆ ಸಾಧಕನು, ಉಪಾಯುವು. (೩) **ಈಯಂತೇ ಅಸ್ಮಿನ್** ಇತಿ ಎಂಬ ಅಧಿಕರಣವ್ಯುತ್ಪತ್ತಿಯಿಂದ ಎಲ್ಲಾ ಚಿದ ಚಿತ್ತುಗಳಿಗೂ ಆಧಾರವಾಗಿರುವವನು. ಇದರಿಂದ **ನಾರಾಃ ಅಯನಂ** ಎಂಬಲ್ಲಿ ಬಹುವ್ರೀಹಿ ಸಮಾಸವು ಆಗಬಹುದು. ಹೇಗೆಂದರೆ **ನಾರಾಃ ಅಯನಂ ಆಧಾರೋಯಸ್ಯಸಃ** ಮೇಲೆ ಹೇಳಿದ ಎಲ್ಲಾನಿತ್ಯವಾದ ಚಿದ ಚಿದ್ವಸ್ತುಗಳನ್ನೆಲ್ಲಾ ತನಗೂ ಆಧಾರವಾಗಿವುಳ್ಳವನು ಎಂದರೆ ಅವುಗಳನ್ನು ವ್ಯಾಪಿಸಿ, ಅವುಗಳಿಗೆ ಅಂತರಾತ್ಮವಾಗಿರುವನು ನಾರಾಯಣನು ಎಂಬರ್ಥವು ಉಂಟಾಗುತ್ತದೆ. ಇದರಿಂದ, ಚೇತನರೊಂದಿಗೆ ಸೇರಿರುವ ಭಾವದಿಂದ, ಸೌಶೀಲ್ಯ ಸೌಲಭ್ಯ, ಕಾರುಣ್ಯ, ವಾತ್ಸಲ್ಯ ಔದಾರ್ಯಾದಿ ಗುಣಗಳಿಂದ ಯುಕ್ತನೆಂಬುದು ತೋರಿಬರುತ್ತದೆ. "**ಯಃ ಪೃಥಿವ್ಯಾಂ ತಿಷ್ಠನ್**" "**ಯ ಆತ್ಮನಿ ತಿಷ್ಠನ್**" "**ತತ್ಸೃಷ್ಟ್ವಾ ತದೇವಾನು ಪ್ರಾವಿಶತ್**" **ಇಣ್ ಗತೌ** ಎಂಬ ಧಾತುವಿಗೆ ಬದಲಾಗಿ ಅಯಗತೌ ಎಂಬ ಧಾತುವಿನಿಂದಲೂ ಈ ಅರ್ಥಗಳೇ ಉಂಟಾಗುತ್ತವೆ. ಇತ್ಯಾದಿ ಅನೇಕ ಸ್ಮೃತಿಗಳು ಬೋಧಿಸುತ್ತವೆ. ಹಾಗೆಯೇ ಗೀತೆಯಲ್ಲೂ "**ಈಶ್ವರ ಸ್ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ । ಭ್ರಾಮಯನ್ ಸರ್ವಭೂತಾನಿ ಯನ್ತ್ರಾರೂಢಾನಿ ಮಾಯಯಾ**" (ಗೀ ೧೮) ಇದರ ಅರ್ಥಕ್ಕೆ ದಾಸನು ಬರೆದಿರುವ ಗೀತಾರ್ಥೋಪಪಾದನೆಯನ್ನು ಪರಾಂಬರಿಸಿ. "**ನರಾಜ್ಜಾತಾನಿ ತತ್ವಾನಿ ನಾರಾಣೀತಿ ವಿದುರ್ಬುಧಾಃ ತಾನ್ಯೇವ ಚಾಯನಂ ತಸ್ಯತೇನ ನಾರಾಯಣ ಸ್ಸ್ಮೃತಃ । ಆಪೋ ನಾರಾ**

ಇತಿ ಪ್ರೋಕ್ತೋ ಆಪೋನ್ಯೈ ನರಸೂನವಃ । ತಾ ಏವಾ ಚಾಯನಂ ತಸ್ಯ ತೇನ ನಾರಾಯಣ ಸ್ಸ್ಮೃತಃ" ಈ ಪ್ರಮಾಣಗಳು ಭಾರತ ಮತ್ತು ಮನು ಸ್ಮೃತಿವಾಕ್ಯಗಳು ಮೂಲಮನ್ತ್ರಾಧಿಕಾರದಲ್ಲಿ ಉದಾಹೃತವು. ಶ್ರೀಮನ್ನಾರಾಯಣನಾದ ಭಗವಂತನಿಂದ ಉಂಟಾದ ಚಿದಚಿತ್ತತ್ವಗಳಿಗೆ ಪ್ರಾಜ್ಞರು ನಾರಾಗಳೆಂದು ಹೇಳುವರು. ಆ ಚಿದ ಚಿತ್ತುಗಳನ್ನೇ ತನಗೂ ಆಧಾರವಾಗಿ ವ್ಯಾಪಿಸಿ, ಅವುಗಳಿಗೆ ಅಂತರಾತ್ಮಾವಾಗಿರುವದರಿಂದ ಸ್ಮೃತಿಗಳಲ್ಲಿ ನಾರಾಯಣನೆಂದು ಭಗವಂತನು ಹೇಳಲ್ಪಟ್ಟನು. ಮನುಸ್ಮೃತಿ ವಾಕ್ಯವೂ ಅದೇ ಅರ್ಥವುಳ್ಳದ್ದು. **ನ ರಾ ಜ್ಞಾ ತಾ ನಿ** ಎಂಬುದಕ್ಕೆ ಇಲ್ಲಿ **ನರಸೂನವಃ** ಎಂಬ ಪ್ರಯೋಗವು; ಆತನಿಂದುಂಟಾದ ತತ್ವಗಳು ಇಲ್ಲಿ **ಆಪಃ** ಎಂದು ಹೇಳಲ್ಪಟ್ಟವು.

ಇಷ್ಟು ಅರ್ಥಗಳೆಲ್ಲಾ ನಾರಾಯಣ ಶಬ್ದದಲ್ಲಿ ಅಡಗಿರುವದರಿಂದ ಭಗವನ್ನಾಮಗಳಲ್ಲೆಲ್ಲಾ ನಾರಾಯಣ ಶಬ್ದಕ್ಕೆ ಹೆಚ್ಚಿನ ಮಹಾತ್ಮ್ಯೆಯು. ಇದನ್ನು ತೈ. ನಾರಾಯಣೀಯವೇ **"ಸಹಸ್ರ ಶೀರ್ಷಂ ದೇವಂ"** ಎಂದಾರಂಭಿಸಿ ಬೋಧಿಸಿರುತ್ತದೆ. ನಾರಾಯಣ ಶಬ್ದವಾಚ್ಯನು ಯಾರು ಎಂಬುದು **"ಓಂ ನಾರಾಯಣಾಯ ವಿದ್ಮಹೇ ವಾಸುದೇವಾಯಧೀಮಹಿ ತನ್ನೋ ವಿಷ್ಣುಃ ಪ್ರಚೋದಯಾತ್"** ಎಂಬುದರಿಂದ ಗ್ರಹಿಸಬಹುದು. ನಾರಾಯಣ, ವಾಸುದೇವ, ವಿಷ್ಣು ಶಬ್ದಗಳು ಪರ್ಯಾಯ ಪದಗಳಾಗಿ ಮೂರು ಮುಖ್ಯ ವ್ಯಾಪಕ ಮನ್ತ್ರಗಳಾಗಿ ಸರ್ವೇಶ್ವರನ ಸರ್ವ ವ್ಯಾಪ್ತಿಯನ್ನು ಮುಖ್ಯವಾಗಿ ಬೋಧಿಸುವ ಅಷ್ಟಾಕ್ಷರ, ದ್ವಾದಶಾಕ್ಷರ, ಷಡಕ್ಷರ ಮನ್ತ್ರಗಳಾಗಿ ಏರ್ಪಟ್ಟು, ಈ ನಾರಾಯಣ ಶಬ್ದದಲ್ಲಿ ತೋರುವ ಮಹತ್ತಾದ ಅರ್ಥಗಳಿಂದ ಮೂಲ ಮನ್ತ್ರವೆಂದು ಕೊಂಡಾಡಲ್ಪಟ್ಟಿರುತ್ತದೆ. ಇದರಿಂದಲೇ ಚತುರ್ಮುಖ ರುದ್ರಾದಿಗಳು ಪರತತ್ವವಲ್ಲವೆಂಬುದು ವ್ಯಕ್ತವು. ನಮ್ಮ ಆಳ್ವಾರುಗಳಲ್ಲಿ ಪೆರಿಯಾಳ್ವಾರ್‌ರವರು ಪಾಂಡ್ಯದೇಶದ ರಾಜನಿಗೆ ಶ್ರೀಮನ್ನಾರಾಯಣನೇ ಪರತತ್ವವೆಂದು ವಾದಿಸಿ ಹೆಚ್ಚಾದ ಮರ್ಯಾದೆಯನ್ನು ಪಡೆದರು. ಹಾಗೆಯೇ ತಿರುಮಙ್ಗೈಯಾಳ್ವಾರ್‌ರವರೂ ನಾರಾಯಣ ನಾಮ ಮಹಾತ್ಮ್ಯೆಯನ್ನು ತಮ್ಮ ಪಾಶುರಗಳಲ್ಲಿ ವ್ಯಕ್ತಪಡಿಸಿರುತ್ತಾರೆ. ಮೋಕ್ಷಧರ್ಮದಲ್ಲಿ ಭೀಷ್ಮರು ಯುಧಿಷ್ಠಿರಾದಿಗಳಿಗೆ ನಾರಾಯಣನೇ ಪರತತ್ವವೆಂದು ಯುಧಿಷ್ಠಿರ ಪ್ರಶ್ನೆಗೆ ಉತ್ತರವನ್ನಿತ್ತಿರುತ್ತಾರೆ. ಪರತತ್ವವೆಂದು ಬೋಧಿಸುವ ಸಮಸ್ತ ಶಬ್ದಗಳೂ ಲಕ್ಷ್ಮೀಪತಿಯಾದ ನಾರಾಯಣನೇ ಪರತತ್ವವೆಂದು ತೈತ್ತರೀಯದಲ್ಲಿ ಹೇಳಿರುತ್ತದೆ.

ಮುಂದೆ ನಾರಾಯಣಾಯ ಎಂಬಲ್ಲಿ ಚತುರ್ಥ್ಯರ್ಥವನ್ನು ಉತ್ತರಾರ್ಧದಿಂದ ಬೋಧಿಸುತ್ತಾರೆ. ಇಂತಹ ಪ್ರಸಿದ್ಧನಾದ ನಾರಾಯಣನಿಗೇನೇ **ಮಮ ಸಹಜ ಕೈಂಕರ್ಯ ವಿಧಯಃ ಆವಿಸ್ಸ್ಯುಃ** - ನನ್ನ ಶೇಷತ್ವ ಸ್ವರೂಪಕ್ಕೆ ಅನುಗುಣವಾದುದರಿಂದ ಸಹಜವಾದ ಸರ್ವಕಾಲ ಸರ್ವದೇಶ ಸರ್ವಾವಸ್ಥೆಗಳಲ್ಲೂ ಮಾಡುವ ಕೈಂಕರ್ಯಾನು

ಷ್ಠಾನಗಳೆಲ್ಲಾ ಆವಿರ್ಭಸಲಿ. ಇಲ್ಲಿ ಮಾಡುವ ಆಜ್ಞಾನುಜ್ಞಾ ಕೈಂಕರ್ಯಗಳೂ ದಿವ್ಯ ವೈಕುಂಠದಲ್ಲಿ ಎಸಗುವ ಕೈಂಕರ್ಯಗಳೂ ಸಹ, ಇಲ್ಲಿ ಪ್ರೋಕ್ತವು.

ಹೀಗೆ ಮೂಲ ಮಂತ್ರದ ಪ್ರಣವದಿಂದ ಶೇಷತ್ವವೂ ನಮಶ್ಶಬ್ದದಿಂದ ಪಾರತಂತ್ರ್ಯವೂ ನಾರಾಯಣಾಯ ಎಂಬುದರಿಂದ ಕೈಂಕರ್ಯವೂ ಹೇಳಲ್ಪಟ್ಟವು.

ಇವುಗಳನ್ನೆಲ್ಲಾ ಶ್ರೀಮದ್ರಾಮಾಯಣದಲ್ಲಿ ಲಕ್ಷ್ಮಣನ ಉಕ್ತಿ ಪ್ರವೃತ್ತಿಗಳಿಂದ ಗ್ರಹಿಸಬಹುದು. **ಅಹಂ ತಾವನ್ಮಹಾರಾಜೇ ಪಿತೃತ್ವಂ ನೋಪಲಕ್ಷಯೇ। ಭರ್ತಾ ಬಂಧುಶ್ಚ ಭ್ರಾತಾ ಚ ಪಿತಾ ಚ ಮಮ ರಾಘವಃ।** ಎಂದೂ ದಶರಥನು ತನಗೆ ಸೋಪಾಧಿಕ ಪಿತಾ, ನಿರುಪಾಧಿಕ ಪಿತಾ ಶ್ರೀರಾಮಚಂದ್ರನೆಂದು ಹೇಳಿಕೊಂಡಿರುತ್ತಾನೆ. ಹಾಗೆಯೇ **ನ ಚ ಸೀತಾ ತ್ವಯಾ ಹೀನಾ ನ ಚಾಹ ಮಪಿ ರಾಘವ। ಮುಹೂರ್ತ ಮಪಿ ಜೀವಾವ ಮತ್ಸ್ಯಾವಿವ ಜಲಾದ್ಧೃತೌ।** ಶ್ರೀರಾಮಚಂದ್ರನಿಲ್ಲದೆ ತನಗೆ ಸತ್ತೆಯೇ ಇಲ್ಲವೆಂದು ಹೇಳಿಕೊಂಡಿರುತ್ತಾನೆ. ಮತ್ತು "**ಕುರುಷ್ವ ಮಾ ಮನುಚರಂ ವೈಧರ್ಮ್ಯಂ ನೇಹ ವಿದ್ಯತೇ**" ತನ್ನನ್ನು ಕಿಂಕರನಾಗಿ ಮಾಡಿಕೊಂಡು ಯಾವ ಯಾವ ಕೈಂಕರ್ಯಗಳಾಗಬೇಕೋ ಅವುಗಳಲ್ಲಿ ನನ್ನನ್ನು ನಿಯಮಿಸು. ಹಾಗೆ ನೀನು ಮಾಡುವದರಲ್ಲಿ ತಮ್ಮನನ್ನು ಪರಿಚಾರಕನನ್ನಾಗಿ ಇಟ್ಟುಕೊಂಡನೆಂಬ ಅಪವಾದವೇನೂ ಇಲ್ಲವು. ಶೇಷಭೂತನು ಶೇಷಿಗೆ ಕೈಂಕರ್ಯ ಮಾಡುವದೇ ಸಹಜ ಧರ್ಮವು. ಇದರಿಂದ **ಸಹಜ ಕೈಂಕರ್ಯ ವಿಧಯಃ** ಎಂಬಲ್ಲಿ ಸಹಜ ಶಬ್ದದ ಸಾಮಂಜಸ್ಯವು ವ್ಯಕ್ತವು. ಇಲ್ಲಿ ಶೇಷಭಾವವೂ ಕೈಂಕರ್ಯವೂ ಬೋಧಿತವು. ಹಾಗೆಯೇ ಮುಂದೆ ಲಕ್ಷ್ಮಣನು ಹೇಳುತ್ತಾನೆ:—"**ಭವಾಂಸ್ತು ಸಹ ವೈದೇಹ್ಯಾ ಗಿರಿಸಾನುಷು ರಂಸ್ಯತೇ। ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಸ್ಸ್ವಪತಶ್ಚ ತೇ" (ಅಯೋಧ್ಯಾ ೩೧. ೨೫)** ಇದರಿಂದ ಚತುರ್ಥಿಯಲ್ಲಿ ತೋರುವ ಕೈಂಕರ್ಯವೇ ಶೇಷಭೂತನಾಗಿರುವ ಜೀವಾತ್ಮನಿಗೆ **ಸಹಜ**ವಾದುದೆಂದೂ, **ಸರ್ವಂ ಜಾಗ್ರತ ಸ್ಸ್ವಪತಃ** ಎಂಬುದರಿಂದ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಕೈಂಕರ್ಯಗಳನ್ನೂ ಮಾಡತಕ್ಕದ್ದೆಂದೂ, ಆ ಕೈಂಕರ್ಯವು ಲಕ್ಷ್ಮೀಯುಕ್ತ ನಾರಾಯಣನಿಗೇ ಎಂದು ವೈದೇಹ್ಯಾ ಸಹ ಎಂದೂ, **ರಂಸ್ಯತೇ ಎಂಬದರಿಂದ** ಲೀಲಾವಿಭೂತಿಯಲ್ಲಿ ಇವೆಲ್ಲಾ ಲೀಲಾರ್ಥವಾಗಿಯೂ, ನಿತ್ಯ ವಿಭೂತಿಯಲ್ಲಿ ಭೋಗಾರ್ಥವಾಗಿ ಎಂದೂ ಉಪದೇಶಿಸಲ್ಪಟ್ಟಿತು.

ಪಾರತಂತ್ರ್ಯವು ಎಲ್ಲಿ ಪ್ರದರ್ಶಿಸಿತು ಎಂದರೆ ಪಂಚವಟಿಯಲ್ಲಿ ಪರ್ಣಶಾಲಾ ನಿರ್ಮಾಣಕ್ಕಾಗಿ ಶ್ರೀರಾಮಪ್ರಭುವು ಲಕ್ಷ್ಮಣನನ್ನು ಕುರಿತು ಹೇಳುತ್ತಾರೇನೆಂದರೆ - ವೈದೇಹಿಗೆ ಮನೋಹರವಾಗಿಯೂ, ಪರಿಶುದ್ಧೋದಕವಿರುವ ಜಲಾಶಯವು ನಿನಗೆ ಹತ್ತಿರವಾಗಿಯೂ, ಪುಷ್ಪಫಲ ಭರಿತವಾಗಿಯೂ ಇರುವ ಪ್ರದೇಶವನ್ನು ನೋಡಿ ಒಂದು ಪರ್ಣಶಾಲೆಯನ್ನು ರಚಿಸು ಎಂದು ಸ್ವಾತಂತ್ರ್ಯವನ್ನು ಲಕ್ಷ್ಮಣನಿಗೆ ಕೊಟ್ಟವರಾಗಿ **ತಾದೃಶೋ ದೃಶ್ಯತಾಂ ದೇಶಸನ್ನಿಕೃಷ್ಟ ಜಲಾಶಯಃ। ವನ ರಾಮಣ್ಯ**

ಕಂಯತ್ರ ಸ್ಥಲ ರಾಮಣ್ಯ ಕಂ ತಥಾ। ಸನ್ನಿಕೃಷ್ಟಂಚ ಯತ್ರ ಸ್ಯಾತ್ಸಮಿತ್ಪುಷ್ಪ ಕುಶೋದಕಮ್" ಎಂದು ಹೇಳಿದರು. ತನಗೆ ಅನುಕೂಲತೆಯನ್ನು ಸ್ವತಂತ್ರ ವನ್ನೂ ಸಹಿಸದೇ **"ಸೀತಾ ಸಮಕ್ಷಂ ಕಾಕುತ್ಸ್ಥ ಮಿದಂ ವಚನ ಮಬ್ರವೀತ್। ಪರವಾನಸ್ಮಿ ಕಾಕುತ್ಸ್ಥ ತ್ವಯಿ ವರ್ಷಶತಂ ಸ್ಥಿತೇ। ಸ್ವಯಂತು ರುಚಿರೇ ದೇಶೇ ಕ್ರಿಯತಾ ಮಿತಿ ಮಾಂ ವದ"** ಲಕ್ಷ್ಮಣನು ಸೀತಾ ಸಮಕ್ಷಮದಲ್ಲೇ ಹೇಳುತ್ತಾನೆ:—ನಾನು ಸ್ವತಂತ್ರನಲ್ಲವು. ನಿಮ್ಮಿಬ್ಬರಿಗೂ ಅಧೀನನು ಎಂದು **ಪರ ವಾನಸ್ಮಿ** ಎಂದು ಪರಾಧೀನತ್ವವನ್ನು ವ್ಯಕ್ತಪಡಿಸಿ, ಅದು ಎಲ್ಲಿವರೆಗೆ ಎಂದರೆ **ವರ್ಷಶತಂಸ್ಥಿತೇ** ಎಂದು ಶತ ಶಬ್ದವು ಇಲ್ಲಿ ಆನಂತ್ಯವನ್ನು ಬೋಧಿಸುವದರಿಂದ ಸದಾ ಕಾಲದಲ್ಲೂ ಅಸ್ವತಂತ್ರನೆಂದು ಹೇಳಿಕೊಳ್ಳುತ್ತಾನೆ. ಇದರಿಂದ ಪ್ರೀತನಾದ ಶ್ರೀ ರಾಮಚಂದ್ರನು ಮನೋಹರವಾದ ಸ್ಥಳವನ್ನು ತೋರಿಸಿ ಆಶ್ರಮವನ್ನು ರಚಿಸುವ ಹಾಗೆ ಮಾಡುತ್ತಾನೆ. ಇಲ್ಲಿ ಲಕ್ಷ್ಮಣ ವ್ಯಾಪಾರದಿಂದ ಪಾರತಂತ್ರ್ಯವು ದ್ಯೋದಿತವು. ಹೀಗೆ ಜೀವಾತ್ಮನು ಅನುಷ್ಠಿಸುವ ಕೈಂಕರ್ಯವು ಲಕ್ಷ್ಮೀ ನಾರಯಣ ರಿಬ್ಬರಿಗೂ ಎಂಬುದು **ಸೀತಾ ಸಮಕ್ಷಮ್** ಎಂಬ ಪ್ರಯೋಗದಿಂದ ಪ್ರದರ್ಶಿಸ ಲ್ಪಟ್ಟಿತು. ಈ ಪಾರತಂತ್ರ್ಯವನ್ನು ಭಕ್ತಾಗ್ರೇಸರರಾದ ಭರತಾಳ್ವಾರವರಿಂದ ಗ್ರಹಿಸಬಹುದು. ತಾನು ರಾಜ್ಯವನ್ನು ವಹಿಸದೆ, ಲೋಕಾಪವಾದದಿಂದ ಭೀತನಾಗಿ ರಾಮನನ್ನು ಒಡಂಬಡಿಸಿ ಹಿಂದಕ್ಕೆ ಕರತಂದು ಪಟ್ಟಾಭಿಷಿಕ್ತನಾಗಿ ಮಾಡುವನೆಂದು ಶಪಥವನ್ನು ತಾಳಿ, ಚಿತ್ರಕೂಟದಲ್ಲಿ ಬಂದು ಬಹುವಾಗಿ ಪ್ರಾರ್ಥಿಸಿದರೂ ಒಪ್ಪ ದಿರಲು, ಶ್ರೀರಾಮಚಂದ್ರಪ್ರಭುವು ಪಾದುಕೆಯನ್ನು ಕೊಟ್ಟು ತನ್ಮೂಲಕ ರಾಜ್ಯ ಭಾರವನ್ನು ನಡೆಸೆಂದು ಹೇಳಲು, ಆಗ ಪಾರತಂತ್ರವನ್ನು ಪ್ರಕಟಿಸಿ ನಂದಿಗ್ರಾಮ ದಲ್ಲಿ ಪಾದಕೆಗಳನ್ನು ಪ್ರತಿಷ್ಠಿಸಿ, ೧೪ ವರ್ಷಗಳು ಎಂದಿಗೆ ಮುಗಿಯುತ್ತದೆಂದು ನಿರೀಕ್ಷಿಸಿದ್ದನೆಂಬುದರಿಂದ ನಾವು ಆ ಪಾರತಂತ್ರ್ಯ ಮಹಿಮೆಯನ್ನು ಗ್ರಹಿಸ ಬಹುದು. ಸೀತಾಪತಿಯ ಅವತಾರ ಸಮಾಪ್ತಿ ಕಾಲದಲ್ಲಿ ಪರಮ ಭಾಗವತನಾದ ವಿಭೀಷಣನು ಅವರೊಂದಿಗೆ ತಾನು ತೆರಳಬೇಕಾಗಿ ತುಂಬಾ ಆದರವುಳ್ಳವನಾಗಿದ್ದರೂ ಶ್ರೀ ರಘುಪತಿಯು ನೀನು ಇಲ್ಲಿ ಇನ್ನೂ ಸ್ವಲ್ಪ ಕಾಲವಿದ್ದು ಧರ್ಮಪ್ರತಿಷ್ಠಾಪನೆ ಮಾಡತಕ್ಕದ್ದು. **"ಶಾಸಿತಸ್ತ್ವಂ ಸಖಿತ್ವೇನ ಕಾರ್ಯಂತೇ ಮಮ ಶಾಸನಮ್। ಪ್ರಜಾ ಸ್ಸಂರಕ್ಷಧರ್ಮೇಣ ನೋತ್ತರಂ ವಕ್ತು ಮರ್ಹಸಿ"** ನಿನ್ನನ್ನು ಸಖನೆಂದು ಭಾವಿಸಿ ಉಪದೇಶಿಸುವದನ್ನು ಕೇಳು; ಪ್ರಜೆಗಳನ್ನು ಧರ್ಮದಿಂದ ಕಾಪಾಡು. ಇದಕ್ಕೆ ಪ್ರತ್ಯುತ್ತರವನ್ನು ಹೇಳಬೇಡ, **"ಆರಾಧಯ ಜಗನ್ನಾಥಮ್"** ನಾನು ಕೊಟ್ಟ ಶ್ರೀರಂಗನಾಥನನ್ನು ಆರಾಧಿಸು; ನಿನಗೆ ಸರ್ವಶ್ರೇಯಸ್ಸೂ ಉಂಟಾಗುತ್ತದೆಂದು ಹೇಳಿದುದನ್ನು ಅನುಮೋದಿಸಿದುದರಿಂದ ಪಾರತಂತ್ರ್ಯವು ಪ್ರಕಟಿಸಲ್ಪಟ್ಟಿತು. ಇದು ಮುಂದೆ ದ್ವಯಮನ್ತ್ರದ ಉತ್ತರಖಂಡದಲ್ಲಿ ವಿಶದವಾಗಿ ತೋರಿಬರುತ್ತದೆ.

ದೇಹಾಸಕ್ತಾತ್ಮ ಬುದ್ಧಿರ್ಯದಿಭವತಿ ಪದಂ ಸಾಧುವಿದ್ಯಾತ್ತೃತೀಯಮ್।
ಸ್ವಾತಂತ್ರ್ಯಾನ್ಧೋ ಯದಿ ಸ್ಯಾತ್ಪ್ರಥಮಂ ಇತರ
ಶೇಷತ್ವಧೀಶ್ಚೇದ್ದ್ವಿತೀಯಮ್ ।
ಆತ್ಮತ್ರಾಣೋನ್ಮುಖಶ್ಚೇನ್ನಮ ಇತಿ ಚ ಪದಂ ಬಾಂಧವಾ ಭಾಸಲೋಲ ।
ಶ್ಶಬ್ದಂ ನಾರಾಯಣಾಖ್ಯಂ, ವಿಷಯ ಚಪಲ ಧೀಶ್ಚೇಚ್ಚತುರ್ಥೀಂ
ಪ್ರಪನ್ನಃ ॥೪॥

ಅವತಾರಿಕೆಯು—ಹಿಂದಿನ ಮೂರು ಶ್ಲೋಕಗಳಿಂದಲೂ ಮೂಲಮನ್ತ್ರದ ಮೂರು ಪದಗಳಿಂದ ತೋರಿಬರುವ ಅರ್ಥಗಳನ್ನೂ ಸಙ್ಗ್ರಹವಾಗಿ ತಿಳಿಸಿದರು. ಸಾಧಾರಣವಾಗಿ ಪ್ರಪನ್ನನಿಗೆ ದೇಹಾತ್ಮ ಭ್ರಮ, ಸ್ವತಂತ್ರಾತ್ಮಭ್ರಮ, ವಿಷಯ ಚಾಪಲ್ಯಾದಿಗಳು ಉಂಟಾಗುವದಿಲ್ಲವು. ಆದರೆ ಒಂದು ವೇಳೆ ಪ್ರಾಮಾದಿಕವಾಗಿ ಉಂಟಾದರೆ ಈ ಮೂಲ ಮನ್ತ್ರಾರ್ಥಾನು ಸಂಧಾನದಿಂದ ಅಂತಹ ಅವಿವೇಕಗಳೆಲ್ಲಾ ತೊಲಗುತ್ತವೆ ಎಂದು ಮೂಲ ಮನ್ತ್ರಾನುಸಂಧಾನದಿಂದ ದೇಹಾವಸಾನದೊಳಗೆ ಉಂಟಾಗುವ ಪ್ರಯೋಜನಗಳನ್ನು ಉಪದೇಶಿಸಿ, ಮೂಲಮನ್ತ್ರಾನುಸಂಧಾನವೂ ಜಪವೂ ಆವಶ್ಯಕವೆಂದು ಹೇಳುತ್ತಾರೆ.

ಅರ್ಥವು—ಪ್ರಣವದ ಮೂರು ಅಕ್ಷರಗಳ ಅರ್ಥಾನು ಸಂಧಾನದಿಂದ ಮೂರು ವಿಧ ಭ್ರಮಜ್ಞಾನಗಳು ತೊಲಗುತ್ತವೆಂದು ಪೂರ್ವಾರ್ಧದಿಂದ ಹೇಳುತ್ತಾರೆ. **ಪ್ರಪನ್ನಃ** - ಸದ್ಗುರುವಿನ ಮೂಲಕ ದ್ವಯೋಚ್ಚಾರಣೆಯನ್ನು ಮಾಡಿ, ಭರನ್ಯಾಸ ವನ್ನು ಅನುಷ್ಠಿಸಿದವನು, **ದೇಹಾಸಕ್ತ ಬುದ್ಧಿಃ** - ದೇಹದಲ್ಲೇ, **ಆಸಕ್ತ** - ಸೇರಿ ಕೊಂಡಿರುವ, **ಆತ್ಮಬುದ್ಧಿಃ** - ಆತ್ಮಾ ಎಂಬ ಬುದ್ಧಿಯುಳ್ಳವನು, ಎಂದರೆ ದೇಹವೇ ಆತ್ಮಾ ಎಂಬ ಭ್ರಮೆಯುಳ್ಳವನು, **ಭವತಿಯದಿ** - ಒಂದುವೇಳೆಯಾದರೆ, ಸಾಧಾ ರಣವಾಗಿ ಹಾಗೆ ಆಗುವದಿಲ್ಲವು, ಒಂದುವೇಳೆಯಾದರೆ, ಆಗ **ತೃತೀಯಂ ಪದಮ್** ಮೂರನೆಯದಾದ ಮಕಾರಾರ್ಥವನ್ನು, **ಸಾಧು ವಿದ್ಯಾತ್**—ಚನ್ನಾಗಿ ಪರಿಶೀಲಿಸ ತಕ್ಕದ್ದು, **ಮನಜ್ಞಾನೇ** ಎಂಬಧಾತ್ವರ್ಥದಿಂದ ಜ್ಞಾನವಿರುವ ಚಿತ್ತಾದ ಆತ್ಮನು ಜಡವಾದ ಅಚಿತ್ತಾದ ದೇಹಕ್ಕಿಂತ ವಿಲಕ್ಷಣನೆಂಬ ಜ್ಞಾನದಿಂದ ತೊಲಗುತ್ತದೆಂಬ ಭಾವವು. **ಸ್ವಾತಂತ್ರ್ಯಾನ್ಧಃ** - ತಾನು ಸ್ವತಂತ್ರನೆಂಬ ಭ್ರಮೆಯಿಂದ, ಅಜ್ಞಾನದಿಂದ ಕುರುಡನ ಹಾಗಾದರೆ, ಹಾಗೆ ಸಾಧಾರಣವಾಗಿ ಕುರುಡನಾಗು ವದಿಲ್ಲವು, ಒಂದು ವೇಳೆ ಹಾಗಾದರೆ, **ಪ್ರಥಮಂ ಸಾಧುವಿದ್ಯಾತ್** . ಪ್ರಥಮಾಕ್ಷರ ವಾದ ಅಕಾರವನ್ನು **ಚನ್ನಾಗಿ** ಪರಿಶೀಲಿಸತಕ್ಕದ್ದು. ಅಕಾರ ವಾಚ್ಯನಾದ ಶ್ರೀಮನ್ನಾರಾಯಣನೇ ಸರ್ವ ರಕ್ಷಕನು, ಸರ್ವ ಕಾರಣನು, ಸರ್ವಶೇಷಿಯು ಎಂಬ ಅನು ಸಂಧಾನಗಳುಂಟಾಗುವದರಿಂದ; **ಇತರ ಶೇಷತ್ವಧೀಶ್ಚೇತ್** - ತಾನು ಅನ್ಯ

ದೇವತೆಗಳಾದ ಬ್ರಹ್ಮರುದ್ರೇಂದ್ರಾದಿಗಳಿಗೂ ಶೇಷನೆಂಬ ಬುದ್ಧಿಯುಂಟಾದರೆ, **ದ್ವಿತೀಯಮ್** - ಎರಡನೆಯ ಅಕ್ಷರವಾದ ಉಕಾರವು **ಸಾಧುವಿದ್ಯಾತ್** - ಚನ್ನಾಗಿ ಪರಿಶೀಲಿಸತಕ್ಕದ್ದು, **ಮ್ ಆಯ್ಯೈಃ** - ಮಕಾರವಾಚ್ಯ ಜೀವಾತ್ಮನು ಅಕಾರ ವಾಚ್ಯನಾದ ವಿಷ್ಣುವಿಗೇನೇ ಎಂಬರ್ಥದಿಂದ ಅನ್ಯದೇವತೆಗಳಿಗೆ ಶೇಷಭೂತ ನಲ್ಲವೆಂಬರ್ಥವು ಉಂಟಾಗುತ್ತದೆ. **ಆತ್ಮತ್ರಾಣೋನ್ಮುಖಶ್ಚೇತ್** – ತನ್ನನ್ನು ರಕ್ಷಿಸಿಕೊಳ್ಳುವ ಉಪಾಯದಲ್ಲಿ ತಾನೇ ಉದ್ಯುಕ್ತನಾದರೆ, ಉಪಾಸನಾದಿಗಳಿಂದ ತಾನೇ ರಕ್ಷಿಸಿಕೊಳ್ಳುವದರಲ್ಲಿ ಮನಸ್ಸು ಉಂಟಾದರೆ ಆಗ. **ನಮ ಇತಿಪದಂ ಸಾಧುವಿದ್ಯಾತ್** - ಅನನ್ಯ ಶರಣತ್ವವನ್ನು ಪ್ರತಿಪಾದಿಸುವ ಸಖಂಡನಮಸ್ಸಿನಿಂದ ಕೂಡಿದ ಅಖಂಡನಮಸ್ಸನ್ನು, **ಸಾಧುವಿದ್ಯಾತ್** - **ನಮಃ ಮಃ ನ** ಎಂದು ಅಖಂಡ ನಮಸ್ಸಿನಿಂದ ಪ್ರಪದನವು ಬೋಧಿಸಲ್ಪಟ್ಟು ಈ ಪ್ರಪದನ ಮೂಲಕ ಭಗವಂತನೇ ಬಂಧದಿಂದ ಬಿಡಿಸುವನು, ಅದಕ್ಕೆ ತಾನು ಸಮರ್ಥನಲ್ಲವು ಎಂಬುದು ಚನ್ನಾಗಿ ಗೊತ್ತಾಗುತ್ತದೆ. ಇದರಿಂದ ತನ್ನ ಪಾರತಂತ್ರ್ಯ ಅನನ್ಯ ಗತಿತ್ವಗಳು ಬೋಧಿತವು. **ಬಾಂಧವಾ ಭಾಸಲೋಲಃ** - ಉಪಾಧಿಯಿಂದ ಬಂಧುಗಳ ಹಾಗೆ ತೋರುವ ಬಂಧುಜನಗಳಲ್ಲಿ ವಿಷಮ ಪ್ರೀತಿಯುಳ್ಳವನಾದರೆ, **ಶಬ್ದಂ ನಾರಾಯಣಾಖ್ಯಂ** - ಶ್ರೀಮನ್ನಾರಾಯಣ ಶಬ್ದಾರ್ಥವನ್ನು, **ಸಾಧು-ಚನ್ನಾಗಿ, ವಿದ್ಯಾತ್** - ತಿಳಿಯತಕ್ಕದ್ದು. ನಾರಾಯಣ ಶಬ್ದದ ಷಷ್ಠೀ ತತ್ಪುರುಷ ಸಮಾಸದಿಂದ **ನಾರಾಣಾಂ ಆಯನಂ** - ನಿತ್ಯ ವಸ್ತುವಾದ ತನಗೂ ಕೂಡ ಪ್ರಾಪ್ಯ ಪ್ರಾಪಕ, ಆಧಾರನೆಂಬರ್ಥ ಬರುವದರಿಂದ ನಿರುಪಾಧಿಕ ಸರ್ವವಿಧ ಬಂಧುವೂ ಶ್ರೀಮನ್ನಾರಾಯಣನೇ ಎಂಬ ಅನುಸಂಧಾನ ಉಂಟಾಗುತ್ತದೆ. **ವಿಷಯ ಚಪಲಧೀಶ್ಚೇತ್** - ಅಶಾಶ್ವತ ಸುಖ ಮತ್ತು ದುಃಖ ಬಾಹುಳ್ಯವುಳ್ಳ ವಿಷಯೋಪ ಭೋಗಗಳಲ್ಲಿ ಚಾಪಲ್ಯವುಳ್ಳ ಮನಸ್ಸುಂಟಾದರೆ, **ಚತುರ್ಥೀಂ ಸಾಧುವಿದ್ಯಾತ್** - ನಾರಾಯಣಾಯ ಎಂಬಲ್ಲಿರುವ ಚತುರ್ಥಿಯಲ್ಲಿ ತೋರಿಬರುವ ಶಾಶ್ವತಾನಂದವನ್ನು ಅನುಭವಿಸುತ್ತಾ ದುಃಖಗಂಧವಿಲ್ಲದ ತನ್ನ ಸ್ವಾಮಿಯಾದ ಶ್ರೀಯಃ ಪತಿಗೆ ಮಾಡುವ ಕೈಂಕರ್ಯವೇ ಆಧಿರಾಜ್ಯವೆಂಬ ಅನುಸಂಧಾನವನ್ನು ಚನ್ನಾಗಿ ಗಮನಿಸತಕ್ಕದ್ದೆಂಬ ಭಾವವು.

ಉಪಪಾದನೆಯು—ಅಷ್ಟಾಕ್ಷರಾರ್ಥಗಳ ಬೋಧೆಯಿಂದ ಉಂಟಾಗುವ ಪ್ರಯೋಜನಗಳನ್ನು ತಿಳಿಸುವ ದ್ವಾರಾ ವಿರೋಧಿ ವರ್ಗಗಳ ನಿರಸನ ಉಂಟಾಗುತ್ತದೆಂದು ಉಪದೇಶಿಸುತ್ತಾರೆ.–ಮೊದಲು ದೇಹಾತ್ಮಭ್ರಮವು ತೊಲಗುತ್ತದೆಂದು ತಿಳಿಸುತ್ತಾರೆ-ಪ್ರಪನ್ನನಿಗೆ ಮುಖ್ಯವಾಗಿ ಕಳೆದು ಹೋಗತಕ್ಕದ್ದು ದೇಹಾತ್ಮ ಭ್ರಮವು. ಅದು ಹೇಗೆ ತೊಲಗುತ್ತದೆ ಎಂದರೆ, ದೇಹಕ್ಕಿಂತ ಆತ್ಮಾ ವಿಲಕ್ಷಣನೆಂಬ ಜ್ಞಾನದಿಂದ; " **ದಿಹ ಉಪಚಯೇ** " ಎಂಬ ಧಾತ್ವರ್ಥದಿಂದ ದೇಹವು, ಪರಿಣಾಮಯುಕ್ತವಾದ ಛೇದಿಸಲು ಯೋಗ್ಯವಾಗಿ ಅಶಾಶ್ವತವು; ಆತ್ಮಾವಾದರೋ

ಅಚ್ಛೇದ್ಯವು ಅಣುಪ್ರಮಾಣವುಳ್ಳವನಾದುದರಿಂದ, ದೇಹವು ಕ್ಷೇತ್ರವೆಂದು ಆಕಾರಣ ದಿಂದ ಹೇಳಲ್ಪಟ್ಟಿರುತ್ತದೆ. ಆತ್ಮಾವಾದರೋ ಅಕ್ಷರವು; ಸ್ವರೂಪನಾಶವಿಲ್ಲದುದು. ಆದುದರಿಂದ **ಸಾಧು ವಿದ್ಯಾತ್ತ್ರೃತೀಯಂ** ಎಂದು ಉಪದೇಶಿಸಿದರು. ಪ್ರಣವದ ಮೂರನೆಯ ಪದವು ಮಕಾರವು. ಅದರ ಅರ್ಥವನ್ನು ಸರಿಯಾಗಿ ಗ್ರಹಿಸುವದ ರಿಂದ; ಮನಜ್ಞಾನೇ ಎಂಬುದರಿಂದ ಜಡವಾದ ದೇಹಕ್ಕಿಂತ ಜೀವಾತ್ಮನು ಜ್ಞಾನ ಸ್ವರೂಪನು, ಜ್ಞಾನಗುಣಕನು ಎಂಬರ್ಥವು ತೋರಿ ಬರುವದರಿಂದ ದೇಹಕ್ಕಿಂತ ವಿಲಕ್ಷಣನು; **ಮದಿಹರ್ಷೇ** ಎಂಬ ಧಾತುವಿನ ಮೂಲಕ ಜೀವಾತ್ಮನು ಭೋಕ್ತಾ, ಈ ಶಕ್ತಿಯು ದೇಹಕ್ಕಿಲ್ಲವು. ದೇಹವಿಯೋಗ ಉಂಟಾಗಿ ಸ್ವಸ್ವರೂಪಾವಿರ್ಭಾವ ಉಂಟಾದಾಗ ಆನಂದ ಸ್ವರೂಪನು; ಶಾಶ್ವತಾನಂದವನ್ನು ಪಡೆದು ಪರಿಪೂರ್ಣ ಬ್ರಹ್ಮಾನುಭವವನ್ನು ಹೊಂದಲು ಯೋಗ್ಯನು. ದೇಹವಾದರೋ ಅಚೇತನವಾಗಿ, ದುಃಖರೂಪವಾದುದು. **ಮನ ಅವಬೋಧನೇ** ಎಂಬ ಧಾತುವಿನ ಮೂಲಕ ತಿಳುವಳಿಕೆ, ಸ್ಮೃತಿ ಮೊದಲಾದ ಗುಣಗಳುಳ್ಳವನು, **ಮಸಿಪರಿಮಾಣೇ** ಎಂಬ ಧಾತುವಿನ ಮೂಲಕ ಆತ್ಮಾ ಅಣುವು; ಅಹಂ ಅಹಂ ಎಂದು ತಿಳಿಯುವ **ಪ್ರತ್ಯಕ್ತ್ವ** ವುಂಟು. ದೇಹವು ಸ್ಥೂಲರೂಪವಾಗಿ ಪ್ರತ್ಯಕ್ತ್ವವಿಲ್ಲದೆ ಪರಾಕ್ತ್ವ ಮಾತ್ರವೇ ಉಳ್ಳದು. ಇತ್ಯಾದಿ ಅನೇಕ ಕಾರಣಗಳಿಂದ ಆತ್ಮಾದೇಹಕ್ಕಿಂತ ವಿಲಕ್ಷಣನೆಂದು ತಿಳಿಯಬಹುದಾದುದರಿಂದ ದೇಹಾಸಕ್ತ ಬುದ್ಧಿಯನ್ನು ಪ್ರಣವ ತೃತೀಯಾಕ್ಷರವಾದ ಮಕಾರವಾಚ್ಯನಾದ ಜೀವಾತ್ಮ ಲಕ್ಷಣದಿಂದ ತ್ಯಾಗಮಾಡಬಹುದೆಂದು ಹೇಳಲ್ಪಟ್ಟಿತು. ಈ ಅಭಿಪ್ರಾಯವನ್ನೇ ಶ್ರೀ ನಿಗಮಾಂತದೇಶಿಕರವರೂ **"ಪ್ರಕೃತ್ಯಾತ್ಮಭ್ರಾಂತಿರ್ಗಳತಿ ಚಿದಚಿಲ್ಲಕ್ಷಣಧಿಯಾ"** ಎಂದುತತ್ವತ್ರಯಾಧಿಕಾರದಲ್ಲಿ ತಿಳಿಸಿರುತ್ತಾರೆ. ಜೀವಲಕ್ಷಣವನ್ನು ಶ್ರೀ ಯಾಮುನ ಮುನಿಗಳು **"ದೇಹೇಂದ್ರಿಯ ಮನಃ ಪ್ರಾಣ ಧೀಭ್ಯೋನ್ಯೋಽನನ್ಯ ಸಾಧನಃ। ನಿತ್ಯೋವ್ಯಾಪೀ ಪ್ರತಿ ಕ್ಷೇತ್ರ ಮಾತ್ಮಾ ಭಿನ್ನಃ ಸ್ವತಸ್ಸುಖೀ"** ಎಂಬದಾಗಿ ನಿರೂಪಿಸಿರುತ್ತಾರೆ. ಪ್ರಣವದ ಮಕಾರಾರ್ಥಾನುಸಂಧಾನದಿಂದ ದೇಹಾತ್ಮ ಭ್ರಾಂತಿಯು ತೊಲಗುತ್ತದೆಂದು ಹೇಳಲ್ಪಟ್ಟಿತು. ದೇಹ, ಇಂದ್ರಿಯ, ಮನಸ್ಸು, ಪ್ರಾಣ, ಬುದ್ಧಿಗಳಿಗಿಂತ ಆತ್ಮಾ ಬೇರೆಯು.

ಮುಂದೆ ಸ್ವತಂತ್ರಾತ್ಮ ಭ್ರಾಂತಿಯೂ ಕಳೆಯುತ್ತದೆಂದು ಹೇಳುತ್ತಾರೆ. **ಸ್ವಾತಂತ್ರ್ಯಂಧೋಯದಿಸ್ಯಾತ್** - ತಾನೇ ಸ್ವತಂತ್ರನು ಎಂಬ ಅಂಧಕಾರದಿಂದ ಕಣ್ಣುಮುಚ್ಚಿಹೋದರೆ, ಪ್ರಣವದ ಪ್ರಥಮಾಕ್ಷರಾರ್ಥವನ್ನು ಅನುಸಂಧಾನ ಮಾಡತಕ್ಕದೆಂದು ಉಪದೇಶಿಸುತ್ತಾರೆ ಪ್ರಥಮಾಕ್ಷರವು ಅಕಾರವು. ಅದು ನಾಲ್ಕು ಅರ್ಥಗಳನ್ನು ಬೋಧಿಸುತ್ತದೆ. ಆತನು ಜಗತ್ಕಾರಣನೆಂದೂ, ಸರ್ವಕ್ಕೂ ಶೇಷಿ ಎಂದೂ, ಶ್ರಿಯಃ ಪತಿ ಎಂದೂ, ಸರ್ವ ರಕ್ಷಕನೆಂದೂ ಅಕಾರವು ಬೋಧಿಸುತ್ತದೆ. ಅವರಕ್ಷಣೆ ಇತ್ಯಾದಿ ಧಾತುವ್ಯುತ್ಪತ್ತಿಗಳಿಂದುಂಟಾದ ಅರ್ಥಗಳು ಇವು ಎಂದು ಹಿಂದೆಯೇ ಹೇಳಲ್ಪಟ್ಟಿತು. ಆದುದರಿಂದ ಜೀವಾತ್ಮನು ಶ್ರಿಯಃಪತಿಗೆ

ಶೇಷಭೂತನಾದವನು; ನಿಯಾಮ್ಯನು; ತನ್ನ ಸ್ವಾಮಿಗೆ **ಪರತಂತ್ರನು, ಸ್ವತಂತ್ರ** ನಲ್ಲವು. ತಾನು ಸ್ವಾಮಿಗೆ ಪರತಂತ್ರನಾಗಿರುವಾಗ **ಸ್ವತಂತ್ರನೆಂಬ ಭಾವನೆಯು** ಚೋರಕೃತ್ಯವು. ತಾನು ಸ್ವಾಮಿಯ ಸ್ವತ್ತು **ಆತನೇ ಸ್ವಾಮಿಯು.** ಇದೇ **"ಯೋನ್ಯಥಾ ಸಂತಮಾತ್ಮನ ಯೋನ್ಯಥಾ ಪ್ರತಿಪದ್ಯತೇ। ಕಿಂತೇನ ನಕೃತಂ ಕಾರ್ಯಂ ಚೋರೇಣಾತ್ಮಾ ಪಹಾರಿಣಾ"** ಎಂದು ಹೇಳಲ್ಪಟ್ಟಿತು. ಇದು ತನ್ನ ಗಂಡನಾದ ದುಷ್ಯಂತನಿಂದ ನಿರಾಕರಿಸಲ್ಪಟ್ಟಾಗ ಶಕುಂತಳೆಯು ಹೇಳುವ ವಾಕ್ಯವು.

ಶ್ರಿಯಃಪತಿಗೆ ಶೇಷನೆಂಬ ಅನುಸಂಧಾನ ಉಂಟಾಗುವದೇನೋ ಸಮಂಜಸವು ತದಿತರರಾದ ಅನ್ಯದೇವತೆಗಳೇನು, ಮತ್ತು ಇತರ ಸಾಮಾನ್ಯ ಮನುಷ್ಯರೇನು ಇವರುಗಳಿಗೆ ಶೇಷನೋ ಎಂದರೆ **ಇತರ ಶೇಷತ್ವಧೀಶ್ಚೇತ್,** ಇತರರಿಗೆ ಎಂದರೆ ಶ್ರೀ ಮಹಾವಿಷ್ಣುವಲ್ಲದೆ ಇತರರಾದ ಬ್ರಹ್ಮರುದ್ರೇಂದ್ರಾದಿಗಳಿಗೂ ಇತರ ಮನುಷ್ಯರಿಗೂ ತನಗೂ ಸಹ ಶೇಹಭೂತನೆಂದು ಬುದ್ಧಿಯುಂಟಾದರೆ **ಸಾಧು ವಿದ್ಯಾತ್ ದ್ವಿತೀಯಂ ಪದಮ್;** ದ್ವಿತೀಯ ಪದವು ಅವಧಾರಣಾರ್ಥವುಳ್ಳ **ಉಕಾರವು;** ಆದುದರಿಂದ ಶ್ರಿಯಃಪತಿಗೇ ಶೇಷಭೂತನೇ ವಿನಾ ಇನ್ನು ಯಾರಿಗೂ ಅಲ್ಲವೆಂಬ ಅರ್ಥವುಂಟಾಗುತ್ತದೆ. ಆದರೆ ಯಾವಾಗ ಶ್ರಿಯಃಪತಿಗೆ ಶೇಷಭೂತ ನೆಂದಾಯಿತೋ ಆಗ ಆತನೊಂದಿಗೇ ಸೇರಿ ಪರತತ್ವಕ್ಕೆ ಸೇರಿದ ಲಕ್ಷ್ಮಿಗೂ ತದೀಯ ರಾದ ವೈಷ್ಣವ ಭಾಗವತರಿಗೂ ಶೇಷಭೂತನೆಂಬುದು ಸಿದ್ಧವು. ಆದುದರಿಂದ **ಇತರ ಶೇಷತ್ವ** ಶಬ್ದಕ್ಕೆ ಲಕ್ಷ್ಮೀಭಾಗವತರು ವಿನಾ ಇತರರೆಂದು ಅರ್ಥಮಾಡ ತಕ್ಕದ್ದು.

ಆತ್ಮತ್ರಾಣೋನ್ಮುಖಶ್ಚೇತ್ - ತನ್ನನ್ನು ತಾನೇ ರಕ್ಷಿಸಿಕೊಳ್ಳಬೇಕೆಂದು ಉದ್ಯುಕ್ತನಾದರೆ, ಎಂದರೆ ತನಗೆ ಸಾಧನಗಳು ರಕ್ಷಿಸಿಕೊಳ್ಳುವದಕ್ಕೆ ತಿಳಿಯುವದು, ತನ್ಮೂಲಕ ತಾನು ರಕ್ಷಿಸಿಕೊಳ್ಳುವನೆಂಬ ಬುದ್ಧಿಯುಂಟಾದರೆ, **ಆಗ ನಮಃ** ಎಂಬ ಮೂಲ ಮನ್ತ್ರದ ಎರಡನೆಯ ಪದದ ಅರ್ಥವನ್ನು ಅನುಸಂಧಾನಮಾಡಿ ಅಂತಹ ಬುದ್ಧಿಯನ್ನು ತ್ಯಜಿಸತಕ್ಕದ್ದು. ಹೇಗೆಂದರೆ ಅಖಂಡ ನಮಸ್ಸು ಅಕಾರವಾಚ್ಯ ವಿಷ್ಣುವಿನಲ್ಲಿ ಮಾಡುವ ರಕ್ಷಿಸು ಎಂಬ ಯಾಚನೆಯು, ಆತನೇ ಶರಣ್ಯನೇ ವಿನಾ ತನಗೆ ರಕ್ಷಿಸಿಕೊಳ್ಳುವ ಶಕ್ತಿಯಿಲ್ಲದ ಅಕಿಂಚನನು. **ಈ ಅಖಂಡ** ನಮಸ್ಸನ್ನು ಸಖಂಡ ನಮಸ್ಸಿನೊಂದಿಗೆ ಸೇರಿಸಿದರೆ, **ಮಃನ** ನನ್ನನ್ನು ರಕ್ಷಿಸಿಕೊಳ್ಳುವ ಶಕ್ತಿಯು ತನಗಿಲ್ಲವು. ಆದುದರಿಂದ ಅಹಂಕಾರ ಮಮಕಾರಗಳೂ ತೊಲಗುವುವು. ಶ್ರಿಯಃಪತಿಯೇ ರಕ್ಷಕನೇ ವಿನಾ ನನಗೆ ನಾನು ರಕ್ಷಕನಲ್ಲವೆಂಬರ್ಥವು ತೋರಿಬರುತ್ತದೆ.

ಬಾಂಧವಾಭಾಸಲೋಲಶ್ಚೇತ್ - ಉಪಾಧಿಯಿಂದ ಬಂಧುಗಳಾಗಿ ತೋರು ವವರಲ್ಲಿ ನೀನು ಆಸಕ್ತಿಯುಳ್ಳವನಾದರೆ, ಅರ್ಜುನನು ಹೇಗೆ ಭೀಷ್ಮ ದ್ರೋಣ

ದುರ್‍ಯೋಧನಾದಿಗಳು ಗುರುಗಳು ಬಂಧುಗಳು ಎಂದು ಲೋಲನಾದನೋ ಹಾಗೆ ಆದರೆ, ಆಗ **ಶಬ್ದಂ ನಾರಾಯಣಾಖ್ಯಂ** - ನಾರಾಯಣವೆಂಬ ಮೂಲ ಮನ್ತ್ರದ ಮೂರನೆಯ ಪದದ ಅರ್ಥವನ್ನು ಅನುಸಂಧಾನ ಮಾಡಿದರೆ ಅಂತಹ ಭ್ರಮವೂ ಕಳೆಯುತ್ತದೆಂದುಹೇಳುತ್ತಾರೆ. ಹೇಗೆಂದರೆ:—**ನಾರಾಣಾಂ ಅಯನಂ** ಎಂಬ ತತ್ಪುರುಷ ಸಮಾಸದಿಂದ ಸಮಸ್ತ ಜೀವಾತ್ಮರಿಗೆ ಆತನೇ ಆಧಾರ, ಗತಿ, ಪ್ರಾಪ್ಯನು ಎಂಬ ಅರ್ಥ ಉಂಟಾಗುತ್ತದೆ. ಮುಮುಕ್ಷುವಿಗೆ ಮುಖ್ಯವಾಗಿ ಸರ್ವವಿಧ ನಿರುಪಾಧಿಕ ಬಂಧುವೂ ಶ್ರಿಯಃಪತಿಯೇ. ಇಲ್ಲಿನ ಬಂಧುಗಳಾದರೋ ಸೋಪಾಧಿಕರು. ಆದುದರಿಂದಲೇ ಈಶ್ವರನು ಬಾಂಧವಾಭಾಸವೆಂಬ ಪ್ರಯೋಗವು. "**ಮಾತಾ ಪಿತಾ ಭ್ರಾತಾ ನಿವಾಸ ಶ್ಶರಣಂ ಸುಹೃತ್**" ಎಂದು ಶ್ರುತಿಯು ಹೇಳುತ್ತದೆ. ಲಕ್ಷ್ಮಣನು ಶ್ರೀರಾಮಚಂದ್ರ ಪ್ರಭುವಿನಲ್ಲಿ ಹಾಗೆಯೇ ಅರಿಕೆ ಮಾಡಿಕೊಳ್ಳುತ್ತಾನೆ. "**ಅಹಂ ತಾವನ್ಮಹಾರಾಜೇ ಪಿತೃತ್ವಂನೋಪ ಲಕ್ಷಯೇ । ಭರ್ತಾ ಬಂಧುಶ್ಚ ಭ್ರಾತಾಚ ಪಿತಾಚ ಮಮ ರಾಘವಃ**" (ರಾ. ಅಯೋಧ್ಯಾ) ದಶರಥನಲ್ಲಿ ನನಗೆ ಪಿತೃ ಭಾವವು ಕಾಣಬರಲಿಲ್ಲವು. ನಮ್ಮ ಶ್ರೀ ರಾಮಚಂದ್ರಪ್ರಭುವೇ ನನಗೆ ಸರ್ವ ವಿಧ ಬಂಧುವು, ರಕ್ಷಕನೂ, ಅಣ್ಣನೂ, ತಂದೆಯೂ ಎಲ್ಲಾ ಅವನೇ ಎಂದು ಹೇಳಿ ಕೊಂಡಿರುತ್ತಾನೆ. ಶ್ರೀ ಯಾಮುನ ಮುನಿಗಳ "**ಪಿತಾತ್ವಂ ಮಾತಾತ್ವಂ**" ಎಂಬ ಶ್ಲೋಕವನ್ನೂ ಶ್ರೀ ಭಾಷ್ಯಕಾರರ ಶರಣಾಗತಿ ಗದ್ಯದಲ್ಲಿರುವ "**ತ್ವಮೇವ ಮಾತಾಚ ಪಿತಾತ್ವಮೇವ**" ಎಂಬ ಶ್ಲೋಕವನ್ನೂ ಅನುಸಂಧಾನಮಾಡ ಬಹುದು.

ವಿಷಯ ಚಪಲ ಧೀಶ್ಚೇತ್ - ವಿಷಯೋಪ ಭೋಗಗಳನ್ನು ಕಂಡು ಚಪಲ ಚಿತ್ತನಾದರೆ, ಪ್ರಪನ್ನನು **ಚತುರ್ಥೀಂ ವಿದ್ಯಾತ್** - ನಾರಾಯಣಾಯ ಎಂಬ ಮೂರನೆಯ ಪದದಲ್ಲಿರುವ ಚತುರ್ಥಿಯಿಂದ ತೋರಿಬರುವ ಅರ್ಥವನ್ನು ಅನು ಸಂಧಾನ ಮಾಡಿದರೆ ವಿಷಯ ಚಾಪಲ್ಯವು ತೊಲಗಿ, ವೈರಾಗ್ಯ ಉಂಟಾಗಿ ಪರಿಪೂರ್ಣ ಬ್ರಹ್ಮಾನುಭವದೊಂದಿಗೆ ಆತನಿಗೆ ಮಾಡುವ ಕೈಂಕರ್ಯದ ಆನಂದವೇ ಶಾಶ್ವತವಾದ ಪದವೆಂಬ ಜ್ಞಾನ ಉಂಟಾಗತ್ತದೆ. ಇಹಲೋಕದ ವಿಷಯ ಭೋಗಗಳೆಲ್ಲಾ ಅಶಾಶ್ವತವೆಂದೂ ದುಃಖೋದರ್ಕ ದುಃಖಮಿಶ್ರತ್ವಯುಕ್ತವಾದವೂ ಎಂಬ ಜ್ಞಾನವೂ ಲಭಿಸುತ್ತದೆ. ಇಲ್ಲಿನ ಭೋಗಗಳೆಲ್ಲಾ "**ಸುಖಸ್ಯಾ ನಂತರಂ ದುಃಖಂ ದುಃಖಸ್ಯಾ ನಂತರಂ ಸುಖಂ**" ಎಂದೂ, "**ನಾಸ್ತಿ ರಾಗ ಸಮಂ ದುಃಖಂ ನಾಸ್ತಿ ತ್ಯಾಗ ಸಮಂ ಸುಖಮ್**" (ಭಾರತ) ಇತ್ಯಾದ್ಯನೇಕ ಪ್ರಮಾಣಗಳು ಅನುಸಂಧೇಯಗಳು. ಗೀತೆಯಲ್ಲಿ ಈ ವಿಷಯೋಪ ಭೋಗಗಳ ಮೂಲಕ ಮನುಷ್ಯನು ಆತ್ಮನಾಶವನ್ನು ಮಾಡಿಕೊಳ್ಳುತ್ತಾನೆಂದು "**ಕಾಮಾ ತ್ಕ್ರೋಧೋಭಿಜಾಯತೇ**" ಎಂದಾರಂಭಿಸಿ ಹೇಳಿರುತ್ತದೆ. ಒಂದೊಂದು ಇನ್ದ್ರಿಯವೂ ಈ ದೇಹದ ಯಜಮಾನನನ್ನು ಒಂದೊಂದು ಕಡೆಗೆ ಸೆಳದು

"ಬಹ್ವಸಪತ್ನ್ಯ ಇವಗೇಹ ಪತಿಂ ಉನನ್ತಿ" ಅನೇಕ ಹೆಂಡರನ್ನು ಮದುವೆ ಮಾಡಿಕೊಂಡವನು ಹೇಗೆ ನಾಶ ಹೊಂದುವನೋ ಹಾಗೆ ನಾಶ ಹೊಂದುವನೆಂದು ಭಾಗವತದಲ್ಲಿ **"ಜಿಹ್ವೈಕತೋ ಮುಮುಪಕರ್ಷತಿ"** ಎಂಬ ಶ್ಲೋಕದಲ್ಲಿ ಹೇಳಲ್ಪಟ್ಟಿರುತ್ತದೆ. ಆದುದರಿಂದ **"ವಿಷಯ ಚಪಲತ್ವವು"** ಕೂಡದೆಂದು ಹೇಳಿದರು. ತನ್ನಿವೃತ್ತಿಗಾಗಿ ನಾ ರಾ ಯ ಣ ಶಬ್ದದ **ಚತುರ್ಥಿಂ ವಿದ್ಯಾತ್** ಎಂದು ಉಪದೇಶಿಸಿದರು.

ಇಷ್ಟು ಮಾತ್ರವೇ ಅಲ್ಲದೆ ಮೂಲ ಮನ್ತ್ರದಲ್ಲಿ ಅರ್ಥ ಪಂಚಕಗಳನ್ನೂ ಗ್ರಹಿಸಬಹುದು. ಪ್ರಾಪ್ತಾವಾದ ಜೀವಾತ್ಮನ ಸ್ವರೂಪವನ್ನು ಪ್ರಣವದ ಮಕಾರ ಮೂಲಕವೂ, ಪರಬ್ರಹ್ಮ ಸ್ವರೂಪವನ್ನೂ ಅಕಾರ ನಾರಾಯಣ ಶಬ್ದಗಳಿಂದಲೂ, ಪ್ರಾಪ್ಯೋಪಾಯವನ್ನು ಸಖಂಡನಮಸ್ಸಿನಿಂದಲೂ, ಫಲವು ವ್ಯಕ್ತಚತುರ್ಥಿಯಿಂದಲೂ ಪ್ರಾಪ್ತಿ ವಿರೋಧಿಯನ್ನು, ಸಖಂಡನಮಸ್ಸಿನ **ಮಃ** ಎಂದರೆ ಮಮ ಎಂಬ ಷಷ್ಠ್ಯಂತ ಪದದಿಂದಲೂ ಗ್ರಹಿಸಬಹುದು. ಮುಮುಕ್ಷುವಿಗೂ ಪರಮ ಪುರುಷನಿಗೂ ಇರುವ ನವವಿಧ ಸಂಬಂಧವನ್ನು ಗ್ರಹಿಸಬಹುದು. ಶ್ರೀ ನಿಗಮಾಂತ ದೇಶಿಕರವರ ಮಕ್ಕಳಾದ ನಯನಾರಾಚಾರ್ಯರವರ ರಹಸ್ಯತ್ರಯಸಾರ ಸಂಗ್ರಹ ಪಠನವಾದ ಇವುಗಳನ್ನೂ ಅಲ್ಲದೆ ಇನ್ನೂ ಅನೇಕ ಶಾಸ್ತ್ರಾಭಿಪ್ರಾಯಗಳನ್ನೂ ಗ್ರಹಿಸಬಹುದು. ನವವಿಧ ಸಂಬಂಧವು **"ಪಿತಾಚ ರಕ್ಷಕ ಶ್ಶೇಷೀ ಭರ್ತಾ ಜ್ಞೇಯೋ ರಮಾಪತಿಃ । ಸ್ವಾಮ್ಯಾಧಾರೋ ಮಹಾತ್ಮಾಚ ಭೋಕ್ತಾ ಚೇತಿ ಮನೂದಿತಃ"** ಎಂಬಲ್ಲಿ ಹೇಳಲ್ಪಟ್ಟಿರುತ್ತದೆ. (೧) ಪಿತಾ ಪುತ್ರ (೨) ರಕ್ಷಕ ರಕ್ಷ್ಯ (೩) ಶೇಷಿ ಶೇಷ (೪) ಭರ್ತಾ ಭಾರ್ಯಾ (೫) ಜ್ಞೇಯ ಜ್ಞಾತಾ (೬) ಸ್ವಾಮಿ ಸ್ವಂ (೭) ಆಧಾರಾಧೇಯ (೮) ಆತ್ಮಾಶರೀರ (೯) ಭೋಕ್ತಾ ಭೋಗ್ಯ ಹೀಗೆ ೯ ವಿಧ ಸಂಬಂಧಗಳು.

(೧) ಅಕಾರದಿಂದ ಜಗತ್ಕಾರಣ ಬೋಧಿತವಾಗುವದರಿಂದ ಈಶ್ವರನು ಪಿತಾ, ಜೀವಾತ್ಮನು ಪುತ್ರನು. ಇದಕ್ಕೆ ಪ್ರಮಾಣಗಳು **"ಯೋನಃ ಪಿತಾ ಜನಿತಾ"** (ಋಗ್ವೇದ). **"ಪಿತಾಹ ಮಸ್ಯ ಜಗತಃ ಮಾತಾಧಾರಾ ಪಿತಾಮಹಃ"** (ಗೀ. ೯. ೧೭.) **"ಪಿತಾತ್ವಂ ಮಾತಾತ್ವಮ್"** (ಸ್ತೋತ್ರ ರತ್ನ) **"ಪಿತಾ ಸಿ ಲೋಕಸ್ಯ ಚರಾ ಚರಸ್ಯ"** (ಗೀ. ೧೧. ೧೩.) ಇತ್ಯಾದಿ.

(೨) ರಕ್ಷಕ ರಕ್ಷ್ಯ ಸಂಬಂಧ—ಅವರಕ್ಷಣೆ ಧಾತುವಿನಿಂದ ಅಕಾರವು ಸರ್ವ ರಕ್ಷಕತ್ವವನ್ನು ಬೋಧಿಸುತ್ತದೆ. ಪ್ರಮಾಣಗಳು **"ಭುವನಸ್ಯ ಗೋಪ್ತಾ"** ಶ್ವೇ. **"ಗತಿರ್ಭರ್ತಾ ಪ್ರಭು ಸ್ಸಾಕ್ಷೀ ನಿವಾಸ ಶ್ಶರಣಂ ಸುಹೃತ್"** (ಗೀ. ೯. ೧೮.) ರಾಮಾಯಣದಲ್ಲಿ **"ರಕ್ಷಿತಾ ಜೀವ ಲೋಕಸ್ಯ ಸ್ವಜನಸ್ಯ ಚ ರಕ್ಷಿತಾ"** (ಅಯೋಧ್ಯಾ)

(೩) **ಶೇಷಿ ಶೇಷ** ಸಂಬಂಧವು—ಅಕಾರದ ಲುಪ್ತ ಚತುರ್ಥಿಯಿಂದಲೂ ಉಕಾರದ ಅವಧಾರಣಾರ್ಥದಿಂದಲೂ, ಮಕಾರ ವಾಚ್ಯನಾದ ಜೀವನು ಶ್ರಿಯಃಪತಿ ಗೇನೇ ಶೇಷಭೂತನು ಎಂಬುದರಿಂದ ತೋರಿ ಬರುತ್ತದೆ. ಇತರ ಪ್ರಮಾಣಗಳು—**"ನ ಚ ಸೀತಾ ತ್ವಯಾ ಹೀನಾ ನ ಚಾಹಮಪಿ ರಾಘವ। ಮುಹೂರ್ತ ಮಪಿ ಜೀವಾವೋ ಮತ್ಸ್ಯಾವಿವ ಜಲಾದ್ಧೃತೌ"** (ರಾ. ಅಯೋಧ್ಯಾ). **"ದಾಸ ಭೂತಾಸ್ಸತ್ವಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ"** ಇತ್ಯಾದಿ.

(೪) **ಭರ್ತೃ ಭಾರ್ಯಾ**—ಪತ್ನಿಯು ಪತಿಗೆ ಶೇಷಭೂತಳಾದುದರಿಂದ ಇದೂ ಶೇಷಿಶೇಷ ಸಂಬಂಧದಲ್ಲೇ ಸೇರಿದುದು. ಪುರುಷ ಸೂಕ್ತದಲ್ಲಿ ಸ್ವಾಮಿಯೊಬ್ಬನೇ ಪುರುಷನೆಂದು ಹೇಳಿರುವದರಿಂದ ಆತನಿಂದ ಭರಿಸಲ್ಪಟ್ಟ ಸರ್ವಜಗತ್ತೂ **"ಸ್ತ್ರೀ ಪ್ರಾಯ ಮಿತರತ್"** ಎಂಬ ಮಹರ್ಷಿಯ ದಿವ್ಯ ಸೂಕ್ತಿಯಿಂದಲೂ ಈ ಸಂಬಂಧವು ವ್ಯಕ್ತವು, ಶ್ರೀಮದ್ರಾಮಾಯಣದಲ್ಲಿ **"ಅಹಂತಾವನ್ಮಹಾರಾಜೇ ಪಿತೃತ್ವಂ ನೋಪ ಲಕ್ಷಯೇ। ಭರ್ತಾ ಬಂಧುಶ್ಚ ಭ್ರಾತಾಚ ಪಿತಾಚ ಮಮ ರಾಘವಃ** ಎಂಬ ಅಮೋಘ ಲಕ್ಷ್ಮಣೋಕ್ತಿಯಿಂದ ವ್ಯಕ್ತವು. ಈ ಸಂಬಂಧವನ್ನು ಶ್ರೀ ಕೃಷ್ಣನಾಗಿ ಅವತರಿಸಿ, ಮಹರ್ಷಿಗಳನ್ನು ಗೋಪಿಕಾ ಸ್ತ್ರೀಯರನ್ನಾಗಿ ಅವತರಿಸುವ ಹಾಗೆ ಮಾಡಿ, ಅವರೊಂದಿಗೆ ಸರಸ ಸಲ್ಲಾಪ, ತನ್ನ ಪರತ್ವ ಸೇವೆ ಮುಂತಾದ್ದನ್ನು ದಯಪಾಲಿಸಿದುದರಿಂದಲೂ ವ್ಯಕ್ತವು.

(೫) **ಜ್ಞೇಯ ಜ್ಞಾತೃ ಸಂಬಂಧ**—ಮಕಾರ ವಾಚ್ಯನು ಜ್ಞಾನ ಸ್ವರೂಪನೂ ಜ್ಞಾನ ಗುಣಕನೂ ಆದುದರಿಂದ ಜೀವಾತ್ಮನಿಗೆ ಜ್ಞಾತೃತ್ವ ಉಂಟು. ಆತನ ಮುಖ್ಯ ಕರ್ತವ್ಯವು ಪರಮಾತ್ಮನ ಸ್ವಭಾವ ಸ್ವರೂಪಗಳನ್ನು ತಿಳಿಯತಕ್ಕದ್ದಾಗಿರುತ್ತದೆ. ಇತರ ಪ್ರ ಮಾ ಣ ಗ ಳು **"ಜ್ಞಾತುಂ ದ್ರಷ್ಟುಂಚ ತತ್ವೇನ ಪ್ರವೇಷ್ಟುಂಚ ಪರಂತಪ"** (ಗೀ. ೧೧.೫೪.) **"ಜ್ಞೇಯಂ ಯತ್ತತ್ಪ್ರವಕ್ಷ್ಯಾಮಿ ಯಜ್ಜ್ಞಾತ್ವಾಽಮೃತ ಮಶ್ನುತೇ"** (ಗೀ. ೧೩.೧೨.) **"ಜ್ಯೋತಿಷಾಮಪಿ"** ಇತ್ಯಾದಿ.

(೬) **ಸ್ವಾಮಿ ಸ್ವಮ್**—ಇದು ಮೇಲಿನ ಶೇಷಿತ್ವ ಶೇಷತ್ವ ಸಂಬಂಧ ದಿಂದಲೇ ಉಂಟಾದುದು. ಶೇಷತ್ವವನ್ನು ತಿಳಿಯುವ ಚೇತನನಾದರೆ ಆಗ ತಾನು ದಾಸಭೂತನು ಪರಮಾತ್ಮನು ಸ್ವಾಮಿ ಎಂಬುದು ವೇದ್ಯವು. ಇದಕ್ಕೆ ಇತರ ಪ್ರಮಾಣಗಳು ಮೇಲೆ ಉದಹರಿಸಿದ **"ದಾಸಭೂತಾ ಸ್ಸ್ವತಸ್ಸರ್ವೇ"** ಎಂಬುದೂ, **"ಪತಿಂ ವಿಶ್ವಸ್ಯ"** ಎಂಬ ಶ್ರುತಿ ವಾಕ್ಯವೂ, **"ಸ್ವತ್ವಮಾತ್ಮನಿ ಸಂಜಾತಂ ಸ್ವಾಮಿತ್ವಂ ಬ್ರಹ್ಮಣಿ ಸ್ಥಿತಮ್"** ಎಂಬುದೂ; **"ಮಯಿ ಸರ್ವಮಿದಂ ಪ್ರೋತಮ್"** (ಗೀ. ೭. ೭.) **"ಈಶ್ವರ ಸ್ಸರ್ವ ಭೂತಾನಾಂ"** **"ದಿವ್ಯಾ ಹ್ಯಾತ್ಮ ವಿಭೂತಯಃ"** (ಗೀ. ೧೦. ೧೬.) ಇತ್ಯಾದಿಗಳೂ.

(೭) **ಆಧಾರಾಧೇಯ ಸಂಬಂಧವು**—ಇದೂ ಮಕಾರ ವಾಚ್ಯ ಜೀವನು ಸ್ವಾಮಿಗೆ ಅಪೃಥಕ್ಸಿದ್ಧ ವಿಶೇಷಣನಾಗಿರುವದರಿಂದಲೂ, ನಾರಾಯಣ ಶಬ್ದದಲ್ಲಿರುವ

ಅಯನ ಶಬ್ದದಿಂದ ತೋರಿಬರುತ್ತದೆ ನಾರಾಣಾಂ ಅಯನವು. ಪ್ರಾಪ್ಯನು, ಆಧಾರನು, ಗತಿಯು ಇದಕ್ಕೆ ಪ್ರಮಾಣವು. ೨ ಲೆ ಉದಾಹರಿಸಿದುದು. **"ಮಯಿ ಸರ್ವಮಿದಂ ಪ್ರೋತಂ"** (ಗೀ. ೭. ೭.) ಇನ್ನೊಂದು ಕಡೆಯಲ್ಲಿ **"ತ್ವಮಸ್ಯ ವಿಶ್ವಸ್ಯ ಪರಂ ನಿಧಾನಂ"** ಎಂಬುದಕ್ಕೆ ಶ್ರೀ ಯತಿವರ್ಯರ ಭಾಷ್ಯದಲ್ಲಿ **"ವಿಶ್ವಸ್ಯಾಸ್ಯ ಪರಮಾಧಾರಭೂತ ಸ್ತ್ವಮೇವ"** ಎಂದಿರುತ್ತದೆ.

(೮) **ಶರೀರಾತ್ಮ ಸಂಬಂಧವು** ಅಥವಾ ಶರೀರ ಶರೀರಿ ಸಂಬಂಧವು—ಇದೂ ನಾರಾಯಣ ಶಬ್ದದ ಬಹುವ್ರೀಹ್ಯರ್ಥದಿಂದ ತೋರಿಬರುತ್ತದೆ. ಇತರ ಪ್ರಮಾಣಗಳು (೧) **"ಯ ಆತ್ಮನಿ ತಿಷ್ಠನ್ ಯ ಸ್ಯಾತ್ಮಾ ಶರೀರಮ್"** (೨) **"ಯಸ್ಯಾಕ್ಷರಂ ಶರೀರಮ್"** (೩) **"ಐತದಾತ್ಮ್ಯ ಮಿದಂ ಸರ್ವಂ"** (೪) **"ಈಶ್ವರ ಸ್ಸರ್ವ ಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ"** (ಗೀ. ೧೮.) (೫) **"ದ್ವಾಸು ಪರ್ಣಾ ಸಯುಜಾ ಸಖಾಯಾ ಸಮಾನ ವೃಕ್ಷಂ ಪರಿಷಸ್ವಜಾತೇ"** (೬) **ತತ್ಸೃಷ್ಟ್ವಾ ತ ದೇವಾನು ಪ್ರಾವಿಶತ್"** (ತೈತ್ತರೀಯ) (೭) **"ಅನ್ತಃಪ್ರವಿಷ್ಟಶ್ಶಾಸ್ತಾ ಜನಾನಾಂ"** ಇತ್ಯಾದಿ. ಇವು ಆತನ ಅಂತರ್ಯಾಮಿತ್ವವನ್ನು ಬೋಧಿಸುತ್ತವೆ.

(೯) **ಭೋಕ್ತೃ ಭೋಗ್ಯ ಸಂಬಂಧವು**—ಪರಮ ಪುರುಷನೇ ಶೇಷಿ ಎಂದು ಪ್ರಣವದಿಂದ ಯಾವಾಗ ಏರ್ಪಟ್ಟಿತೋ ಆಗ ಪ್ರಧಾನ ಫಲಿಯು ಭಗವಂತನೇ ಎಂಬುದೂ ಏರ್ಪಟ್ಟಿತು. ಹಾಗೆಯೇ **ನಾರಾಯಣಾಯ** ಎಂಬಲ್ಲಿ ಮುಕ್ತರಿಗೆಲ್ಲಾ ಗತಿಯು ಪ್ರಾಪ್ಯನು ಎಂದಾಯಿತೋ ಆಗ ಅವರಿಗೆಲ್ಲಾ ತಾನೇ ಆನಂದಮಯನಾಗಿ. **ಆನಂದಯಾತಿ** ಎಂಬ ತೈತ್ತರೀಯ ವಾಕ್ಯಾನುಸಾರವಾಗಿ ಆನಂದವನ್ನುಂಟುಮಾಡಿ ಆನಂದಿಸುವನು. **"ಉತ್ಸವೇಷು ಚ ಸರ್ವೇಷು ಪಿತೇವ ಪರಿತುಷ್ಯತಿ"** ಎಂಬುದು ಅನುಸಂಧೇಯವು. ಆದುದರಿಂದ ನಿತ್ಯ ವಿಭೂತಿಯು ಭೋಗ ವಿಭೂತಿಯೆಂಬ ಪಾದ್ಮೋತ್ತರ ಹೇಳಿಕೆಯೂ, ಶ್ರೀ ಪರಾಶರ ಭಟ್ಟರ ದಿವ್ಯ ಸೂಕ್ತಿಯೂ ಇವೆ. ಲೀಲಾ ವಿಭೂತಿಯಲ್ಲೂ ಕೂಡ ಸರ್ವೇಶ್ವರನೇ ಭೋಕ್ತಾ ಎಂದು, ಗೀತೆಯಲ್ಲಿ **"ಅಹಂಹಿ ಸರ್ವ ಯಜ್ಞಾನಾಂ ಭೋಕ್ತಾನಾಂ ಪ್ರಭುರೇವಚ"** ಹೇಳಿರುತ್ತದೆ. (೯.೨೪.) **"ಪತ್ರಂ ಪುಷ್ಪಂ"** (೯.೨೬.) ಎಂಬ ಗೀತಾ ಶ್ಲೋಕವೂ ಅನುಸಂಧೇಯವು.

ಅವತಾರಿಕೆಯು—ಹೀಗೆ ಮೂಲಮನ್ತ್ರದಲ್ಲಿ ನವವಿಧ ಸಂಬಂಧದ ಅನುಸಂಧಾನವನ್ನು ಮಾಡಬಹುದು. ಶ್ರೀ ಪರಾಶರ ಭಟ್ಟರವರು ಮೇಲಿನ ನಾಲ್ಕು ಶ್ಲೋಕಗಳಿಂದ ಮೂಲ ಮನ್ತ್ರಾರ್ಥದ ಸಙ್ಗ್ರಹಾರ್ಥಗಳನ್ನು ವಿವರಿಸಿದರು. ಮುಂದಿನ ಎರಡು ಶ್ಲೋಕಗಳಿಂದ ದ್ವಯ ಮನ್ತ್ರದ ಸಙ್ಗ್ರಹಾರ್ಥಗಳನ್ನು ತಿಳಿಸುತ್ತಾರೆ. ಈ ಎರಡು ಶ್ಲೋಕಗಳಲ್ಲಿ ಮೊದಲನೆಯ ಶ್ಲೋಕವಾದ **"ನೇತೃತ್ವಂ"** ಎಂಬುದರಿಂದ ಅದರಲ್ಲಿರುವದು ಆರು ಪದಗಳೆಂದೂ, ಎರಡು ಖಂಡಗಳೆಂದೂ ತಿಳಿಸಿ, ಅದರಲ್ಲಿರುವ ಪದ ಯೋಜನೆಯಿಂದ ಹತ್ತು ಅರ್ಥಗಳು ತೋರಿಬರು

ನೇತೃತ್ವಂ ನಿತ್ಯಯೋಗಂ ಸಮುಚಿತ ಗುಣ ಜಾತಂ ತನುಖ್ಯಾಪನಂಚೋ ಽಪಾಯಂ ಕರ್ತವ್ಯ ಭಾಗಂತ್ವಥ ಮಿಥುನಂ ಪರಂ ಪ್ರಾಪ್ಯಮೇವಂ ಪ್ರಸಿದ್ಧಮ್ ।

ತ್ರವೆಂದು ಉಪದೇಶಿಸಿ, ಆ ಕಾರಣದಿಂದ ಇದು ಅನುಷ್ಠಾನ ಮಂತ್ರವಾಗಿ ಶರಣಾಗತಿಮನ್ತ್ರವೆಂದೂ, ಈ ಮನ್ತ್ರದ ಮೂಲಕ ಆಚಾರ್ಯ ಮುಖೇನ ಅನುಷ್ಠಿಸುವವನು ಕೃತಕೃತ್ಯನಾಗುವನೆಂದು ಹೇಳುತ್ತಾರೆ. "**ಸಕೃಜ್ಜಪ್ತೇನ ಮನ್ತ್ರೇಣ ಕೃತಕೃತ್ಯ ಸ್ಸುಖೀ ಭವೇತ್ । ದ್ವಯೇನ ಪ್ರಾಪ್ನುಯಾತ್ಪತ್ರ ತದ್ವಿಷ್ಣೋಃ ಪರಮಂ ಪದಮ್**" ಎಂಬುದು ಅನುಸಂಧೇಯವು. (ಭಗವಚ್ಛಾಸ್ತ್ರವು)

ಅರ್ಥವು—ನೇತೃತ್ವಂ – ನಿತ್ಯ ವಿಭೂತಿಗೆ ಕರೆದುಕೊಂಡು ಹೋಗುವ ಪುರುಷ ಕಾರತ್ವವೂ, **ನಿತ್ಯಯೋಗಂ** – ಯಾವಾಗಲೂ ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣವಾಗಿ ಸರ್ವದೇಶ, ಸರ್ವಕಾಲ ಸರ್ವಾವಸ್ಥೆಯಲ್ಲೂ ಅವನೊಂದಿಗೆ ಒಟ್ಟಿಗಿರೋಣವೂ, **ಸಮುಚಿತ ಗುಣಜಾತಂ** – ಜೀವಾತ್ಮರಿಂದ ಆಶ್ರಯಿಸಲ್ಪಡಲು ಯೋಗ್ಯವಾದ ಕಲ್ಯಾಣ ಗುಣಗಳ ಸಮೂಹವೂ, **ತನುಖ್ಯಾಪನಂ** – ದಿವ್ಯ ಮಙ್ಗಳ ವಿಗ್ರಹದ ಪ್ರಕಾಶ ಪಡಿಸೋಣವೂ, **ಉಪಾಯಂ** - ಮೋಕ್ಷಪ್ರಾಪ್ತಿಗೆ ಸಹಾಯಕನಾಗಿ ಸಿದ್ಧೋಪಾಯನಾಗಿರುವ ಭಾವವೂ, **ಕರ್ತವ್ಯ ಭಾಗಂ** - ತನ್ನನ್ನು ಪ್ರಾಪ್ಯವಾಗಿ ಹೊಂದಲು ಅನುಷ್ಠಿಸಬೇಕಾದ ಸಾಧ್ಯೋಪಾಯವೂ, **ಅಥ**–ಉತ್ತರಾರ್ಥದಲ್ಲಿ, ಮುಂದಕ್ಕೆ, **ಮಿಥುನಂ ಪರಂ ಪ್ರಾಪ್ಯಂ**–ಲಕ್ಷ್ಮೀನಾರಾಯಣರಿಬ್ಬರೂ ಪರತತ್ವವಾಗಿ ದಿವ್ಯ ವೈಕುಂಠದಲ್ಲಿ ಪ್ರಾಪ್ಯರಾಗಿರೋಣವೂ, **ಸ್ವಾಮಿತ್ವಂ** - ಉಭಯ ವಿಭೂತಿಗಳಿಗೂ ಅವರಿಬ್ಬರೂ ಸ್ವಾಮಿಗಳಾಗಿರುವ ಭಾವವೂ, **ಪ್ರಾರ್ಥನಾಂಚ** ಮುಕ್ತಿಯನ್ನು ಹೊಂದಿ ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲೂ ಲಕ್ಷ್ಮೀನಾರಾಯಣರಿಬ್ಬರಿಗೂ ನಿತ್ಯ ಕೈಂಕರ್ಯ ಮಾಡುವ ಪ್ರಾಪ್ತಿಯುಂಟಾಗಬೇಕೆಂಬ ಪ್ರಾರ್ಥನೆಯೂ, **ಪ್ರಬಲತರ ವಿರೋಧಿ ಪ್ರಹಾಣಂ** - ಅತ್ಯಂತ ಪ್ರಬಲಗಳಾದ ಶತ್ರುಗಳಾದ ಅಹಂಕಾರ ಮಮಕಾರಗಳಿಂದ ಬಿಡುಗಡೆಯೂ, ಇವು ತೊಲಗಬೇಕಾದರೆ ಅವಿದ್ಯಾ, ಕರ್ಮ, ವಾಸನಾ, ರುಚಿ ಪ್ರಕೃತಿ ಸಂಬಂಧ ಇವುಗಳಿಂದಲೂ ಬಿಡುಗಡೆಯೂ, ಹೀಗೆ **ದಶೈತಾನ್** - ಈ ಹತ್ತು ಅರ್ಥಗಳನ್ನೂ **ಮಂತಾರಂ** - ಅನುಸಂಧಾನ ಮಾಡುವವನನ್ನು ದ್ವಯಮನ್ತ್ರದಲ್ಲಿ ಈ ಹತ್ತು ಅಭಿಪ್ರಾಯಗಳನ್ನು ಗ್ರಹಿಸಿ ಅನುಸಂಧಾನ ಮಾಡಬಹುದೆಂಬ ಭಾವವು; ಹೀಗೆ ಅನುಸಂಧಾನ ಮಾಡುವವನನ್ನು, **ತ್ರಾಯತೇಚ** – ಆತನಿಗೆ ಹೇಯಶರೀರ ತೊಲಗಿ ಮೋಕ್ಷಪ್ರಾಪ್ತಿಯನ್ನು ಕೊಟ್ಟು ರಕ್ಷಿಸಿಯೇ ರಕ್ಷಿಸುತ್ತದೆ, **ಇತಿ** - ಎಂದು,

ಸ್ವಾಮಿತ್ವಂ ಸ್ವಾರ್ಥನಾಂ ಚ ಪ್ರಬಲತರ ವಿರೋಧಿ ಪ್ರಹಾಣಂ ದಶೈತಾ ಮನ್ತಾರಂ ತ್ರಾಯತೇ ಚೇದ್ಯಧಿಗತ ನಿಗಮಷ್ಷಟ್ಪದೋಽಯಂ ದ್ವಿಖಂಡಃ ॥೫॥

ಷಟ್ಪದಃ - ಆರು ಪದಗಳನ್ನುಳ್ಳ **ಅಯಂ** – ಈ ದ್ವಯಮನ್ತ್ರವು **ಅಧಿಗತನಿಗಮಃ**- ಕಠವಲ್ಲಿ ಶ್ವೇತಾಶ್ವತರ ಉಪನಿಷತ್ತುಗಳಲ್ಲಿ ಪ್ರತಿಪಾದ್ಯವಾಗಿ, ದ್ವಿಖಂಡಃ- ಪೂರ್ವೋತ್ತರ ಖಂಡಗಳನ್ನುಳ್ಳದ್ದಾಗಿರುತ್ತದೆ.

ತಾತ್ಪರ್ಯ—ದ್ವಯ ಮನ್ತ್ರವು ಕರಣ ಮನ್ತ್ರವು ಎಂದರೆ ಅನುಷ್ಠಾನ ಮನ್ತ್ರವು; ಪರಮ ಗುರುವನ್ನು ಆಶ್ರಯಿಸಿ, ಅವರು ಉಪದೇಶಿಸಿದ ಈ ಮನ್ತ್ರ ವನ್ನು ಉಚ್ಚರಿಸಿ, ಅವರು ನಮಗಾಗಿ ಶರಣಾಗತಿಯನ್ನು ಅನುಷ್ಠಿಸುವದರ ಮೂಲಕ ನಾವು ಕೃತಕೃತ್ಯರಾಗುವದರಿಂದ ಇದು ಅಮೋಘವಾದ ಶರಣಾಗತಿ ಮನ್ತ್ರವು. ಇದು ಸಂಸಾರ ವಿಚ್ಛೇದನವನ್ನುಂಟುಮಾಡಿ ಎಂದರೆ ಪ್ರಕೃತಿ ಸಂಬಂಧವನ್ನು ತೊಲಗಿಸಿ, ಮೋಕ್ಷವನ್ನು ದಯಪಾಲಿಸುವ ಹಾಗೆ ಮಾಡುವ ಮನ್ತ್ರವು. ಇದನ್ನು ಒಂದು ಸಲ ಗುರು ಮುಖೇನ ಉಚ್ಚರಿಸುವದರಿಂದ, ಇದು ಕೃತಾರ್ಥನನ್ನಾಗಿ ಮಾಡುತ್ತದೆಯಾದುದರಿಂದ, ಇದನ್ನೂ ಪ್ರತಿದಿನವೂ ಸಂಧ್ಯಾ ವಂದನಾ ನಂತರ ಮೂಲ ಮನ್ತ್ರ ಚರಮ ಶ್ಲೋಕಗಳೊಂದಿಗೆ ಜಪಿಸಿ ಈ ೧೦ ಅರ್ಥ ಗಳನ್ನೂ ಅನುಸಂಧಾನ ಮಾಡತಕ್ಕದ್ದೆಂಬ ಅಭಿಪ್ರಾಯದಿಂದ ಆ ೧೦ ಅರ್ಥಗಳನ್ನೂ ಸಙ್ಗ್ರಹವಾಗಿ ತಿಳಿಸುತ್ತಾರೆ. ಇವುಗಳನ್ನೆಲ್ಲಾ ಶ್ರೀ ನಿಗಮಾನ್ತದೇಶಿಕರವರು ಈ ಮೂರು ರಹಸ್ಯಗಳ ಅರ್ಥಗಳನ್ನೆಲ್ಲಾ ಬಹು ವಿಸ್ತರಿಸಿ ಉಪಪಾದಿಸಿರುತ್ತಾರೆ. ಆವಶ್ಯಕವಾಗಿ ಅವುಗಳನ್ನು ಗ್ರಹಿಸತಕ್ಕದ್ದಾಗಿರುತ್ತವೆ.

(೧) **ನೇತೃತ್ವಂ - ನಯತೀತಿ ನೇತ್ರೀ ತಸ್ಯಾಃ ಭಾವಃ ನೇತೃತ್ವಂ** ಎಂಬುದರಿಂದ ಲಕ್ಷ್ಮಿಯು ಪುರುಷಕಾರಭೂತಳಾಗಿ ಚೇತನನಿಗೆ ಮಾರ್ಗವನ್ನು ತೋರಿಸುವವಳು; ಪುರುಷಕಾರತ್ವ ಉಪಾಯತ್ವದಲ್ಲೆ ಸೇರಿತು, ಇದು **ಶ್ರೀಮನ್ನಾ ರಾಯಣ ಚರಣೌ** ಎಂಬ ಪ್ರಥಮ ಪದದ ಶ್ರೀಮಚ್ಛಬ್ದದಲ್ಲಿರುವ ಶ್ರೀ ಶಬ್ದಾ ರ್ಥವು. ಜೀವಾತ್ಮನನ್ನು ಉದ್ಧಾರಮಾಡುವದಕ್ಕಾಗಿ ಪರಮಾತ್ಮನೊಂದಿಗೇ ಸೇರಿ ಇದ್ದು ಆತನನ್ನು ಆಶ್ರಯಿಸಿರುವವಳು. ಗ್ರಂಥಕರ್ತರೇ ಶ್ರೀ ಗುಣರತ್ನ ಕೋಶದಲ್ಲಿ "**ಕಿಮೇತನ್ನಿರ್ದೋಷಃಕ ಇಹ ಜಗತೀತಿತ್ವ ಮುಚಿತೈರು ಪಾಯೈರ್ವಿರ್ಸ್ವಾರ್ಯಾ ಸ್ವಜನಯಸಿ ಮಾತಾ ತದಸಿನಃ**" (೫೨) ಈ ಅಭಿಪ್ರಾಯ ವನ್ನು ಪ್ರದರ್ಶಿಸಿರುತ್ತಾರೆ. ಸ್ವಾಮಿಯು ಚೇತನನನ್ನು ಅಪರಾಧಕ್ಕಾಗಿ ಶಿಕ್ಷಿಸಲು ಯತ್ನಿಸಿದರೆ, ಆತನು ತನ್ನನ್ನು ಆಶ್ರಯಿಸಿದನಲ್ಲಾ ಎಂಬ ವಾತ್ಸಲ್ಯದಿಂದ ಗಂಡ ನನ್ನು ಕುರಿತು, ಹೀಗೆ ಶಿಕ್ಷಿಸುವದು ಸರಿಯೇ, ಈ ಲೋಕದಲ್ಲಿ ಯಾರು ತಾನೇ

ದೋಷಿಗಳಲ್ಲವು ಎಂದು ಹೇಳಿ, ಉಪಾಯಗಳ ಮೂಲಕ ಭಗವನ್ನಿಗ್ರಹವನ್ನು ತಪ್ಪಿಸಿ ಅನುಗ್ರಹಿಸುವ ಹಾಗೆ ಲಕ್ಷ್ಮಿಯೇ ನೀನು ಮಾಡುತ್ತೀಯೇ; ಆದುದರಿಂದ ನೀನು **ಲೋಕಮಾತೆಯು** ಎಂದು ಉಪಪಾದಿಸಿರುತ್ತಾರೆ. ಮುಂದಿನ ೫೩ನೆಯ ಶ್ಲೋಕದಲ್ಲಿ "**ನೇತುರ್ನಿತ್ಯ ಸಹಾಯಿನೀ**" ಎಂಬ ಪ್ರಯೋಗದಿಂದ ವಿಷ್ಣುವು **ನೇತಾ**ವಾದರೆ ಲಕ್ಷ್ಮಿಯು ಹಾಗೆಯೇ ಎಂದು, **ನಿತ್ಯಸಹಾಯಿನಿ**ಯಾಗಿ ಹೇಳಿದಂತಾಗಲಿಲ್ಲವೇ? ಹಿಂದಿನ ಶ್ಲೋಕದಲ್ಲಿ **ಉಪಾಯೈರ್ವಿಸ್ಮಾರ್ಯ** ಎಂದಿರುವದರಿಂದ ಲಕ್ಷ್ಮಿಯು ಉಪಾಯಭೂತಳೆಂಬುದೂ, ಪುರುಷಕಾರತ್ವವೂ ಉಪಾಯದಲ್ಲೇ ಸೇರಿತೆಂದೂ, ಹೇಳಿದಂತಾಯಿತು. ಈ ನೇತೃತ್ವವು ಈ ಲೀಲಾ ವಿಭೂತಿಯಲ್ಲಿ ಮಾತ್ರವೇ ಅಲ್ಲದೆ ಭೋಗ ವಿಭೂತಿಯಲ್ಲೂ ಉಂಟೆಂದು ಶ್ರೀಯತಿವರ್ಯರ ವೈಕುಂಠ ಗದ್ಯದ ವಾಕ್ಯದಿಂದ ಗ್ರಹಿಸಬಹುದು; ಅಲ್ಲಿ "**ಶೇಷ ಶೇಷಾಶನಾದಿ ಸರ್ವಂ ಪರಿಜನಂ ತತ್ತ್ವದ ವಸ್ಥೋಚಿತ ಪರಿಚರ್ಯಾಯಾ ಮಾಜ್ಞಾಪಯಂತ್ಯಾ ಶೀಲ ರೂಪ ಗುಣವಿಲಾಸಾದಾಭಿರಾತ್ಮಾನುರೂಪಯಾಶ್ರಿಯಾ ಸಹಾಸೀನಂ**" ಎಂದು ಇದೆ. ಅಲ್ಲಿರುವ ನಿತ್ಯಸೂರಿಗಳನ್ನು ಅವರವರಿಗೆ ಉಚಿತವಾದ ಕೈಂಕರ್ಯದಲ್ಲಿ ಆಜ್ಞಾಪಿಸುತ್ತಾ ಇರುವಳಾದ ಶೀಲರೂಪ ಗುಣವಿಲಾಸಗಳಲ್ಲಿ ತನಗೆ ಅನುರೂಪಳಾಗಿರುವ ಲಕ್ಷ್ಮಿಯೊಂದಿಗೆ ಯಾವಾಗಲೂ ಬಿಜಯಮಾಡಿಸಿರುವ ಭಗವಂತನೆಂದು ಹೇಳಲ್ಪಟ್ಟಿದೆ.

(೨) **ನಿತ್ಯಯೋಗಂ**—ಯಾವಾಗಲೂ ಒಟ್ಟಿಗೇ ಸೇರಿ ಇರುವಿಕೆಯು. ಇದು **ಶ್ರೀಮನ್ನಾರಾಯಣ ಚರಣೌ** ಎಂಬಲ್ಲಿ ಶ್ರೀಮಚ್ಛಬ್ದದ **ಮತುಪ್** ಪ್ರತ್ಯಯಾರ್ಥವು "**ಆನೀತವಾದಗ್ಂ ಸ್ವಧಯಾತದೇಕಂ**" ಎಂಬ ಶ್ರುತಿಯು ಲಕ್ಷ್ಮಿಯೊಂದಿಗೇ ಸೇರಿ ಪರತತ್ವವು ಒಬ್ಬನೇ. ಇದರಿಂದ ನಿತ್ಯಯೋಗ ಮಾತ್ರವಲ್ಲದೆ, ಪರಬ್ರಹ್ಮನಿಗೆ ಅಪೃಥಕ್ಸಿದ್ಧ ವಿಶೇಷಣವೆಂದೂ ಹೇಳಲ್ಪಟ್ಟಿತು. ಶ್ರೀ ವಿಷ್ಣುಪುರಾಣದಲ್ಲಿ "**ನಿತ್ಯೈವೇಷಾ ಜಗನ್ಮಾತಾ ವಿಷ್ಣೋಶ್ಶ್ರೀರನಪಾಯಿನೀ**" ಮತ್ತು "**ಮಮಸರ್ವಾತ್ಮ ಭೂತಸ್ಯ ನಿತ್ಯೈವೇಷಾನಪಾಯಿನೀ**", ಭಾರತ ಮೋಕ್ಷ ಧರ್ಮದಲ್ಲಿ "**ಏಕಾಕೀ ವಿದ್ಯಯಾ ಸಾರ್ಧಂ ವಿಹರಿಷ್ಯೇ ದ್ವಿಜೋತ್ತಮ। ತತೋಭೂಯೋ ಜಗತ್ಸೃಷ್ಟಿಂ ಕರಿಷ್ಯಾಮೀಹ ವಿದ್ಯಯಾ**" ಇಲ್ಲಿ ವಿದ್ಯಾ ಎಂದರೆ ಲಕ್ಷ್ಮಿಯು; ಪಾದ್ಮ ಪುರಾಣದಲ್ಲಿ "**ಮಾಮೇಕಂ ಚ ಶ್ರಿಯಾಯುಕ್ತಂ**" ಇತ್ಯಾದ್ಯನೇಕ ಪ್ರಮಾಣಗಳಿವೆ. ಇವುಗಳನ್ನನುಸರಿಸಿ ಶ್ರೀ ಯಾಮುನ ಮುನಿಗಳು ಚತುಶ್ಲೋಕಿಯಲ್ಲಿ "**ಗಾಢೋಪಗೂಢಾನಿತೇ**" ಎಂದು ಪ್ರಯೋಗಿಸಿರುತ್ತಾರೆ.

(೩) **ಸಮುಚಿತ ಗುಣಜಾತಂ**—ಈ ಬದ್ಧ ಚೇತನರು, ಆಶ್ರಯಿಸಿ ಆತ್ಮೋಜ್ಜೀವನವನ್ನು ಮಾಡಿಕೊಳ್ಳಲು ಯೋಗ್ಯವಾದ ಕಲ್ಯಾಣಗುಣಗಳ ಸಮೂಹವನ್ನು ಹೊಂದಿರೋಣವು. ಅವು ಯಾವುವೆಂದರೆ ವಾತ್ಸಲ್ಯ, ಸ್ವಾಮಿತ್ವ, ಸೌಶೀಲ್ಯ, ಸೌಲಭ್ಯ, ಜ್ಞಾನ, ಶಕ್ತಿ, ಪೂರ್ತಿ, ಪ್ರಾಪ್ತಿ ಮೊದಲಾದ ಗುಣ

ಸಮೂಹಗಳು ಇದು ನಾರಾಯಣ ಶಬ್ದಾರ್ಥವು. ವಾತ್ಸಲ್ಯವು, ಆಶ್ರಯಿಸಿದನೇ ಎಂಬ ವಿಶ್ವಾಸದಿಂದ ಆತನ ಅಪರಾಧಗಳನ್ನು ಪರಿಗಣಿಸದೇ ಇರೋಣವು. **“ ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ । ದೋಷೋ ಯದ್ಯಪಿ ತಸ್ಯಸ್ಯಾ ತ್ಸತಾ ಮೇತದಗರ್ಹಿತಮ್ ” “ ಸರ್ವಸ್ಯ ಶರಣಂ ಸುಹೃತ್ ”** ಎಂದು ಬಂದು ಆಶ್ರಯಿಸಿದವನನ್ನು ಎಂದಿಗೂ ಬಿಡಲಾರೆನು. ಆತನಲ್ಲಿ ದೋಷ ವಿದ್ದರೇನು ? ಪೂಜ್ಯರಿಗೆ ಅಂತಹ ದೋಷಿಯನ್ನು ರಕ್ಷಿಸುವದೇನೂ ನಿಂದಿತ ವಲ್ಲವು. **“ಆನಯೈನಂ ಹರಿಶ್ರೇಷ್ಠ ದತ್ತ ಮಸ್ಯಾಭಯಂ ಮಯಾ । ವಿಭೀಷಣೋವಾ ಸುಗ್ರೀವಯದಿವಾ ರಾವಣ ಸ್ಸ್ವಯಮ್ ”** ಇದು ಸುಗ್ರೀವ ನನ್ನು ಕುರಿತ ರಾಮವಾಕ್ಯವು. ಓ ವಾನರ ಶ್ರೇಷ್ಠನಾದ ಸುಗ್ರೀವನೇ, ನನ್ನನ್ನು ಆಶ್ರಯಿಸಿ ಬಂದಿರುವ ಈ ವಿಭೀಷಣನನ್ನು ಕರೆದುಕೊಂಡು ಬಾ; ಆತನಿಗೆ ಅಭಯವನ್ನು ಕೊಟ್ಟಿರುತ್ತೇನೆ. ಮಹಾತ್ಮನಾದ ವಿಭೀಷಣನಾದರೇನು; ಮಹಾ ಪಾಪಿಯಾದ ರಾವಣನೇ ಬಂದು ಆಶ್ರಯಿಸಿದರೂ ಅವನಿಗೂ ಅಭಯವೇ.

(೨) **ಸ್ವಾಮಿತ್ವಂ**—ತನಗೆ ಸೇರಿದ ಎಲ್ಲಾ ಚೇತನರಿಗೂ ತಾನು ಸ್ವಾಮಿಯು ಎಂಬ ಅಭಿಮಾನವು. ಇದರಿಂದಲೇ ಸ್ವಾಮಿಯ ಪಾದವಲ್ಲಿ ಕೂತು ಆಶ್ರಯಿಸಿದ ಅರ್ಜುನನು ಕಾಪಾಡಲ್ಪಟ್ಟನು. ಇಂತಹ ಅಭಿಮಾನದಿಂದಲೇ ಗಜೇಂದ್ರ, ಅಂಬರೀಷ ಧೃವಾದ್ಯ ಅನೇಕ ಭಕ್ತರುಗಳು ಕಾಪಾಡಲ್ಪಟ್ಟರು. ಇದರಿಂದಲೇ ಶ್ರೀ ದೇಶಿಕರವರು **“ ನಿತ್ಯಹೃದ್ಯೋಪಿ ಜೀವಃ ”** ಎಂದು ಪ್ರಯೋಗಿಸಿರುತ್ತಾರೆ.

(೩) **ಸೌಶೀಲ್ಯಂ**—ಮಹತ್ತಾದವನು ಹೀನರಾದ ಭಕ್ತರೊಂದಿಗೆ ಸೇರಿ ಅವರ ಕಷ್ಟಗಳನ್ನು ಪರಿಹರಿಸಿ ಮೋಕ್ಷಾದಿಗಳನ್ನು ದಯಪಾಲಿಸೋಣವು. ಇದಕ್ಕೆ ನಿದರ್ಶನಗಳಾಗಿ ಶ್ರೀ ನಿಗಮಾಂತದೇಶಿಕರವರು ದಯಾ ಶತಕದ ೬೫ನೆಯ ಶ್ಲೋಕವಾದ **“ ನಿಷಾದಾನಂ ನೇತಾ ಕಪಿಕುಲಪತಿಃ ಕಾಪಿ ಶಬರಿ ”** ಎಂಬಲ್ಲಿ ಉದಾಹರಿಸಿರುತ್ತಾರೆ.

(೪) **ಸೌಲಭ್ಯಂ**—ಎಲ್ಲಾ ಮನುಷ್ಯರ ಕಣ್ಣಿಗೂ ಬಿದ್ದು ಅವರುಗಳ ಯೋಗಕ್ಷೇಮವನ್ನು ವಿಚಾರಿಸೋಣವು. ಇದು ಅನೇಕ ರಾಜರಲ್ಲೂ ದೊಡ್ಡ ಹುದ್ದೆಯಲ್ಲಿರುವವರಲ್ಲೂ ಇಲ್ಲದ ಗುಣವು. ಅನೇಕ ವಿಭವಾವತಾರಗಳನ್ನು ಎತ್ತಿರು ವದೂ, ಹೃದಯ ಗುಹೆಯಲ್ಲೇ ನೆಲಸಿರುವದೂ, ಮಹಾಭಾಗವತರುಗಳು ಆಗಮ ರೀತ್ಯಾ ನಿರ್ಮಿಸಿದ ದೇವಾಲಯಗಳ ಬಿಂಬಗಳನ್ನು ನ್ಯಾಪಿಸಿ ನೆಲಸಿರೋಣವೂ ಇವೆಲ್ಲವೂ ಆಶ್ರಿತರ ರಕ್ಷಣಾರ್ಥವಾಗಿ ಸೌಲಭ್ಯದ ಮೂಲಕ ಉಂಟಾದ ರೂಪಗಳು ಇವು ನಾಲ್ಕು ಗುಣಗಳೂ ಆಶ್ರಯಣಕ್ಕೆ ಉಪಯುಕ್ತವಾದವು.

(೫) **ಜ್ಞಾನಂ**—ಚೇತನನೇನು ಆಜ್ಞೋಲ್ಲಂಘನೆ ಮಾಡಿದನೇ ಇಲ್ಲವೇ ಆಜ್ಞೆಯನ್ನು ಪರಿಪಾಲಿಸಿದನೇ, ಅಪರಾಧಮಾಡಿದ್ದಕ್ಕಾಗಿ ತಪ್ಪಾಯಿತೆಂದು

ಆಶ್ರಯಿಸಿ ಬೇಡುವನೇ ಇತ್ಯಾದಿಗಳನ್ನು ಸುಲಭವಾಗಿ ತಿಳಿಯುವ ಸರ್ವಜ್ಞತ್ವ. ಆದುದರಿಂದ ನಾವು ಮಾಡತಕ್ಕ ಸರ್ವ ವ್ಯಾಪಾರಗಳನ್ನೂ ನಮ್ಮೊಂದಿಗೇ ಯಾವಾಗಲೂ ಸರ್ವಜ್ಞನು ಇದ್ದು ನೋಡುವ ಸಾಕ್ಷಿಯು. ಆಶ್ರಯಿಸದೆ ಪ್ರಾರಬ್ಧ ಬಲಿಷ್ಠವಾದರೆ ಯಾರೂ ನೋಡುವುದಿಲ್ಲವೆಂದುತಿಳಿದು ದುಷ್ಕೃತ್ಯಗಳನ್ನು ಮಾಡುವವನಿಗೂ ಅನುಮನ್ತಾ. ಶಕುಂತಳೆಯು ದುಷ್ಯಂತನನ್ನು ಮೂದಲಿಸುವ ಸಂದರ್ಭದಲ್ಲಿ ಹೇಳುತ್ತಾಳೆ, **" ಏಕೋಽಹ ಮಸ್ಮೀತಿ ಚ ಮನ್ಯಸೇ ತ್ವಂ ನಹೃಚ್ಛಯಂ ವೇತ್ಸಿ ಕವಿಂ ಪುರಾಣಂ? । ಯೋವೇದಿತಾ ಕರ್ಮಣ ಪಾಪಕಸ್ಯ ತಸ್ಯಾಂತಿಕೇ ತ್ವಂ ವೃಜಿನಂ ಕರೋಷಿ ".**

(೬) **ಶಕ್ತಿಃ**—ಇದು ಅಘಟಿತಾ ಘಟನಾ ಸಾಮರ್ಥ್ಯವು ಎಂದು ಹೇಳಲ್ಪಟ್ಟಿರುತ್ತದೆ. ನಿತ್ಯಸಂಸಾರಿಗಳೂ ಕೂಡ ಏನಾದರೂ ಒಂದು ಕಾಲದಲ್ಲಿ ಅಲ್ಪಸುಕೃತವನ್ನೆಸಗಿದರೆ ಅದನ್ನು ವ್ಯಾಜ ಮಾಡಿಕೊಂಡು ಕ್ರಮೇಣ ಅಂತವರೂ ಮೋಕ್ಷವನ್ನು ಹೊಂದುವ ಹಾಗೆ ಮಾಡುವ ಶಕ್ತಿಯು. ತಾನು ಸತ್ಯ ಸಙ್ಕಲ್ಪನಾದುದರಿಂದ ಆಶ್ರಿತನ ಕೆಲಸವನ್ನು ಹಿಡಿದು ನಡೆಸಿ ಕೊಡುವ ಶಕ್ತಿಯು. ಅತಿಮಾನುಷಸ್ತವದಲ್ಲಿ **" ಅಬ್ಧಿಂ ನ ತೇರಿಥ ನ ಜಿಗ್ಯಥ ರಾಕ್ಷಸೇಂದ್ರಂ ನೈವಾಸ್ಯ ಜಿಜ್ಞಿಥ ಯದಾ ಚ ಬಲಾ ಬಲಂತ್ವಮ್ । ನಿಸ್ಸಂಶಯ ಸ್ಸಪದಿ ತಸ್ಯಪದೇಽಭ್ಯಷಿಂಚ ಸ್ತಸ್ಯಾನುಜಂ ಕಥ ಮಿದಂ ಹಿ ವಿಭೀಷಣಂಚ** ರಾಮಾವತಾರಿಯಾಗಿದ್ದ ಪರಮ ಪುರುಷನನ್ನು ಕುರಿತು ಕೇಳುವ ಮಾತು.—ನೀವು ಇನ್ನೂ ರಾವಣವಧೆಗಾಗಿ ಸಮುದ್ರವನ್ನು ದಾಟಲಿಲ್ಲವು. ರಾವಣನನ್ನು ಜಯಿಸಲಿಲ್ಲವು. ಹೋಗಲಿ, ನೀವು ಗೆಲ್ಲುತ್ತಿರೋ ಇಲ್ಲವೋ ಎಂಬುದಕ್ಕೆ ನಿಮ್ಮ ಮತ್ತು ರಾವಣನ ಬಲಾಬಲಗಳನ್ನು ವಿಚಾರಿಸಲಿಲ್ಲವು. ಇಂತಹ ಸಂದರ್ಭದಲ್ಲಿ ಅದರಲ್ಲೂ ಶತ್ರುವಿನ ತಮ್ಮನಾದ ವಿಭೀಷಣನು ಬಂದು ಆಶ್ರಯಿಸಿದರೆ ಲಕ್ಷ್ಮಣನನ್ನು ಕರೆದು ಆತನಿಗೆ ಒಡನೆಯೇ ಏನೊಂದೂ ಸಂಶಯವಿಲ್ಲದೆ ಲಕ್ಷ್ಮಣನ ಮೂಲಕ ಲಂಕಾ ಪಟ್ಟವನ್ನು ಕಟ್ಟಿ ಧೈರ್ಯದಿಂದ ಅಭಿಷೇಕ ಮಾಡಿಸಿದಿರಲ್ಲಾ ಅದು ಹೇಗೆ? ಅನಂತರ ರಾವಣ ವಧಾನಂತರ ಪುನಃ ಆತನನ್ನು ಲಂಕಾಭಿಷಿಕ್ತನನ್ನಾಗಿ ಮಾಡಿ, **" ಅಭಿಷಿಚ್ಯಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್ । ಕೃತ ಕೃತ್ಯ ಸ್ತದಾ ರಾಮೋ ವಿಜ್ವರಃ ಪ್ರಮುಮೋದ ಹ",** ಎಂಬಲ್ಲಿ ಹೇಳಿರುವ ಹಾಗೆ, ಕೃತಕೃತ್ಯನು ತಾನು ಎಂದು ಭಾವಿಸಿ **ಪ್ರಮುಮೋದ ಹ** - ತುಂಬಾ ಸಂತೋಷ ಚಿತ್ತನಾದರಿಂದು ಹೇಳಲ್ಪಟ್ಟಿದೆಯಲ್ಲಾ. ಇದೇನಾಶ್ಚರ್ಯವೆಂದು ವರ್ಣಿಸಿರುತ್ತಾರೆ. ಆದುದರಿಂದ ಸ್ವಾಮಿಯು ಸತ್ಯ ಸಙ್ಕಲ್ಪನು. ಅಘಟಿತ ಘಟನಾ ಶಕ್ತಿಯುಳ್ಳವನು.

(೭) **ಪೂರ್ತಿಃ**—ಪರಿಪೂರ್ಣಕಾಮನಾಗಿರೋಣವು. ಸರ್ವೇಶ್ವರನಿಗೆ ಆಗತಕ್ಕದ್ದಾಗಲಿ ಬೇಕಾದುದಾಗಲಿ ಏನೂ ಇಲ್ಲವು. ಶ್ರೀ ಕೃಷ್ಣ ಭಗವಾನರವರು

ಅರ್ಜುನನಿಗೆ ಹೇಳುತ್ತಾರೇನೆಂದರೆ **"ನಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ। ನಾನವಾಪ್ತ ಮವಾಪ್ತವ್ಯಂ ವರ್ತ ಏವ ಚ ಕರ್ಮಣಿ"** (ಗೀ. ೩. ೨೨.) ಓ ಅರ್ಜುನನೇ ಮೂರು ಲೋಕವಲ್ಲೂ ನಾನು ಮಾಡಿಯೇ ತೀರಬೇಕೆಂಬ ನಿರ್ಬಂಧವೇನೂ ಇಲ್ಲವು. ನಾನು ಹೊಂದಬೇಕಾಗಿರುವದೂ ಹೊಂದದೇ ಇರುವದೂ ಯಾವುದೂ ಇಲ್ಲವು. ಆದರೂ ನಾನು ಲೋಕ ಹಿತಾರ್ಥಕ್ಕಾಗಿ ಯಾವಾಗಲೂ ಕೆಲಸ ಮಾಡುತ್ತಲೇ ಇದ್ದೇನೆ ಎಂದು ತಮ್ಮ ಪರಿಪೂರ್ಣ ಕಾಮತ್ವವನ್ನು ಉಪದೇಶಿಸಿರುತ್ತಾರೆ.

(೮) **ಪ್ರಾಪ್ತಿಃ**—ಎಂದರೆ ತನ್ನ ನಿರುಪಾಧಿಕ ಶೇಷಿತ್ವವು. ಸಮಸ್ತ ವಸ್ತುಗಳನ್ನು ತಾನು ಹೊಂದಿರುವದು ತನಗೆ ಅತಿಶಯವನ್ನುಂಟು ಮಾಡೋಣವು. ಎಲ್ಲರೂ ತನ್ನನ್ನು ಈ ಮೇಲಿನ ಗುಣಯುಕ್ತನೆಂದು ಆಶ್ರಯಿಸಿ ಶ್ರೇಯಸ್ಸನ್ನುಂಟು ಮಾಡಿಕೊಳ್ಳುವದು ತನಗೆ ಅತಿಶಯವನ್ನುಂಟುಮಾಡುತ್ತದೆಂದು ಭಾವಿಸುವಿಕೆಯು **"ಉದಾರಾಸ್ಸರ್ವ ಏವೈತೇ ಜ್ಞಾನೀತ್ವಾತ್ಮೈವ ಮೇಮತಮ್"** ಭಕ್ತರೆಲ್ಲರೂ ನನ್ನನ್ನು ಆಶ್ರಯಿಸುವದರ ಮೂಲಕ, ನನಗೆ ಅತಿಶಯವನ್ನುಂಟುಮಾಡಿ ಕೊಂಡಾಡುವ ಔದಾರ್ಯವುಳ್ಳವರೆಂದು ಶ್ಲಾಘಿಸಿರುತ್ತಾರೆ.

ಈ ಎಂಟು ಗುಣಜಾತದಲ್ಲಿ ಈ ನಾಲ್ಕು ಸ್ವಾಮಿಯನ್ನು ಆಶ್ರಯಿಸುವವರಿಗೆ ಶ್ರೇಯಸ್ಸನ್ನುಂಟುಮಾಡಲು ಅರ್ಹವಾದವು.

(೯) **ತನುಖ್ಯಾಪನಂ**—ಈ ದ್ವಯಮನ್ತ್ರದ ಮೊದಲನೆಯ ಶಬ್ದದಲ್ಲಿರುವ **ಚರಣ** ಶಬ್ದದಿಂದ ಉಪಲಕ್ಷಣವಾಗಿ ತೋರಿಬರುವ ದಿವ್ಯಮಂಗಳ ವಿಗ್ರಹ ಯುಕ್ತತೆಯು. ಇದಕ್ಕೆ ಶುಭಾಶ್ರಯತ್ವವೆಂದೂ ಹೆಸರು. ಆತನು ಹೀಗೆ ದಿವ್ಯ ಮಂಗಳ ವಿಗ್ರಹ ಯುಕ್ತನಾಗಿರುವದರಿಂದ **ಮಂಗಳಾನಾಂಚ ಮಂಗಳಂ** ಎಂದು ಹೇಳಿಸಿಕ್ಕೊಂಡು ಸರ್ವ ಶ್ರೇಯಸ್ಸನ್ನೂ ಆಶ್ರಿತರಿಗೆ ಉಂಟುಮಾಡತಕ್ಕವನೆಂಬುದು ಸೂಚಿತವು. ಅಪರಾಧ ಶತಗಳಿಂದ ಪಾವನತ್ವವನ್ನುಂಟುಮಾಡುವ ಚರಣ ಮಹಿಮೆಯನ್ನು ಹೊಂದಿರುವಿಕೆಯು. ಗಂಗಾನದಿಯ ಪಾವನತ್ವವೂ, ಶಿಲಾರೂಪ ಹೊಂದಿದ್ದ ಅಹಲ್ಯೆಯ ಶಾಪವಿಮೋಚನೆಯೂ ಇದಕ್ಕೆ ನಿದರ್ಶನಗಳು.

(೧೦) **ಉಪಾಯಂ**—ಇದು **ಶರಣಂ ಪ್ರಪದ್ಯೇ** ಎಂಬಲ್ಲಿನ ಶರಣ ಶಬ್ದಾರ್ಥವು. ಶರಣ ಶಬ್ದಕ್ಕೆ ಇತರಾರ್ಥಗಳಿದ್ದರೂ ಇಲ್ಲಿ ಉಪಾಯವೆಂಬ ಅರ್ಥವನ್ನೇ ಸೂಚಿಸುತ್ತದೆ. ಅದು ಆಚಾರ್ಯರನ್ನು ಆಶ್ರಯಿಸಿ ಅವರು ಉಪದೇಶಿಸಿದ ಈ ದ್ವಯಮನ್ತ್ರವನ್ನು ಉಚ್ಚರಿಸುತ್ತಾ ಮಾಡುವ ನಮಸ್ಕಾರವು. ಒಂದು ಸಲ ಉಚ್ಚರಿಸಿದರೆ ಸಾಕು, ತಾನು ಕೃತ ಕೃತ್ಯನಾಗುವನು. **ಸಕೃದೇವ ಪ್ರಪನ್ನಾಯತವಾಸ್ಮೀತಿ ಯಾಚತೇ। ಅಭಯಂ ಸರ್ವಭೂತೇಭ್ಯೋ ದದಾಮ್ಯೇತ ದ್ವ್ರತಂ ಮಮ"** ಶ್ರೀರಾಮಚಂದ್ರೋಕ್ತಿಯು ಮತ್ತು **"ತಸ್ಮಾತ್ತಸ್ಕೃತ್ಸ್ಯತೇ ನೈವ ಕರ್ಮಣಾಯೇನ ಮಾನವಃ। ಸಕೃಜ್ಜಪ್ತೇನ ಮನ್ತ್ರೇಣ ಕೃತಕೃತ್ಯಸ್ಸಹೀ**

ಭವೇತ್." "**ಸಕೃದೇವ ಪ್ರಪನ್ನಸ್ಯ ಕೃತ್ಯಂ ನೈವಾನ್ಯದಿಷ್ಯತೇ। ಸಕೃದೇವ ಹಿ ಶಾಸ್ತ್ರಾರ್ಥಃ ಕೃತೋಽಯಂ ತಾರಯಿಷ್ಯತಿ**" ಎಂಬ ಇತರ ಪ್ರಮಾಣಗಳೂ ಇವೆ.

(೬) ಇಂತಹ ಶರಣಾಗತ್ಯನುಷ್ಠಾನವನ್ನೇ ಈ ಶ್ಲೋಕದಲ್ಲಿ **ಕರ್ತವ್ಯ ಭಾಗ**ವೆಂದು ಹೇಳಲ್ಪಟ್ಟಿರುತ್ತದೆ. ಇದು **ಪ್ರಪದ್ಯೇ** ಎಂಬುದರ ಅರ್ಥವು. **ಶರಣಂ ಪ್ರಪದ್ಯೇ** ಎಂಬೆರಡು ಪದಗಳ ಅರ್ಥವು ಸಂಹಿತೆಯಲ್ಲಿ "**ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾಮತಿಃ**" ಶ್ರೀಯಃಪತಿಯಾದ ನೀನೇ ನನಗೆ ಉಪಾಯವಾಗಿರಬೇಕೆಂಬ ಪ್ರಾರ್ಥನೆಯೆಂದು ಹೇಳಲ್ಪಟ್ಟಿರುತ್ತದೆ. **ಪ್ರಪದ್ಯೇ** ಎಂಬುದರಿಂದ ತನ್ನ ಆತ್ಮಾವನ್ನು ತಾನು ಸಂರಕ್ಷಿಸಿಕೊಳ್ಳಲು ಶಕ್ತಿಯಿಲ್ಲವಾದುದರಿಂದ ಸ್ವರೂಪ, ರಕ್ಷಾ, ಫಲ ಇವುಗಳ ಭರವು ನಿನಗೆ ಸೇರಿದುದು, ನೀನೇ ವಹಿಸತಕ್ಕದ್ದು ಎಂಬ ಪ್ರಾರ್ಥನೆಯು. ಸಾತ್ಯಕಿ ತಂತ್ರದಲ್ಲಿ ಇದನ್ನೇ ಸಂಗ್ರಹವಾಗಿ "**ಆತ್ಮಾನಂ ಮಯಿ ನಿಕ್ಷೇಪೇತ್**" ಎಂದೂ, ತೈತ್ತರೀಯದಲ್ಲಿ "**ಓ ಮಿತ್ಯಾತ್ಮಾನಂ ಯುಂಜೀತ**" ಎಂದೂ ಹೇಳಲ್ಪಟ್ಟಿರುತ್ತದೆ.

ಮುಂದೆ ದ್ವಯಮನ್ತ್ರದ ಉತ್ತರಖಂಡ ವ್ಯಾಖ್ಯಾನವನ್ನು ಸಙ್ಗ್ರಹಿಸುತ್ತಾರೆ. ಅಲ್ಲಿ ನಾಲ್ಕು ವಿಷಯಗಳನ್ನು ಗ್ರಹಿಸಬಹುದೆಂದು ತಿಳಿಸುತ್ತಾರೆ.

(೧) **ಮಿಥುನಪರಂ** - ಪ್ರಾಪ್ಯನಾಗಿರುವ ದೆಶೆಯಲ್ಲಿ ಲೋಕದಂಪತಿಗಳಾದ ಲಕ್ಷ್ಮೀನಾರಾಯಣರು ಮುಖ್ಯವಾಗಿ ಒಟ್ಟಿಗೆ ಸೇರಿರುವಿಕೆಯುಳ್ಳದು. ಇದು **ಶ್ರೀಮತೇ ನಾರಾಯಣಾಯ** ಎಂಬಲ್ಲಿ ಶ್ರೀಮಚ್ಛಬ್ದಾರ್ಥವು. ಉಪಾಯ ದೆಶೆಯಲ್ಲಿ ಹೇಗೆ ಲಕ್ಷ್ಮೀನಾರಾಯಣನೇ ಉಪಾಯವೆಂಬುದು "**ಲಕ್ಷ್ಮ್ಯಾಸಹ ಹೃಷೀಕೇಶೋ**" ಎಂಬಲ್ಲಿ ಉಪಪಾದಿತವೋ, ಹಾಗೆಯೇ ಉಪೇಯ ಸ್ಥಿತಿಯಲ್ಲಿ ದಿವ್ಯ ವೈಕುಂಠದಲ್ಲಿರುವಾಗಲೂ ಲಕ್ಷ್ಮೀ ಸಹಿತನು. ಇದನ್ನು ಶ್ರೀ ದೇಶಿಕರವರು ಪರ ದೇವಾತಾ ಪಾರಮಾರ್ಥ್ಯಾಧಿಕಾರದಲ್ಲಿ ಪರತತ್ವ ನಿರೂಪಣೆಯಲ್ಲಿ "**ಶ್ರೀಮಾನ್ ನಾರಾಯಣೋ ನಃ ಪತಿರಖಿಲತನು ರ್ಮುಕ್ತಿದೋ ಮುಕ್ತ ಭೋಗ್ಯಃ**" ಉಪಾಯೋಪೇಯವಾದ ಎರಡು ಅವಸ್ಥೆಗಳಲ್ಲೂ ಲಕ್ಷ್ಮೀಯುಕ್ತನಾಗಿಯೇ ಇರುವನೆಂದು ಹೇಳಿರುತ್ತಾರೆ. ಏಕೆಂದರೆ ಇಬ್ಬರೂ ಸೇರಿ ಮಿಥುನ ರೂಪದಲ್ಲೇ ಪರತತ್ವವು. ಇಲ್ಲಿ **ಪರ** ಶಬ್ದವು ಉತ್ಕೃಷ್ಟತೆಯನ್ನೂ ಸೂಚಿಸುವದರಿಂದ ಮೋಕ್ಷ ದೆಶೆಯಲ್ಲಿ ಪ್ರಾಪ್ಯವಾಗಿರುವದಕ್ಕೆ ಇನ್ನು ಯಾರಿಗೂ ಅರ್ಹತೆಯಿಲ್ಲವೆಂಬುದು ತೋರಿಬರುತ್ತದೆ. ಮೋಕ್ಷದೆಶೆಯಲ್ಲಿ ಲಕ್ಷ್ಮೀನಾರಾಯಣರ ಸಾಯುಜ್ಯವನ್ನು ಹೊಂದಿ ಪರಿಪೂರ್ಣಬ್ರಹ್ಮಾನುಭವರೂಪ ಆನಂದವನ್ನು ಪಡೆದು ಆತನಿಗೆ ಮಾಡುವ ಕೈಂಕರ್ಯ ಸಾಮ್ರಾಜ್ಯ ಪದವಿಯ ಮಹಾತ್ಮ್ಯೆಯನ್ನು ಈ ಪರ ಶಬ್ದವು ಬೋಧಿಸುತ್ತದೆ. ಹೀಗೆ ಪ್ರಾಪ್ಯವು ಲಕ್ಷ್ಮೀಯುಕ್ತನಾದ ನಾರಾಯಣನು ಎಂಬುದು **ಪ್ರಸಿದ್ಧಂ** - ಶಾಸ್ತ್ರವಿಹಿತವಾದುದು. ಎಲ್ಲಿ ಹೇಳಿದೆ ಎಂದರೆ "**ಅನೀತ**

ವಾವಗ್‍ಂ ಸ್ವಧಯಾ ತದೇಕಂ" ಎಂಬ ತೈತ್ತರೀಯಾರಣ್ಯಕ ಪ್ರಮಾಣವಿದೆ. **ಏಕಾಕೀ ವಿದ್ಯಯಾ ಸಾರ್ಧಂ;** ಇಲ್ಲಿ ವಿದ್ಯಾ ಎಂದರೆ ಲಕ್ಷ್ಮಿಯೊಂದಿಗೆ ಒಬ್ಬ ನೆಂದು ಹೇಳಿರುತ್ತದೆ. ಪಾದ್ಮ ಪುರಾಣವಲ್ಲಿ **ಮಾಮೇಕಂಚ ಶ್ರಿಯಾ ಯುಕ್ತಂ** ಎಂಬ ಭಗವದ್ವಾಕ್ಯವಿರುತ್ತದೆ.

(೨) **ಸ್ವಾಮಿತ್ವಂ**—ಉಭಯ ವಿಭೂತಿ ನಾಯಕನಾಗಿರುವ ಭಾವವು. ಚಿದಚಿತ್ತುಗಳೆರಡಕ್ಕೂ ನಾಯಕನಾಗಿರುವ ಐಶ್ವರ್ಯವು. ಇದು ಉತ್ತರ ಖಂಡದ ನಾರಾಯಣ ಶಬ್ದಾರ್ಥವು. **ನಾರಾಣಾಂ ಅಯನಮ್** ಎಂಬ ಷಷ್ಠೀತತ್ಪುರು ಷಾರ್ಥವು. ಚಿದಚಿತ್ತುಗಳಿಗೆಲ್ಲಾ ಆಧಾರನು, ಗತಿಯು, ಪ್ರಾಪ್ಯನು ಎಂಬರ್ಥವು. ಹೀಗೆ ಚೇತನರಿಗೆಲ್ಲಾ ಆಧಾರನಾದುದರಿಂದ ಶೇಷಿತ್ವವು ಎಂದರೆ ಸ್ವಾಮಿತ್ವವು ಸಿದ್ಧವು. "**ಪತಿಂ ವಿಶ್ವಸ್ಯ**" ಎಂಬಲ್ಲೂ, "**ದಾಸಾ ಭೂತಾ ಸ್ಸ್ವತ ಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ**" ಎಂಬಲ್ಲೂ ಉಪಪಾದಿತವು.

(೩) **ಪ್ರಾರ್ಥನಾಂಚ**—ತಾನು ದಿವ್ಯ ವೈಕುಂಠವನ್ನು ದೇಹಾವಸಾನಾ ನಂತರ ಸೇರಿ ದಿವ್ಯದಂಪತಿಗಳಿಬ್ಬರಿಗೂ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಗಳನ್ನು ಸದಾ ಅನುಷ್ಠಿಸುವ ಹಾಗೆ ಮಾಡು ಎಂಬ ಪ್ರಾರ್ಥ ನೆಯು. ಇದು **ನಾರಾಯಣಾಯ** ಎಂಬಲ್ಲಿರುವ ಚತುರ್ಥಿಯ ಅರ್ಥವು. ಈ ಸಂದರ್ಭದಲ್ಲಿ "**ಭವಾಂಸ್ತು ಸಹ ವೈದೇಹ್ಯಾ ಗಿರಿ ಸಾನುಷು ರಂಸ್ಯತೇ । ಅಹಂ ಸರ್ವಂ ಕರಿಷ್ಯಾಮಿ ಜಾಗ್ರತ ಸ್ಸ್ವಪತಶ್ಚತೇ**" ಎಂಬ ಭಗವದ್ಭಕ್ತಾ ಗ್ರೇಸರನಾದ ಲಕ್ಷ್ಮಣನ ವಾಕ್ಯವು ಅನುಸಂಧೆಯವು. ಕಿಂಕರತ್ವಾಧಿ ರಾಜ್ಯವಾದ ಕೈಂಕರ್ಯ ಮಹಾತ್ಮ್ಯೆಯನ್ನು ಲಕ್ಷ್ಮಣನು ತನ್ನ ಪ್ರಾಜ್ಞತೆಯಿಂದ ತಿಳಿದವನಾದುದ ರಿಂದಲೇ ಶ್ರೀ ರಾಮನು "**ಯೌವರಾಜ್ಯೇಧುರ ಮುದ್ವಹಸ್ವ**" ಎಂದು ಯುವ ರಾಜನಾಗಿ ಪಟ್ಟಾಭಿಷಿಕ್ತನಾಗೆಂದು ಹೇಳಿದರೂ ಸಮ್ಮತಿಸಲಿಲ್ಲವು; "**ಸರ್ವಾತ್ಮನಾ ಪರ್ಯನುನೀಯಮಾನೋ**—ನಾನಾವಿಧವಾಗಿ ಯುವರಾಜನಾಗೆಂದ ಆಜ್ಞಾಪಿಸ ಲ್ಪಟ್ಟರೂ ಆತನು ಒಪ್ಪಲಿಲ್ಲವೆಂದೂ ಹೇಳಲ್ಪಟ್ಟಿರುತ್ತದೆ. ಭರತನು ತನಗಿಂತಲೂ ಒಂದು ದಿನದಮಟ್ಟಿಗೆ ಜ್ಯೇಷ್ಠನು, ಆತನಿಗೆ ತಪ್ಪಿಸಿ ತಾನು ಯುವರಾಜನಾಗಲು ಸಮ್ಮತಿಸಲಿಲ್ಲವೆಂಬುದಕ್ಕೆ ಕಾರಣವಾಗಿ ವ್ಯಾಖ್ಯಾತೃಗಳು ಹೇಳುವರು. ದಾಸನಿಗೆ ತೋರುವದೇನೆಂದರೆ? ಕೈಂಕರ್ಯ ಸಾಮ್ರಾಜ್ಯದ ಯೌವರಾಜ್ಯದ ಮುಂದೆ ಈ ರಾಜಾಂಗದ ಯುವರಾಜ ಪದವು ನಿಕೃಷ್ಟವೆಂದು ತಿಳಿದವನಾಗಿ "**ಅಹಂ ಸರ್ವಂಕರಿಷ್ಯಾಮಿ**" ಎಂದು ಹೇಳಿದವನಾದುದರಿಂದ ಒಪ್ಪಲಿಲ್ಲವೆಂದು ಹೇಳುವದು ಸರಸವಲ್ಲವೇ ?

(೪) **ಪ್ರಬಲತರ ವಿರೋಧಿ ಪ್ರಹಾಣಮ್**- ಅತ್ಯಂತ ಪ್ರಬಲ ವಿರೋಧಿಗಳಾದ ಅಹಂಕಾರ ಮಮಕಾರಗಳನ್ನು ಬಿಟ್ಟಿರೋಣವು. ಇದು **ನಮಃ** ಎಂಬುದನ್ನು ಸಖಂಡವಾಗಿ ಭಾವಿಸಿ, **ಮಮನ, ನಮಮ** ಎಂಬುದರ ಅರ್ಥವು.

ಪ್ರಕೃತಿ ಸಂಬಂಧವಿರುವ ಶರೀರಿಗೆ ಅವಿದ್ಯಾ ಕರ್ಮವಾಸನಾ ರುಚಿಗಳು ಹಿಂಬಾಲಿಸಿ ಬರುವದರಿಂದ ಅವುಗಳನ್ನು ದೂರೀಕರಿಸುವದು ತುಂಬಾ ಕಷ್ಟವು. ಎಷ್ಟು ಶಾಸ್ತ್ರ ಜ್ಞಾನವಿದ್ದರೂ ಅಹಂಕಾರ ಮಮಕಾರಗಳನ್ನು ತೊರೆಯುವದು ತುಂಬಾ ದುರ್ಲಭವು. ಈ ಶರಣಾಗತ್ಯನುಷ್ಠಾನದಿಂದ ಯಾವ ಯಾವ ಅಪರಾಧಗಳು ತೊಲಗುತ್ತವೆಂಬುದನ್ನು ಶ್ರೀ ದೇಶಿಕರವರು "**ಪ್ರಾರಬ್ಧೇತರ ಪೂರ್ವಪಾಪಮಖಿಲಂ**" ಎಂಬ ಶ್ಲೋಕದಲ್ಲಿ ಉಪಪಾದಿಸಿರುತ್ತಾರೆ. ಶ್ರೀಮದ್ರಹಸ್ಯತ್ರಯ ಸಾರದ ೧೬೦೫.–೯ನೆಯ ಪುಟಗಳನ್ನು ಪರಾಂಬರಿಸಿ. **ಮಮ** ಎಂಬೆರಡಕ್ಷರವು ಪುನಃ ಪುನಃ ಸಂಸಾರದಾಯಿಕವೆಂದೂ **ನಮಮ** ಎಂಬ ಮೂರಕ್ಷರವು ಮೋಕ್ಷ ಪ್ರಾಪ್ತಿಗೆ ಹೇತುವೆಂದೂ "**ದ್ವ್ಯಕ್ಷರಸ್ತು ಭವೇ ನ್ಮೃತ್ಯುಃ ತ್ರ್ಯಕ್ಷರಂ** ಬ್ರಹ್ಮಣಃ **ಪದಮ್**" ಎಂದು ಹಿಂದೆ ಉದಾಹರಿಸಿದ ಶ್ಲೋಕವು ಅನುಸಂಧೇಯವು. ಅಹಂಕಾರ ಮಮಕಾರಗಳಿದ್ದುದಾದರೆ ಆಸುರೀ ಸ್ವಭಾವವುಂಟಾಗಿ "**ಈಶ್ವರೋಹಮಹಂ ಭೋಗೀ ಸಿದ್ಧೋಹಂ ಬಲವಾನ್ ಸುಖೀ**" (ಗೀ. ೧೬. ೧೪.) ಎಂಬಲ್ಲಿ ಹೇಳಿರುವಹಾಗೆ ಭಾವಿಸುವನು. ಆದುದರಿಂದ ಶರಣಾಗತನಾದ ಪ್ರಪನ್ನನು "**ನಿರ್ಮಮೋ ನಿರಹಂಕಾರ**"ನಾಗಿ ಇರತಕ್ಕದ್ದು.

ಹೀಗೆ ಮೇಲೆ ಹೇಳಿದ **ಏತಾನ್ ದಶ**-ಈ ಹತ್ತು ಅರ್ಥಗಳನ್ನೂ ಈ ದ್ವಯ ಮನ್ತ್ರದಲ್ಲಿ **ಮಂತಾರಂ** - ಅನುಸಂಧಾನ ಮಾಡುವವನನ್ನು ಆ ಮನ್ತ್ರನು ಷ್ಠಾನವು. **ತ್ರಾಯತೇಚ** - ರಕ್ಷಿಸಿಯೇ ರಕ್ಷಿಸುತ್ತದೆ, ಸಂದೇಹವಿಲ್ಲವೆಂಬ ಭಾವವು. ಚಕಾರವು ಅವಧಾರಣಾರ್ಥವಾದ **ಏವ** ಎಂಬರ್ಥವನ್ನು ಕೊಡುತ್ತದೆ. ಅಂತವನಿಗೆ ಮೋಕ್ಷ ಸಾಮ್ರಾಜ್ಯವೇ ವಿನಾ ಪುನಸ್ಸಂಸಾರವಿಲ್ಲವೆಂಬ ಭಾವವು.

ಇತಿ - ಹೀಗೆ, **ಅಧಿಗತ ನಿಗಮಃ** - ಹೊಂದಲ್ಪಟ್ಟ ವೇದ ಪ್ರಮಾಣವುಳ್ಳದು; ಶ್ರುತಿ ಪ್ರಮಾಣವೆಲ್ಲಿ? ಎಂದರೆ ಕಠವಲ್ಲಿಯಲ್ಲಿ "**ಸಕೃತ್ತ್ವಂ ತದ್ದ್ವಯಂ ಸಕೃದುಚ್ಚಾರ ಸ್ಸಂಸಾರ ವಿಮೋಚನಂ ಭವತಿ**" ಎಂದಿರುತ್ತದೆ. ಹಾಗೆಯೇ ಶ್ವೇತಾಶ್ವರದಲ್ಲೂ ಶರಣಾಗತಿಯು ಉಪಾಯವೆಂದು, "**ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ । ತಂಹಿ ದೇವ ಮಾತ್ಮ ಬುದ್ಧಿ ಪ್ರಕಾಶಂ ಮುಮುಕ್ಷುರ್ವೈ ಶರಣ ಮಹಂ ಪ್ರಪದ್ಯೇ**" ಎಂದು ಹೇಳಿರುತ್ತದೆ. ಪ್ರಶ್ನ ಸಂಹಿತೆಯಲ್ಲಿ ವರ್ಣೋದ್ಧಾರ ಕ್ರಮವು ಹೇಳಲ್ಪಟ್ಟಿರುತ್ತದೆ. ಅಲ್ಲಿ ಈ ಆರುಪದಗಳಲ್ಲೂ ಎಷ್ಟೆಷ್ಟು ವರ್ಣಗಳಿವೆ ಎಂಬುದು ಉಪಪಾದಿಸಲ್ಪಟ್ಟಿರುತ್ತದೆ. ಆದುದರಿಂದಲೇ ಈ ಶ್ರುತಿಗಳ ಉಪಪಾದನೆಯೇ ಪಾದ್ಮ ಪುರಾಣದಲ್ಲಿರುತ್ತದೆ. ಹೇಗೆಂದರೆ "**ಮಾಮೇಕಂಚ ಶ್ರಿಯಾ ಯುಕ್ತ ಭಕ್ತಿಯುಕ್ತೋ ನರೋತ್ತಮಃ । ದ್ವಯೇನ ಮನ್ತ್ರರತ್ನೇನ ಮತ್ಪ್ರಿಯೇಣ ಭಜೇತ್ಸದಾ । ಅಚಿರಾನ್ಮತ್ಪ್ರಸಾದೇನ ಮಲ್ಲೋಕಂ ಚ ಸಗಚ್ಛತಿ**" ಲಕ್ಷ್ಮಿಯು ತನಗೆ ಅಪೃಥಕ್ಸಿದ್ಧ ವಿಶೇಷಣವಾದುದರಿಂದ ಆಕೆಯೂ ಸೇರಿ ತಾನು

ಈಶಾನಾಂ ಜಗತಾ ಮಧೀಶ ದಯಿತಾಂ ನಿತ್ಯಾನ ಪಾಯಾಂ ಶ್ರಿಯಂ
ಸಂಶ್ರಿತ್ಯಾ ಶ್ರಯಣೋಚಿತಾ ಖಿಲ ಗುಣಸ್ಯಾಂಘ್ರೀ ಹರೇ ರಾಶ್ರಯೇ ।

ಒಬ್ಬನೇ ಎಂದು ಶ್ರೀಹರಿಯು ಬ್ರಹ್ಮನನ್ನು ಕುರಿತು ಹೇಳುತ್ತಾರೆ. ಮುಂದೆ **ಲಕ್ಷ್ಮೀಶಂ ಮಾಂ ಸುರೇಶೇಶಂ ದ್ವಯೇನ ಶರಣಂ ಗತಃ । ಮಲ್ಲೋಕ ಮಚಿರಾ ಲ್ಲಬ್ಧ್ವಾ ಮತ್ಸಾಯುಜ್ಯಂ ಸ ಗಚ್ಛತಿ** ” ಎಂದಿರುತ್ತದೆ.

ಈ ಮನ್ತ್ರವು **ಷಟ್ಪದ** ಎಂದರೆ ಆರು ಪದಗಳುಳ್ಳದು - (೧) ಶ್ರೀಮನ್ನಾರಾಯಣ ಚರಣೌ (೨) ಶರಣಂ (೩) ಪ್ರಪದ್ಯೆ (೪) ಶ್ರೀಮತೇ (೫) ನಾರಾಯಣಾಯ (೬) ನಮಃ ಎಂಬದಾಗಿ. ಕೆಲವರು **ಶ್ರೀಮನ್ನಾರಾಯಣ** ಎಂಬುದು ಸಂಬೋಧನೆ ಎಂದು ಭಾವಿಸುವರು. ಆಗ ೭ ಪದಗಳಾಗುವದರಿಂದ ಆ ಅರ್ಥವು ಸರಿಯಲ್ಲವು. ಆಗ **ಚರಣೌ** ಎಂಬುದಕ್ಕೆ **ತವ** ಎಂದು ಇನ್ನೊಂದು ಪದವನ್ನೂ ಅಧ್ಯಾಹಾರ ಮಾಡಿಕೊಳ್ಳಬೇಕಾಗುತ್ತದೆ. ಆದುದರಿಂದ ಸಮಾಸ ಪದವಾಗಿ ಭಾವಿಸ (ಷಷ್ಠೀತತ್ಪುರುಷ) ತಕ್ಕದ್ದಾಗಿರುತ್ತದೆ.

ದ್ವಿಖಂಡಃ—ಎರಡು ಖಂಡಗಳಿರುವದರಿಂದಲೇ ಇದಕ್ಕೆ ದ್ವಯವೆಂದು ಹೆಸರು ಅನೇಕ ಶ್ಲೋಕಗಳಲ್ಲಿ ಪೂರ್ವಾರ್ಧ ಉತ್ತರಾರ್ಧಗಳು ಎರಡು ವಾಕ್ಯಗಳುಳ್ಳದ್ದಾಗಿರಬಹುದು. ಅವುಗಳನ್ನೆಲ್ಲಾ ದ್ವಯವೆಂದು ಕರೆಯಲು ಸಾಧ್ಯವೇ? ಆದುದರಿಂದ ಇಲ್ಲಿ ದ್ವಯವೆಂಬ ಪ್ರಯೋಗವು ಉಪಾಯ ಮತ್ತು ಉಪೇಯ ಪದವಾದ ಅರ್ಥದ್ವಯವನ್ನು ಪ್ರತಿಪಾದಿಸುವದರಿಂದ ಎಂದು ಭಾವಿಸತಕ್ಕದ್ದು.

ಅವತಾರಿಕೆಯು—ಹಿಂದಿನ ಶ್ಲೋಕದಲ್ಲಿ ಈ ದ್ವಯ ಮನ್ತ್ರವು ಪೂರ್ವಾರ್ಧ. ಉತ್ತರಾರ್ಧ ಇವುಗಳ ಪ್ರತಿಯೊಂದರಲ್ಲೂ ಮೂರು ಮೂರು ಪದಗಳುಳ್ಳದೆಂದೂ, ಆ ಮೂರು ಪದಗಳಿಂದ ಹತ್ತು ಅರ್ಥಗಳು ತೋರಿಬರುವುವೆಂದೂ, ಶ್ರಿಯಃಪತಿಯೇ ಸಿದ್ಧೋಪಾಯನೂ ಮತ್ತು ಉಪೇಯನೂ ಎಂಬೆರಡು ಅರ್ಥಗಳನ್ನು ಪ್ರತಿಪಾದಿಸುವದರಿಂದ ಈ ಮಂತ್ರರತ್ನಕ್ಕೆ ದ್ವಯವೆಂಬ ಹೆಸರುಳ್ಳದ್ದೆಂದೂ ಹೇಳಲ್ಪಟ್ಟಿತು. ಈ ಶ್ಲೋಕದಲ್ಲಾದರೋ ಆ ಆರು ಪದಗಳ ಅರ್ಥಾನುವಾದದೊಂದಿಗೆ ಆ ಎರಡು ವಾಕ್ಯಗಳಿಂದ ತೋರಿಬರುವ ವಾಕ್ಯಾರ್ಥಗಳನ್ನು ವಿವರಿಸುತ್ತಾರೆ.

ಅರ್ಥವು—ಜಗತಾಂ - ಬಹುವಚನವಿರುವದರಿಂದ ಲೀಲಾ ವಿಭೂತಿಯ ಸರ್ವಜಗತ್ತುಗಳಿಗೆಲ್ಲಾ, **ಈಶಾನಂ** - ಈಶ್ವರೀ ಎಂದರೆ ನಿಯಾಮಕಳಾದ ಸರ್ವೇಶ್ವರನಿಗೆ ಅಪೃಥಕ್ಸಿದ್ಧ ವಿಶೇಷಣಳಾದುದರಿಂದ ಆತನೊಂದಿಗೇ ವ್ಯಾಪನ, ಭರಣ ಸ್ವಾಮಿನಿಯಾಗಿರುವ ಶಕ್ತಿಯುಳ್ಳ, **ಅಧೀಶದಯಿತಾಂ** - ಲೋಕೈಕೇಶ್ವರನಾದ ನಾರಾಯಣನಿಗೆ ಪ್ರಿಯ ಪತ್ನಿಯಾದ, **ನಿತ್ಯಾನಪಾಯಾಂ** - ಎಂದಿಗೂ

ಇಷ್ಟೋಪಾಯ ತಯಾ ಶ್ರಿಯಾಚ ಸಹಿತಾಯಾ ತ್ಮೇಶ್ವರಾಯಾ ರ್ಥಯೇ
ಕರ್ತುಂ ದಾಸ್ಯ ಮಶೇಷ ಮಪ್ರತಿಹತಂ ನಿತ್ಯಂತ್ವಹಂ ನಿರ್ಮಮಃ ॥ ॥ ೬ ॥

ಅಗಲಿರುವಿಕೆ ಎಂಬುದೇ ಇಲ್ಲದಿರುವ ಎಂದರೆ ಯಾವಾಗಲೂ ಒಟ್ಟಿಗೇನೇ ಇರುವ, **ಶ್ರಿಯಂ** - ಮಹಾಲಕ್ಷ್ಮಿಯನ್ನು, **ಸಂಶ್ರಿತ್ಯ** - ಪ್ರಥಮತಃ, ಶ ರ ಣಾ ಗ ತಿ ಯ ಮೂಲಕ ಆಶ್ರಯಿಸಿ, **ಆಶ್ರಯಣೋಚಿತಾ ಖಿಲ ಗುಣಸ್ಯ** - ಹಿಂದಿನ ಶ್ಲೋಕ ದಲ್ಲಿ ಹೇಳಿರುವ ಹಾಗೇ, ಆಶ್ರಯಿಸಲು ಯೋಗ್ಯವಾದ ಸಮಸ್ತ ಕಲ್ಯಾಣ ಗುಣ ಗಳನ್ನು ಹೊಂದಿರುವ, **ಹರೇಃ** - ಸಮಸ್ತದುರಿತ ನಿವಾರಕ ಮಹಾ ವಿಷ್ಣುವಿನ **ಅಂಘ್ರೀ** - ಎರಡು ಪಾದಗಳನ್ನು **ಇಷ್ಟೋಪಾಯತಯಾ** - ನನಗೆ ಇಷ್ಟವಾದು ವನ್ನು ಅದು ಯಾವುದು ಎಂದರೆ ನಿರತಿಶಯ ಸುಖರೂಪವಾದ ಮೋಕ್ಷ ಪ್ರಾಪ್ತಿ ಗಾಗಿ, **ಆಶ್ರಯೇ** - ಆಶ್ರಯಿಸುತ್ತೇನೆ. ಇದು ಪೂರ್ವ ಖಂಡದ ವಾಕ್ಯಾರ್ಥವು. ಮುಂದೆ ಉತ್ತರ ಖಂಡ ವಾಕ್ಯಾರ್ಥವನ್ನು ತಿಳಿಸುತ್ತಾರೆ. **ಶ್ರಿಯಾಚ** - ಲಕ್ಷ್ಮಿ ಯೊಂದಿಗೆ, **ಸಹಿತಾಯ** - ಪ್ರಾಪ್ಯದೆಶೆಯಲ್ಲೂ ಯಾವಾಗಲೂ ಸೇರಿ ಇರುವ, **ಆತ್ಮೇಶ್ವರಾಯ** - ಬ್ರಹ್ಮರುದ್ರೇಂದ್ರಾದಿ ಸರ್ವ ಜೀವಾತ್ಮರಿಗೂ ನಿಯಾಮಕನಾಗಿ ಶೇಷಿಯಾಗಿ ಸ್ವಾಮಿಯಾಗಿರುವ ಶ್ರೀಮನ್ನಾರಾಯಣನಿಗೆ, **ಅಹಂತು**-ಭರನ್ಸ್ವೀಕಾರ ಮಾಡಿ ಕೃತ ಕೃತ್ಯನಾದ ಮತ್ತು ನಿರ್ಭಯನಾಗಿಯೂ, ನಿರ್ಭರನಾಗಿಯೂ ಇರುವ ನಾನಾದರೋ **ನಿರ್ಮಮಃ** - ಐಹಿಕಗಳಲ್ಲಿ ಸ್ವಲ್ಪವೂ ಮಮತೆ ಇಲ್ಲದವನಾಗಿ **ಅಶೇಷಂ** - ಸಮಸ್ತವಾದ ಎಂದರೆ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತವಾದ ಸಮಸ್ತಗಳಾದ, **ಅಪ್ರತಿಹತಂ** - ಏನೊಂದೂ ವಿಘ್ನಗಳಿಲ್ಲದೇ ಇರುವ **ನಿತ್ಯಂ** - ನಿತ್ಯವಾಗಿ ಯಾವಾಗಲೂ, **ದಾಸ್ಯಂ** - ದಾಸನಾದವನಿಗೆ ಯೋಗ್ಯವಾದ ಕೈಂಕರ್ಯ ವನ್ನು **ಕರ್ತುಂ** - ಮಾಡಲು, **ಅರ್ಥಯೇ** - ಪ್ರಾರ್ಥಿಸುವೆನು. ಇದು ಉತ್ತರ ಖಂಡದಲ್ಲಿ ತೋರುವ ಅರ್ಥವು. ಉಪೇಯ ಭಾವದಲ್ಲಿ ಪ್ರಾಪ್ಯವನ್ನು ಹೊಂದಿ ಪರಿಪೂರ್ಣ ಬ್ರಹ್ಮಾನುಭವವನ್ನು ಮಾಡುತ್ತಾ, ಲಕ್ಷ್ಮೀನಾರಾಯಣರಿಬ್ಬರಿಗೂ ನಾನಾ ವಿಧ ಕೈಂಕರ್ಯಗಳನ್ನೂ ಏನೊಂದೂ ಚ್ಯುತಿಯಿಲ್ಲದೆ ಸದಾ ಮಾಡುತ್ತಿರ ಬೇಕೆಂಬ ಪ್ರಾರ್ಥನೆಯು.

ತಾತ್ಪರ್ಯವು—ಜಗತಾಂ ಲೋಕಾನಾಂ ಈಶಾನಾಂ ಎಂಬ ಪ್ರಯೋಗ ದಿಂದ ಲಕ್ಷ್ಮಿಯು ಬ್ರಹ್ಮಲೋಕ ಮೊದಲುಗೊಂಡು ರುದ್ರೇಂದ್ರಾದಿಗಳ ಸಮಸ್ತ ಲೋಕಗಳನ್ನೂ ತನ್ನ ಪತಿಗೆ ತಾನು ಅಪೃಥಕ್ಸಿದ್ಧ ವಿಶೇಷಣಳಾದುದರಿಂದ ಆತನೊಂದಿಗೆ ವ್ಯಾಪಿಸಿ, ಭರಿಸಿ, ಅವಕ್ಕೆಲ್ಲಾ ಸ್ವಾಮಿಯಾಗಿ ನಿಯಾಮಕಳೆಂದು ಹೇಳಲ್ಪಟ್ಟಿತು. **ಈಶ** ಶಬ್ದದಿಂದ ವ್ಯಾಪಿಸುವ, ಭರಿಸುವ ಸ್ವಾಮಿನಿಯಾಗಿರುವ ಶಕ್ತಿಯು ಹೇಳಲ್ಪಟ್ಟಿತು. ಇದು ಏತರಿಂದವೆಂದರೆ **ಅಧೀಶವಮಿತೆ**ಯಾದುದರಿಂದ

ಎಂದು ಹೇಳಲ್ಪಟ್ಟಿತು. ಇದು ಯಾಮುನ ಮುನಿಗಳ **ಚತುಶ್ಲೋಕಿಯ** ಪ್ರಯೋಗವಾದ **ಲೋಕೈಕೇಶ್ವರಿ ಲೋಕನಾಥದಯಿತೆ** ಎಂಬುದನ್ನು ಸ್ಮರಿಸುವ ಹಾಗೆ ಮಾಡುತ್ತದೆ. ಆಕೆಯು ತನ್ನ ಪತಿಯ ಲೋಕೈಕೇಶ್ವರತ್ವವನ್ನು ಅನುಸರಿಸಿ ಲೋಕೈಕೇಶ್ವರಳು. ಜಗತ್ತಿನ ಸರ್ವಲೋಕಗಳೂ ಇಬ್ಬರಿಗೂ ಸೇರಿದ ವಿಭೂತಿಯು; **ಪತಿಪತ್ನ್ಯೋರ್ನ ವಿಭಾಗಃ** ಎಂಬ ಪ್ರಮಾಣಾನುಸಾರ ಇಬ್ಬರಿಗೂ ಸೇರಿದುದು; ಇವರಿಬ್ಬರೂ ಅವಕ್ಕೆಲ್ಲಾ ಸ್ವಾಮಿಯು. ಇದು **ಅಸ್ಯೇಶಾನಾ ಜಗತೋ ವಿಷ್ಣು ಪತ್ನೀ** ಎಂಬ ಪ್ರಮಾಣವನ್ನು ಅನುಸರಿಸಿ ಹೇಳಲ್ಪಟ್ಟಿತು. ಇದನ್ನೇ ಶ್ರೀ ಪರಾಶರ ಭಟ್ಟರು " **ಹೇಲಾಯಾ ಮಖಿಲಂ ಚರಾಚರ ಮಿದಂ** " ಎಂಬ ಶ್ರೀ ಗುಣರತ್ನಕೋಶ ಶ್ಲೋಕದಲ್ಲೂ, ಶ್ರೀ ಪರಾಶರರೂ ವಿಷ್ಣು ಪುರಾಣದ (೧. ೯.) ಅಧ್ಯಾಯದಲ್ಲೂ ಉಪಪಾದಿಸಿರುತ್ತಾರೆ. ಈ **ಜಗತಾಂ ಲೋಕಾನಾಂ ಈಶಾನಾಂ** ಎಂದು ಹೇಳಿರುವದು ಭೋಗ ವಿಭೂತಿಯಾದ ದಿವ್ಯ ವೈಕುಂಠ ಲೋಕಕ್ಕೂ ಉಪ ಲಕ್ಷಣವಾಗಿ ಭಾವಿಸಬಹುದು. ಆದುದರಿಂದ ಶ್ರೀ ಪರಾಶರಭಟ್ಟರವರು ಮುಂದಕ್ಕೆ " **ಭೋಗೇ ವಿಭೂತಿಃ ಪರಾ ಪುಣ್ಯಾಸ್ತೇ ಪರಿಚಾರ ಕರ್ಮಣಿ ಸದಾ ಪಶ್ಯನ್ತಿ ಯೇ ಸೂರಯಃ** " ಎಂಬುದರಿಂದ ಲಕ್ಷ್ಮಿಯು ನಿತ್ಯ ವಿಭೂತಿಗೂ ನಿಯಾಮಕಳೆಂದು ಹೇಳಿರುತ್ತಾರೆ.

ಹೀಗೆ ವರ್ಣಿಸುವದರಲ್ಲಿ ದಿವ್ಯ ವೈಕುಂಠದಲ್ಲಿರುವ " **ಸರ್ವಂ ಪರಿಜನಂ ಭಗವತ ಸ್ತತ್ತದವ ಸ್ಥೋಚಿತ ಪರಿಚರ್ಯಾಯಾಂ ಆಜ್ಞಾಪಯಂತ್ಯಾ ಶ್ರಿಯಾ ಸಹಾಸೀನಂ** " ಎಂಬ ಶ್ರೀ ಭಾಷ್ಯಕಾರ ಪ್ರಯೋಗವನ್ನು ಕಾಣಬಹುದು. ಹೀಗೆ ಲಕ್ಷ್ಮೀನಾರಾಯಣರಿಬ್ಬರೂ ಉಭಯ ವಿಭೂತಿಗೂ ನಾಯಕರು. ಆದ್ದರಿಂದ ಪಾದ್ಮೋತ್ತರದಲ್ಲಿ " **ಭೋಗಾರ್ಥಂ ಪರಮಂ ವ್ಯೋಮ ಲೀಲಾರ್ಥ ಮಖಿಲಂ ಜಗತ್ । ಭೋಗ ಕ್ರೀಡ ತಯೋ ವಿಷ್ಣೋರ್ವಿಭೂತಿ ರ್ದ್ವಯ ಸಂಸ್ಥಿತಾ ॥** " (೫. ೯.) ಮುಂದೆ ಲಕ್ಷ್ಮಿಯು " **ಈಶಾನಾ ಸರ್ವ ಜಗತಃ ವಿಷ್ಣು ಪತ್ನೀ ಸದಾ ಶಿವಾ** " ಎಂದು ದೇಳಲ್ಪಟ್ಟಿರುತ್ತದೆ; ಇಲ್ಲಿ **ಶಿವಾ** ಎಂದರೆ ಮಂಗಳ ಮಯಳು ಎಂಬರ್ಥವು; ಮುಂದಕ್ಕೆ **ನಾರಾಯಣೀ ಜಗನ್ಮಾತಾ ಸಮಸ್ತ ಜಗದಾಶ್ರಯಾ** ಎಂದು ಲಕ್ಷ್ಮೀ ಸ್ವರೂಪ ಸ್ವಭಾವಗಳನ್ನು ಹೇಳುತ್ತಾರೆ.

ಲಕ್ಷ್ಮಿಯೂ ಉಪಾಯ ಭೂತಳೆಂಬುದನ್ನೂ ಮೋಕ್ಷಪ್ರದಳೆಂಬುದನ್ನೂ ಶ್ರೀ ಪರಾಶರಭಟ್ಟರವರು ವ್ಯಕ್ತವಾಗಿ " **ಐಶ್ವರ್ಯ ಮಕ್ಷರಗತಿಂ ಪರಮಂ ಪದಂ ವಾ** " ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆಯೇ ಇಲ್ಲೂ, " **ಇಷ್ಟೋಪಾಯತಯಾ ಶ್ರಿಯಾಚ ಸಹಿತಯಾ** " ಎಂಬ ಪ್ರಯೋಗವಿರುತ್ತದೆ. **ಇಷ್ಟೋಪಾಯತಯಾ** ಎಂಬುದನ್ನು **ಅರ್ಥಯೇ** ಎಂಬುದರೊಂದಿಗೆ ಕೆಲವರು ಅನ್ವಯಿಸಿರುತ್ತಾರೆ:-ಇಷ್ಟ ಸಾಧನಕ್ಕಾಗಿ ಅಪೇಕ್ಷಿಸುತ್ತೇನೆ ಎಂದು ಅರ್ಥ ಹೇಳುತ್ತಾರೆ. **ಕೈಮ್ಕರ್ಯಂದಾಸ್ಯಂ ಅರ್ಥಯೇ** ಎಂದು ಅನ್ವಯಿಸುವದು ಯೋಗ್ಯವು.

ಆಗ ಒಂದು ವಾಕ್ಯವಾಗಿ ಭಾವಿಸಿ. **ಇಷ್ಟೋಪಾಯತಯಾ** ಎಂಬುವನ್ನು **ಶ್ರಿಯಾ** ಎಂಬುದಕ್ಕೆ ವಿಶೇಷಣವಾಗಿ ತನಗೆ ಇಷ್ಟವಾದುದಕ್ಕೆ ಉಪಾಯ ಭೂತಳಾದ ಲಕ್ಷ್ಮಿಯೊಂದಿಗೆ ಅವಿನಾಭೂತನಾಗಿರುವ, **ಆತ್ಮೇಶ್ವರಾಯ** - ತನಗೆ ಸ್ವಾಮಿಯಾದ ಶ್ರಿಯಃಪತಿ ನಾರಾಯಣನಿಗೆ **ಕರ್ತುಂ ದಾಸ್ಯಂ ಅರ್ಥಯೇ** ಎಂಬ ಅನ್ವಯವು. ಇದರಿಂದ ಲಕ್ಷ್ಮಿಯು ಪುರುಷಕಾರ ಪ್ರವೃತ್ತಿಯುಳ್ಳವಳಾದರೂ, ಆ ಪುರುಷಕಾರತ್ವವೂ ಉಪಾಯತ್ವದಲ್ಲಿ ಸೇರಿದುದಾದುದರಿಂದ, ಲಕ್ಷ್ಮಿಗೂ ಉಪಾಯತ್ವವು ಸಿದ್ಧವು. **ಶ್ರಿಯಾಚ** ಎಂಬಲ್ಲಿ ಚಕಾರವಿರುವದರಿಂದ ಉಪೇಯತ್ವದಲ್ಲೂ ಕೂಡ ಲಕ್ಷ್ಮೀಯುಕ್ತನೆಂದರೆ ಉಪಾಯ ಭಾವದಲ್ಲೂ ಲಕ್ಷ್ಮೀಯುಕ್ತನೆಂಬುದು ವ್ಯಕ್ತವು. ಇಲ್ಲಿ **ದಾಸ್ಯಂ** ಎಂದರೆ "**ದಾಸಭೂತಾ ಸ್ಸ್ವತಸ್ಸರ್ವೇ ಹ್ಯಾತ್ಮಾನಃ ಪರಮಾತ್ಮನಃ**" ಎಂಬಲ್ಲಿ ಹೇಳಿರುವ ಹಾಗೆ ಪರಮಾತ್ಮನಿಗೆ ದಾಸಭೂತನಾಗಿರುವದೇ ಈ ಚೇತನನಿಗೆ ಸ್ವರೂಪ ಸಿದ್ಧವಾದುದರಿಂದ ಅಂತಹ ಸ್ವಾಮಿಗೆ ಮಾಡುವ ದಾಸವೃತ್ತಿಯು; ಕೈಂಕರ್ಯವನ್ನು ಪ್ರಾರ್ಥಿಸುತ್ತೇನೆಂಬ ತಾತ್ಪರ್ಯವು. ಲಕ್ಷ್ಮಣನೂ ಹಾಗೆಯೇ ಹೇಳಿಕೊಂಡಿರುತ್ತಾನೆ. "**ಗುಣೈರ್ದಾಸ್ಯ ಮುಪಾಗತಃ**" ಎಂಬುದು ಅನುಸಂಧೇಯವು. ಶರಣಾಗತಿ ಒಂದು ಪ್ರಾರ್ಥನಾರೂಪವಾದುದೆಂಬುದನ್ನು **ಅರ್ಥಯೇ** ಎಂಬ ಕ್ರಿಯಾ ಪದವು ಸೂಚಿಸುತ್ತದೆ. ಅಹಿರ್ಬುಧ್ನ್ಯ ಸಂಹಿತಾ ಮತ್ತು ಭರತಮುನಿ ದಿವ್ಯ ಸೂಕ್ತಿಗಳನ್ನು ಅನುಸರಿಸಿ ಶ್ರೀ ದೇಶಿಕರವರು "**ಭರನ್ಯಾಸಂ ಯಾಚ್ಞಾನ್ವಿತ ಮಭಿವದನ್ತಿ ಪ್ರಪದನಮ್**" ಎಂದು ಹೇಳಿರುತ್ತಾರೆ (ಸಾಙ್ಗಪ್ರಪದನಾಧಿಕಾರದ ಪುಟ ೧೦೫೨) ಯಾವಾಗ ಶರಣಾಗತಿಯೇ ಯಾಚ್ಞಾನ್ವಿತವೋ ಆಗ ತತ್ಫಲವೂ ಯಾಚ್ಞಾನ್ವಿತವಾಗಲು ಸಂದೇಹವಿಲ್ಲವು. "**ನಿತ್ಯ ಸೇವಾ ಫಲತ್ವಂ ಪ್ರಯಚ್ಛ**" ಎಂದು ಕೇಳುವದು ನ್ಯಾಯವೇ? ಎಂದರೆ ಅದು ತನಗಾಗಿಯಲ್ಲದೆ ಶೇಷಿಗೆ ಭೋಗ್ಯವಾದುದರಿಂದ ಇಂತಹ ಪ್ರಾರ್ಥನೆಯಲ್ಲಿ ಪ್ರತ್ಯವಾಯವಿಲ್ಲವು.

ಆತ್ಮೇಶ್ವರ ಶಬ್ದದಿಂದ ಸರ್ವೇಶ್ವರನಿಗೂ ತಮಗೂ ಸ್ವಾಮಿಭೃತ್ಯ ಸಂಬಂಧವೆಂದೂ ಅಂತಹ ಕಿಂಕರನಾದವನಿಗೆ ಕೈಂಕರ್ಯಮಾಡುವದೇ ಸಹಜವಾದ ಸ್ವರೂಪವೆಂದೂ ಅಂತಹ ಕೈಂಕರ್ಯ ಸಾಮ್ರಾಜ್ಯ ಪ್ರಾಪ್ತಿಯನ್ನು ಸದಾ ಮಾಡುವ ಯೋಗ್ಯತೆಯನ್ನೂ ಪ್ರಾರ್ಥಿಸುತ್ತಾರೆ. ಅದು **ಅಪ್ರತಿಹತವು** ಯಾವಾಗವೆಂದರೆ ಪುನಸ್ಸಂಸಾರ ಪ್ರಾಪ್ತಿ ಸಂಭವವಿಲ್ಲದೆ ಯಾವಾಗಲೂ ಸರ್ವದೇಶ ಕಾಲಾವಸ್ಥೆಗಳಲ್ಲೂ ಕೈಂಕರ್ಯಮಾಡುತ್ತಿರ ಬೇಕೆಂಬ ಭಾವವು.

ಅಹಂ ಪ್ರಾರ್ಥಯೇ ಎಂಬ ಪ್ರಯೋಗವು ಸರಿಯೇ? ಮುಂದೆ **ನಿರ್ಮಮಃ** ಎಂದೂ ಇರುವಾಗ ಇಲ್ಲಿ ಅಸ್ಮಚ್ಛಬ್ದವು ಮಮಕಾರವನ್ನು ತೋರಿಸುವದಿಲ್ಲವೋ? ಎಂಬಾಕ್ಷೇಪಣೆ ತಂದರೆ ತಾನು ಪ್ರಪನ್ನನಾಗಲು ಶರಣಾಗತಿಯನ್ನನುಷ್ಠಿಸಿ ಮಂದಾಕಿನಿಯಲ್ಲಿ ಮಿಂದು ಪರಿಶುದ್ಧನಾಗಿ ಇತರರಿಗಿಂತ ವಿಲಕ್ಷಣನು, ಸ್ವಾಮಿ

ಮತ್ಪ್ರಾಪ್ತ್ಯರ್ಥತಯಾ ಮಯೋಕ್ತ ಮಖಿಲಂ ಸನ್ತ್ಯಜ್ಯ ಧರ್ಮಂ ಪುನಃ ಮಾಮೇಕಂ ಮದವಾಪ್ತಯೇ ಶರಣ ಮಿತ್ಯಾರ್ತ್ತೋವಸಾಯಂ ಕುರು ।

ದಾಸ್ಯವನ್ನು ಅರಿತ ಸುಕೃತಿಯು ಎಂದು ಹೇಳಿಕೊಳ್ಳುವದರಲ್ಲೇನೂ ಮಮಕಾರ ವಿಲ್ಲವು. ತಾನೂ, ತನಗೆ ಸೇರಿದ ಇಹಲೋಕದಲ್ಲಿರುವವೂ, ತನ್ನ ಪ್ರವೃತ್ತಿಗಳೂ ತನ್ನವು ಎಂಬ ಭಾವನೆಯೇಗ ಕೂಡದು, ಅದನ್ನೇ **ನಿರ್ಮಮಃ** ಎಂದು ನಿಷೇಧಿಸಿರುತ್ತಾರೆ. ಅಹಂಕಾರ ಮಮಕಾರಗಳು ಕೂಡದು. ನಾನೇ ಶರಣಾಗತಿಯನ್ನು ಅನುಷ್ಠಿಸಿದೆನು ಎಂಬ ಮಮತೆಯೂ ಕೂಡದು. ಸ್ವಾಮಿಯೇ ಸಿದ್ಧೋಪಾಯನಾಗಿ ಕರುಣಿಸಿ ನಡೆಸಿಕೊಟ್ಟನೆಂಬ ಭಾವವಿರತಕ್ಕದ್ದು. “**ಆತ್ಮಾತ್ಮೀಯ ಪದಾರ್ಥಸ್ಥಾ ಯಾ ಸ್ವಾತಂತ್ರ್ಯಸ್ಯ ತಾ ಮತಿಃ । ಮೇ ನೇ ತ್ಯೇವಂ ಸಮೀಚೀನ ಬುದ್ಧ್ಯಾ ಸಾತ್ರ ನಿವಾರ್ಯತೇ**” ಎಂಬುದು ಅನುಸಂಧೇಯವು. ನಾನೂ ಮತ್ತು ನನಗೆ ಸಂಬಂಧವಿರುವ ಪದಾರ್ಥಗಳಲ್ಲಿ ನನಗೆ ಸ್ವಾತಂತ್ರ್ಯ ಉಂಟು ಎಂಬ ಬುದ್ಧಿಯು ಯಾವುದೋ, ಅದು ಇಲ್ಲಿ ನನಗೆ ಯಾವ ಸ್ವಾತಂತ್ರ್ಯವೂ ಇಲ್ಲವು ಎಂಬ ವಿವೇಕ ಬುದ್ಧಿಯಿಂದ ಇಲ್ಲಿ ನಿವಾರಿಸಲ್ಪಟ್ಟಿರುತ್ತದೆ ಎಂಬ ಭಾವವು.

ಅಶೇಷಂ ಎಂದರೆ ಸರ್ವದೇಶ ಕಾಲಾವಸ್ಥೆಗೆ ಉಚಿತವಾದ ಎಲ್ಲಾ ಕೈಂಕರ್ಯಗಳನ್ನು ಎಂದು ಅರ್ಥ ಹೇಳಿದುದಾದರೆ, ಒಬ್ಬರೇ ಎಲ್ಲಾ ವಿಧ ಕೈಂಕರ್ಯಗಳನ್ನೂ ನಡೆಸುವದು ಹೇಗೆ? ಮತ್ತು ಮಿಕ್ಕ ಮುಕ್ತರುಗಳಿಗೂ ನಿತ್ಯ ಕೈಂಕರ್ಯ ಪ್ರಾಪ್ತಿಯನ್ನು ಹೇಳುವದು ಹೇಗೆ? ಇತ್ಯಾದಿ ಆಕ್ಷೇಪಗಳಿಗೆ ಸಮಾಧಾನವು ಹೇಗೆ ಎಂದರೆ ಅನೇಕ ಜನರು ಸೇರಿ, ಒಬ್ಬ ಮಹನೀಯನು ಮಾಡಿದ ಮಹತ್ತಾದ ಉಪಕಾರಕ್ಕಾಗಿ ಸಭೆ ಸೇರಿ ಆತನಿಗೆ ವಿಶೇಷ ಮರ್ಯಾದೆಯನ್ನು ತೊಡಗಿ, ಒಬ್ಬೊಬ್ಬರು ಒಂದು ವಿಧ ಕೈಂಕರ್ಯವನ್ನವಲಂಬಿಸಿ ನಡೆಸಿದರೆ ಹೇಗೆ ಎಲ್ಲರೂ ಎಲ್ಲಾ ಕೈಂಕರ್ಯಗಳಲ್ಲೂ ಅನ್ವಯವುಳ್ಳವರೆಂದು ಭಾವನೆಯುಂಟಾಗುತ್ತದೋ, ಹಾಗೆಯೇ ಈ ಸಂದರ್ಭದಲ್ಲೂ ಎಂದು ಭಾವಿಸತಕ್ಕದ್ದು. ಒಬ್ಬರು ಅವರಿಗೆ ಹಾರವನ್ನು ಹಾಕಿದರೆ, ಅವರೊಂದಿಗೆ ಇದ್ದ ಸರ್ವರೂ ಹಾರವನ್ನು ಸಮರ್ಪಿಸಿದ ಹಾಗೆ. **ನಿತ್ಯಂತು** ಎಂಬಲ್ಲಿರುವ ತು ಶಬ್ದವು ಏತಕ್ಕೆ? ಎಂದರೆ ಇಲ್ಲಿ ನಮಗೆ ಲಭಿಸುವ ಕೈಂಕರ್ಯಕ್ಕೆ ಪ್ರತಿಹತಿಗಳುಂಟು; ಅವು ನಿತ್ಯವೂ ಅಲ್ಲವು ಅಶಾಶ್ವತವು. ಆದರೆ ಮುಕ್ತದೆಶೆಯಲ್ಲಿ ಲಭಿಸುವ ಕೈಂಕರ್ಯಕ್ಕೆ ಚ್ಯುತಿಯಿಲ್ಲವು; ಶಾಶ್ವತವಾದುದು. ಹೀಗೆ ವೈಲಕ್ಷಣ್ಯ ಉಂಟೆಂಬುದು ಈ **ತು** ಶಬ್ದದಿಂದ ದ್ಯೋತಿತವು.

ಈ ಶ್ಲೋಕದಲ್ಲಿ ದ್ವಯ ಪೂರ್ವಖಂಡಾರ್ಥವು ಪೂರ್ವಾರ್ಧದಲ್ಲೂ, ಉತ್ತರ ಖಂಡಾರ್ಥವು ಉತ್ತರಾರ್ಧದಲ್ಲೂ ಹೇಳಲ್ಪಟ್ಟಿತೆಂದು ಅನ್ವಯಿಸುವದೇ ಸಾಧುವು.

ಅವತಾರಿಕೆಯು:—ಹಿಂದಿನ ಎರಡು ಶ್ಲೋಕಗಳ ಮೂಲಕ ದ್ವಯ ಮನ್ತ್ರದ ಅರ್ಥಗಳನ್ನು ಸಙ್ಗ್ರಹವಾಗಿ ತಿಳಿಸಿದರು. ಈ ಮುಂದಿನ ಎರಡು

ಶ್ಲೋಕಗಳ ಮೂಲಕವಾಗಿ ಚರಮ ಶ್ಲೋಕವೆಂದು ಹೇಳಿಸಿಕೊಳ್ಳುವ ಗೀತೆಯಲ್ಲಿ ಮುಖ್ಯವಾದ ಕೊನೆಯ ಶ್ಲೋಕವಾದ "**ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ**" ಎಂಬುದರ ಸಂಗ್ರಹಾರ್ಥವನ್ನು ತಿಳಿಸುತ್ತಾರೆ. ಉಪಾಸನೆಗೆ ಶಕ್ತರಾದವರಿಗೆ ಹೇಳಬೇಕಾದ ಕರ್ಮಯೋಗ ಜ್ಞಾನಯೋಗಗಳಿಂದ ಅನುಗ್ರಹೀತವಾದ ಭಕ್ತಿಯೋಗವನ್ನು ಇದರ ಹಿಂದಿನ ೧೮-೬೫ನೆಯಗೀತಾಶ್ಲೋಕದಲ್ಲಿಅರ್ಜುನನಿಗೆ ಹೇಳಿ ಮುಗಿಸಿದರು. ಆದರೆ ತಾನು ಅದಕ್ಕೆ ಅಸಮರ್ಥನಾಗಿರುವಾಗ ಹೇಗೆ ಪಾಪಗಳ ನಿವಾರಣೆಯುಂಟಾಗಿ ಮುಕ್ತಿಯನ್ನು ಹೊಂದಲು ಸಾಧ್ಯವು? ಎಂದು ಅರ್ಜುನನು ಶೋಕಿಸುತ್ತಿರುವವನ್ನು ಕಂಡು ಭಕ್ತವತ್ಸಲನು ಆತನ ಶೋಕೋಪಶಾಂತವಾದ ಸುಲಭವಾದ ಶರಣಾಗತಿ ಭರನ್ಯಾಸ, ಪ್ರಪದನ, ಇತ್ಯಾದಿ ಶಬ್ದಗಳಿಂದ ವಿಹಿತವಾದ ಹಿತಾಚರಣೆಯನ್ನು ಬೋಧಿಸಿ **ಮಾಶುಚಃ** ಶೋಕಿಸಬೇಡವೆಂದು ಹೇಳುತ್ತಾರೆ.

ಅರ್ಥವು—ಮತ್ಪ್ರಾಪ್ತ್ಯರ್ಥತಯಾ – ನಿತ್ಯ ವಿಭೂತಿಯಲ್ಲಿ ನನ್ನ ಪ್ರಾಪ್ತಿಯು ಲಭಿಸುವದಕ್ಕಾಗಿ, **ಮಯೋಕ್ತಂ** - ನನ್ನಿಂದಲೇ ಸಾಕ್ಷಾತ್ತಾಗಿ ಹೇಳಲ್ಪಟ್ಟ **ಅಖಿಲಂ ಧರ್ಮಂ** – ಸಮಸ್ತಗಳಾದ ಕರ್ಮಯೋಗ, ಜ್ಞಾನಯೋಗ ಭಕ್ತಿಯೋಗಗಳನ್ನೆಲ್ಲಾ, ಸನ್ತ್ಯಜ್ಯ-ಅವುಗಳೇ ಮೋಕ್ಷ ಸಾಧನಗಳೆಂಬ ಭಾವವನ್ನು ಚನ್ನಾಗಿ ತ್ಯಜಿಸಿ, (ಇದು ಸರ್ವ ಧರ್ಮಾನ್ ಪರಿತ್ಯಜ್ಯ ಎಂಬುದರ ಅರ್ಥವು), **ಮಾಮೇಕಂ** - ಮೋಕ್ಷ ಕೊಡುವ ಶಕ್ತಿಯುಳ್ಳ ಲಕ್ಷ್ಮೀ ಸಮೇತನಾದ ನನ್ನೊಬ್ಬನನ್ನೇ, **ಶರಣಮಿತಿ** - ಉಪಾಯವನ್ನಾಗಿ, **ಆರ್ತಃ** - ಉಪಾಸನಕ್ಕೇ ಶಕ್ತಿಯಿಲ್ಲವೇ, ಪಾಪಗಳು ಹೋಗುವ ಬಗೆ ಹೇಗೆ ಎಂದು ಬಹು ದೈನ್ಯದಿಂದ ಶೋಕಿಸುತ್ತಿರುವವನಾದ ನೀನು, **ಮದವಾಪ್ತಯೇ**, ಶ್ರಿಯಃಪತಿಯಾದ ನನ್ನನ್ನು ಪ್ರಾಪ್ಯವಾಗಿ ಹೊಂದುವದಕ್ಕಾಗಿ, **ಅವಸಾಯಂ ಕುರು** - ನಿಷ್ಕರ್ಷಿಸಿ ತಿಳಿದು ನನ್ನಲ್ಲಿ ಶರಣಾಗತಿಯನ್ನು ಅನುಷ್ಠಿಸು (ಶರಣಂವ್ರಜ ಎಂಬುದರ ಅರ್ಥವು) ಇಲ್ಲಿಗೆ ಚರಮ ಶ್ಲೋಕದ ಪೂರ್ವಾರ್ಧಾರ್ಥವು ಮುಗಿಯಿತು.

ಏವಂ–ಈ ಪ್ರಕಾರವಾಗಿ, ಆಕಿಂಚನ್ಯ ಅನನ್ಯ ಗತಿತ್ವಗಳಿಂದ ಆರ್ತನಾಗಿರುವ ಮತ್ತೂ **ವ್ಯವಸಾಯ ಯುಕ್ತಂ** - ಶ್ರಿಯಃ ಪತಿ ಪಾದ ಕಮಲದ ಆಶ್ರಯಣವೇ ತನಗೆ ಉಪಾಯವೇ ವಿನಾ ಬೇರೆ ಇನ್ನು ಯಾವುದೂ ಇಲ್ಲವೆಂಬ ನಿಷ್ಕರ್ಷೆಯಿಂದ ಕೂಡಿದ, **ತ್ವಾಂ** - ಉಪಾಸನಾರೂಪೋಪಾಯಕ್ಕೆ ಅಶಕ್ತನಾಗಿಯೂ, ಕರ್ಮಯೋಗಾದಿ ಜ್ಞಾನಗಳಿಲ್ಲದೆಯೂ ಇರುವ ಆಕಾರಣದಿಂದ ಅನನ್ಯಗತಿಕನಾದ ಶರಣಾಗತಿಯನ್ನು ಅನುಷ್ಠಿಸುವ ನಿನ್ನನ್ನು, (ಇದು **ತ್ವಾ** ಎಂಬುದರ ಅರ್ಥವು), **ಅಖಿಲ ಜ್ಞಾನಾದಿ ಪೂರ್ಣೋಹ್ಯಹಮ್** - ಆಶ್ರಿತ ಪ್ರಾರ್ಥನೆಯನ್ನು ಸಲ್ಲಿಸಲು ಯೋಗ್ಯವಾದ ಜ್ಞಾನಶಕ್ತಿ ಮೊದಲಾದ ಸಕಲ ಕಲ್ಯಾಣಗುಣಗಳಿಂದ ಪೂರ್ಣನಾಗಿ ಉಪಾಯ ನಿನ್ನಗೆ ಪ್ರಾಪ್ಯನಾಗಿರುವ ನಾನು (**ಅಹಂ** ಶಬ್ದಾರ್ಥವು) **ಮತ್ಪ್ರಾಪ್ತಿ**

ತ್ವಾಮೇವಂ ವ್ಯವಸಾಯಯುಕ್ತ ಮಖಿಲ ಜ್ಞಾನಾದಿ ಪೂರ್ಣೋ ಹ್ಯಹಮ್
ಮತ್ಪ್ರಾಪ್ತಿ ಪ್ರತಿಬಂಧಕೈ ರ್ವಿರಹಿತಂ ಕುರ್ಯಾಂ ಶುಚಿಂ ಮಾಕೃಥಾಃ || ೭ ||

ಪ್ರತಿಬಂಧಕೈಃ - ನನ್ನ ಪ್ರಾಪ್ತಿಗೆ ವಿರೋಧಿಗಳಾದ ಸರ್ವ ಪಾಪಗಳಿಂದಲೂ (**ಸರ್ವ ಪಾಪೇಭ್ಯಃ** ಎಂಬುವರ ಅರ್ಥವು) **ವಿರಹಿತಂ** - ಬಿಡಲ್ಪಟ್ಟವನನ್ನಾಗಿ, **ಕುರ್ಯಾಂ** - ಮಾಡುವೆನು (ಇದು ಮೋಕ್ಷಯಿಷ್ಯಾಮಿ ಎಂಬುದರ ಅರ್ಥವು) **ಶುಚಿಂ** - ಶೋಕ ವನ್ನು, **ಮಾಕೃಥಾಃ** - ಮಾಡಬೇಡ (ಇದು **ಮಾಶುಚಃ** ಎಂಬುದರ ಅರ್ಥವು).

ಉಪಪಾದನೆಯು—ಪಾರ್ಥಸಾರಥಿಯಾದ ಶ್ರೀ ಕೃಷ್ಣನು ತನಗೆ ಏಕಾಂತ ಭಕ್ತನಾಗಿ ತನ್ನನ್ನೇ ನಂಬಿರುವ ಅರ್ಜುನನಿಗೆ ಹೇಳುತ್ತಾನೆ, ಏನೆಂದರೆ, **ಸರ್ವಧರ್ಮಾ ಪರಿತ್ಯಜ್ಯ**, ದೇಹಾವಸಾನನಂತರ **ಮತ್ಪ್ರಾಪ್ತ್ಯರ್ಥತಯಾ** - ನನ್ನನ್ನು ಬಂದು ಸೇರುವ ಪ್ರಯೋಜನಕ್ಕಾಗಿಯೇ, ಹಿಂದೆ **ಮಯೋಕ್ತ ಮಖಿಲಂ** - ನನ್ನಿಂದ ಹೇಳಲ್ಪಟ್ಟ ಕರ್ಮಯೋಗ ಜ್ಞಾನಯೋಗಗಳಿಂದ ಸಾಧಿಸಲ್ಪಟ್ಟ ಭಕ್ತಿ ಯೋಗ ಪ್ರಕ್ರಿಯೆಗಳನ್ನೆಲ್ಲಾ, ಮೋಕ್ಷಾರ್ಥಿಗೆ ಬೇಕಾದ ಉಪಾಯವಾದ ಉಪಾಸನಾನುಷ್ಠಾನ ಕ್ರಮವನ್ನೆಲ್ಲಾ ಚನ್ನಾಗಿ ತ್ಯಾಗಮಾಡಿ, ಇವರಿಂದ ಉಪಾಸನೆಗೆ ಅಂಗಗಳೆಂಬ ಭಾವನೆಯಿಂದ ಸಂತ್ಯಜ್ಯ ತ್ಯಾಗಮಾಡಿ ಎಂಬರ್ಥವು; ಯಾವಾಗ ಉಪಾಸನಾರೂಪ ಸಾಧ್ಯೋಪಾಯವು ಬಹು ಕಷ್ಟವೇ ಎಂದು ಶೋಕಿಸುವ ಅರ್ಜುನನಿಗೆ ಆ ವಿಧವಾದ ಗುರುವಾದ ಉಪಾಯವನ್ನು ಬಿಟ್ಟು ಬಿಡು ಎಂದು ಉಪಪಾದಿಸಿದರೋ ಆಗ ಅದಕ್ಕೆ ಅಂಗವಾದ ಕರ್ಮಯೋಗ ಜ್ಞಾನಯೋಗ ಗಳನ್ನೂ ಬಿಟ್ಟು ಎಂಬರ್ಥವು ಸ್ವತಸಿದ್ಧವು. ಹೀಗಾದರೆ ಒಂದು ಪೂರ್ವ ಪಕ್ಷವು ಉದಿಸುತ್ತದೆ. ಏನೆಂದರೆ ಕರ್ಮಯೋಗಕ್ಕೆ ಈತನು ಮಾಡುವ ನಿತ್ಯ ನೈಮಿತ್ತಿಕ ಕರ್ಮಗಳು ಅಂಗಗಳು. ಹಾಗಾದರೆ ಅವುಗಳನ್ನು ಈ ಲಘೂಪಾಯವಾದ ಶರಣಾಗತಿರೂಪೋಪಾಯವನ್ನನುಷ್ಠಿಸುವವನು ಬಿಡಬಹುದೋ? ಎಂದರೆ ಅವುಗಳು "**ಅಹರಹಸ್ಸಂಧ್ಯಾ ಮುಪಾಸೀತ**" ಎಂಬ ಬೇರೇ ವಿಧಿಮೂಲಕ ಅವಶ್ಯ ಕರ್ತವ್ಯಗಳು; ಬಿಡತಕ್ಕದ್ದಲ್ಲವು. ಬಿಟ್ಟರೆ **ಆಜ್ಞಾಛೇದೀ ಮಮದ್ರೋಹೀ** ಎಂಬಲ್ಲಿ ಹೇಳಿರುವ ಹಾಗೆ ಭಗವನ್ನಿಗ್ರಹಕ್ಕೆ ಪಾತ್ರನಾಗುವನು. ಹಾಗಾದರೆ ಇಲ್ಲಿ ಹೇಳಿದ್ದೇನು? ಎಂದರೆ, **ಪರಿತ್ಯಜ್ಯ** ಎಂಬುದರಿಂದ ಅವುಗಳನ್ನು ಶರಣಾಗತಿಗೂ ಅಂಗವೆಂದು ಭಾವಿಸಿ ನಡೆಸತಕ್ಕದ್ದಲ್ಲವು ಎಂಬುದು. ಸಂಧ್ಯಾವಂದನಾದಿಗಳೂ ಆವಶ್ಯಕವಿಲ್ಲವೆಂಬ ಕೆಲವರ ಹೇಳಿಕೆಯು ಶಾಸ್ತ್ರಜ್ಞಾನಶೂನ್ಯತೆಯ ವಿಜೃಂಭಣೆಯು. ಈ ಸಂಧ್ಯಾವಂದನಾದಿ ಕರ್ಮಗಳು ಆಜ್ಞಾನುಜ್ಞಾ ಕೈಂಕರ್ಯಗಳೆಂದು ಭಾವಿಸಿ ಮಾಡತಕ್ಕವು. ಆದುದರಿಂದ ಈ ಸರ್ವಧರ್ಮಾ ಪರಿತ್ಯಜ್ಯ ಎಂಬುದರ ವ್ಯಾಖ್ಯಾನ

ದಿಂದ ಆರು ಭಾವಗಳನ್ನು ಗ್ರಹಿಸಬಹುದೆಂದು ವ್ಯಾಖ್ಯಾನ ಮಾಡಿರುತ್ತಾರೆ, ಹೇಗೆಂದರೆ:—

೧. ಕರ್ಮಯೋಗ ಜ್ಞಾನಯೋಗಗಳಿಂದ ಸಹಕೃತವಾದ ಭಕ್ತಿಯೋಗಾನುಷ್ಠಾನವು ಬಹು ದುಷ್ಕರವಾದವೇ ಎಂದು ನೀನು ಶೋಕಿಸುತ್ತಿರುವದರಿಂದ ಅವುಗಳನ್ನೆಲ್ಲಾ ಬಿಟ್ಟು,

೨. ನಿನಗೆ ಬೇರೆ ವಿಧಗಳಿಂದ ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನವು ವಿಹಿತವಾದುದರಿಂದ, ಅದು ಉಪಾಸನಕ್ಕೆ ಮಾತ್ರ ಅಂಗಗಳಾಗಿ ಬೇಕಾಗಿ, ಈ ಶರಣಾಗತಿಗೆ, ಅವು ಅಂಗಗಳು ಎಂಬ ಭಾವವನ್ನು ಬಿಟ್ಟು,

೩. ಉಪಾಸನವಾದ ಮುಖ್ಯೋಪಾಯಕ್ಕೆ ತಾನು ಅಶಕ್ತನೇ, ನನಗೆ ಗತಿಯೇನು ಎಂಬ ಆಕಿಂಚನ್ಯ ಅನನ್ಯಗತಿತ್ವದಿಂದ ಆ ಕರ್ಮಯೋಗಾದಿಗಳನ್ನೆಲ್ಲಾ ತ್ಯಜಿಸಿ,

೪. ನೀನು ಅನೇಕಾಪರಾಧಗಳನ್ನು ಅನೇಕ ಜನ್ಮ ಸಂತತಿಯಲ್ಲೂ ಮಾಡಿರಬಹುದು. ಇವುಗಳಿಗೆಲ್ಲಾ ಪ್ರಾಯಶ್ಚಿತ್ತಗಳುಂಟು. ಅವುಗಳನ್ನೆಲ್ಲಾ ಅನುಷ್ಠಿಸಿ ಪಾಪ ಪರಿಹಾರ ಮಾಡಿಕೊಳ್ಳಲು ಸಾಧ್ಯವಿಲ್ಲವೇ ಎಂದು ಶೋಕಿಸುವ ನೀನು ಆ ಪ್ರಾಯಶ್ಚಿತ್ತ ಕರ್ಮಗಳನ್ನೆಲ್ಲಾ ಬಿಟ್ಟುಬಿಟ್ಟು,

೫. ಈ ಮೇಲಿನ ಪ್ರಾಯಶ್ಚಿತಗಳಲ್ಲಿ ಕೆಲವನ್ನಾದರೂ ಆಶ್ರಯಿಸುವನೆಂದು ಭಾವಿಸಿ ಮಾಡತಕ್ಕದ್ದಲ್ಲವಾದುದರಿಂದ ಅವುಗಳನ್ನೆಲ್ಲಾ ಪರಿತ್ಯಾಗಮಾಡಿ,

೬. ಈ ಮುಂದೆ ಹೇಳುವ ಶರಣಾಗತ್ಯನುಷ್ಠಾನವನ್ನು ಮಾಡಿದರೂ, ಈ ಉಪಾಸನೆಯನ್ನು ಸ್ವಲ್ಪಮಟ್ಟಿಗೆ ಅನುಷ್ಠಿಸುವೆನು ಎಂದು ಸಙ್ಕಲ್ಪಿಸದೆ, ಅವೆಲ್ಲವನ್ನೂ ಸಂಪೂರ್ಣವಾಗಿ ತ್ಯಜಿಸಿ, ಲಘೂಪಾಯವಾದ ಶರಣಾಗತಿಯನ್ನು ಅನುಷ್ಠಿಸು ಎಂಬ ಭಾವವು.

ಮುಂದೆ ಲಘೂಪಾಯವನ್ನು ಅನುಷ್ಠಿಸು ಎಂದು ಹಿತೋಕ್ತಿಯನ್ನು ಹೇಳುತ್ತಾರೆ. **ಮಾಮೇಕಂ ಮದವಾಪ್ತಯೇ ಶರಣ ಮಿತ್ಯರ್ಥೋಽ ವಸಾಯಂ ಕುರು** - ನನ್ನೊಬ್ಬನನ್ನೇ ಸಿದ್ಧೋಪಾಯನನ್ನಾಗಿ ಭಾವಿಸಿ, ನನ್ನ ಪ್ರಾಪ್ತಿಗಾಗಿ ಆಶ್ರಯಿಸತಕ್ಕದ್ದೆಂಬ ನಿಶ್ಚಯ ಜ್ಞಾನವನ್ನು ಹೊಂದಿ, ಉಪಾಸನ ಮಾಡಲು ನನಗೆ ಶಕ್ತಿಯಿಲ್ಲವೇ ಎಂಬ ಆಕಿಂಚನ್ಯ ಮತ್ತು ಅನನ್ಯ ಗತಿತ್ವದಿಂದ ಕೂಡಿದ ನೀನು ಶರಣಾಗತಿಯನ್ನು ಅನುಷ್ಠಿಸತಕ್ಕದ್ದು.

ಮಾಮೇಕಂ ಎಂದು ಹೇಳಿದುದರ ಅಭಿಪ್ರಾಯವೇನೆಂದರೆ ಲಕ್ಷ್ಮೀ ಸಮೇತನಾಗಿರುವ ನನ್ನೊಬ್ಬನನ್ನೇ ಆಶ್ರಯಿಸು ಎಂಬ ಭಾವವು. ಲಕ್ಷ್ಮಿಯು ನಾರಾಯಣನಿಗೆ ಅಪೃಥಕ್ಸಿದ್ಧ ವಿಶೇಷಣವು. ಇಬ್ಬರೂ ಒಟ್ಟಿಗೇ ಇರುವವರು. ಆದುದರಿಂದ ಪರತತ್ವವೇ ಶ್ರೀಮನ್ನಾರಾಯಣನು. ಅವರಿಬ್ಬರಿಗೂ ಎರಡು ವಿಭೂತಿಯೂ, ಅವುಗಳಲ್ಲಿ ವ್ಯಾಪಾರಗಳೂ ಸೇರಿದವು. ನಿತ್ಯ ವಿಭೂತಿಯು

ಅವರಿಗೆ ಭೋಗ ವಿಭೂತಿಯು; ಈ ಅನೇಕ ಲೋಕಗಳೂ ಅವರಿಬ್ಬರಿಗೂ ಲೀಲಾ ವಿಭೂತಿಯು. ಆದುದರಿಂದ ಅವರಿಬ್ಬರೂ ಸೇರಿಯೇ ಪ್ರಾಪಕರು. ಅವರಿಬ್ಬರೂ ಸೇರಿಯೇ ಪ್ರಾಪ್ಯರು. ಈ ಅಭಿಪ್ರಾಯವು ದ್ವಯಮನ್ತ್ರದಲ್ಲಿ ಸುವ್ಯಕ್ತವೆಂದು ತಿಳಿಸಲ್ಪಟ್ಟಿತು. ಈ ಮೋಕ್ಷದಾಯಿಕ ಶಕ್ತಿಯು ಲಕ್ಷ್ಮೀನಾರಾಯಣರಿಗೆ ಮಾತ್ರವೇ ಇತರರಾದ ಬ್ರಹ್ಮರುದ್ರೇಂದ್ರಾಗಳಾಗಿ ಜೀವಕೋಟಿಗೆ ಸೇರಿದವರಿಗಿಲ್ಲವೆಂದು ಈ ಏಕವೆಂಬ ಶಬ್ದವು ಅವಧಾರಣ ಭಾವದಿಂದ **ಏಕಮೇವ** ಎಂಬುದರಿಂದ ಉದ್ಘೋಷಿಸಿ ಹೇಳುತ್ತದೆ. ಇದು ಗೀತೆಯಲ್ಲಿ ಉಪಪಾದಿತವು. "**ಮಾಮೇವ ಯೇ ಪ್ರಪದ್ಯಂತೇ ಮಾಯಾ ಮೇತಾಂ ತರಂತಿತೇ**" ಇಲ್ಲಿ **ಮಾಯಾ** ಎಂದರೆ ದೇಹವು, ಸಂಸಾರವು. ಅದೂ ಅಲ್ಲದೆ ಆಶ್ರಿತನಿಗೆ ಪರಮನಿಶ್ರೇಯಸ್ಸನ್ನುಂಟು ಮಾಡುವ ದಯಾ, ವಾತ್ಸಲ್ಯ, ಸೌಲಭ್ಯ, ಸೌಶೀಲ್ಯಾದಿ ಗುಣ ಯುಕ್ತನಾದವನು ಇನ್ನು ಯಾರೂ ಇಲ್ಲವಾದುದರಿಂದಲೂ **ಮಾಮೇಕಂ** ಎಂಬ ಪ್ರಯೋಗವು.

ಆದುದರಿಂದ **ಮಾ ಮೇ ಕಂ** ಎಂಬುದರಿಂದ ತೋರುವ ಅರ್ಥಗಳು ಯಾವುವೆಂದರೆ :-

೧. ತಾನು ಯಾವಾಗಲೂ ಆಶ್ರಿತನಿಗೆ ಹಿತಮಾಡುವುದಕ್ಕೆ ಯೋಗ್ಯವಾದ ತನ್ನ ಸ್ವರೂಪ ರೂಪಗುಣ ವಿಭವೈಶ್ವರ್ಯಗಳಿಗೆ ಅನುರೂಪವಾದವುಗಳನ್ನುಳ್ಳ ಲಕ್ಷ್ಮಿಯೊಂದಿಗೇ ಸೇರಿ ಸರ್ವವ್ಯಾಪಾರಗಳನ್ನುಳ್ಳವನಾದುದರಿಂದ, ಆಕೆಯೊಂದಿಗೆ, **ಆನೀತವಾತಂಗ್ಂ ಸ್ವಧಯಾ ತದೇ ಕಮ್** ಎಂಬಲ್ಲಿ ಹೇಳಿರುವ ಹಾಗೆ ಪ್ರಾಪಕ ಪ್ರಾಪ್ಯಾವಸ್ಥೆಗಳಲ್ಲೂ ಲಕ್ಷ್ಮೀ ಸಮೇತನಾಗಿರುವ **ಮಾಮೇಕಂ** ಎಂಬರ್ಥವು.

೨. ನೀನು ಮಾಡುವ ಈ ಶರಣಾಗತಿಯು ವ್ಯಾಜ್ಯ ಮಾತ್ರವು. ಆದರಿಂದ ಲಕ್ಷ್ಮೀವಿಶಿಷ್ಟನಾದ ನಾನು ಪ್ರೀತನಾದರೇನೇ ನಿನಗೆ ಮೋಕ್ಷವಾದುದರಿಂದ, **ಮಾಮೇಕಂ**-ಮುಖ್ಯವಾಗಿ ನನ್ನೊಬ್ಬನನ್ನೇ ಕುರಿತು ಶರಣಾಗತನಾಗುವುದರಿಂದ ಸಂಪ್ರೀಣನವಾಗುವ ಹಾಗೆ ಮಾಡು.

೩. ಮುಕ್ತಿಕೊಡುವ ಮುಕುಂದನಾದವನು ನಾನೊಬ್ಬನೇ ಇತರ ದೇವತೆಗಳಿಗೆ ಶಕ್ತಿಯಿಲ್ಲವಾದುದರಿಂದ ಶ್ರಿಯಃಪತಿಯಾದ ನನ್ನನ್ನೇ ಶರಣು ಹೊಂದು ಎಂದು **ಮಾಮೇಕಂ.**

೪. ನಿನಗೆ ಉಪಾಯಭೂತನಾಗಿ ಉಪಾಸನ ಸ್ಥಾನದಲ್ಲಿರುವವನು ನಾನೊಬ್ಬನೇ ಯಾದುದರಿಂದ ಉಪಾಸನೆಗೆಬೇಕಾದ ಯಾವ ಅಂಗಗಳೂ ಬೇಕಿಲ್ಲವೆಂದು **ಮಾಮೇಕಂ** ಎಂಬ ಪ್ರಯೋಗವು.

೫. ಹಾಗಾದರೆ ನಿತ್ಯನೈಮಿತ್ತಿಕಗಳೂ ಬೇಡವೇ ಎಂದರೆ ಅಂಗವಾಗಿ ಅವೂ ಬೇಡವೆಂದು **ಮಾಮೇಕಂ.**

೬. **ಮಾಮೇಕಂ ಶರಣಂ ವ್ರಜ** ಎಂದು ಹೇಳಿರುವದು ಎಲ್ಲಾ ಮನೋರಥಗಳಿಗೂ ನಾನೊಬ್ಬನೇ ಸಿದ್ಧೋಪಾಯನು ಎಂಬುದು. "**ಯದ್ಯೇನ ಕಾಮಕಾಮ್ಯೇನ ನಸಾಧ್ಯಂ ಸಾಧನಾನ್ತರೈ: .... ತೇನ ತೇನಾ ಪ್ಯತೇ ತತ್ತನ್ನ್ಯಾಸೇನೈವ ಮಹಾಮುನೇ**" ಎಂಬುದು ಅನುಸಂಧೇಯವು.

ಆರ್ತಃ ಎಂಬ ಪದವು ಆಕಿಂಚನ್ಯವನ್ನೂ, ಅನನ್ಯ ಗತಿತ್ವವನ್ನೂ ಬೋಧಿಸುತ್ತದೆ. ಈತನ ಪ್ರೈ ನ್ಯ ತಿ ಯು ಆ ಕಾರಣದಿಂದುಂಟಾದುದೆಂಬ ಭಾವವು. **ಕಾರ್ಪಣ್ಯವು** ಶರಣಾಗತಿಗೆ ಮುಖ್ಯವಾದ ಅಂಗವಾಗಿ ಇಲ್ಲಿ ಹೇಳಲ್ಪಟ್ಟಿತು. ಏತರಿಂದ ದೈನ್ಯತೆ ಎಂದರೆ ಇನ್ನೊಂದು ಉಪಾಯವಾದ ಉಪಾಸನವನ್ನು ಅವಲಂಭಿಸಲು ತನಗೆ ಶಕ್ತಿಯಿಲ್ಲವೇ ಎಂಬುದರಿಂದ. ಹೀಗಿರುವಾಗ ಪಾಪಗಳ ಪರಿಹಾರದೊಂದಿಗೆ ಮೋಕ್ಷ ಪ್ರಾಪ್ತಿಯು ಹೇಗೆ ಎಂಬುದಾಗಿ ಖೇದವು.

ಇಂತಹ ಖೇದವನ್ನು ಹೋಗಲಾಡಿಸುವದಕ್ಕಾಗಿ ಕೃಪಾಜಲಧಿಯು ಹೇಳುತ್ತಾರೇನೆಂದರೆ? **ಮದವಾಪ್ತಯೇ ಮಾಮೇಕಂ ಶರಣ ಮಿತ್ಯವಸಾಯಂ ಕುರು** - ನನ್ನನ್ನು ಬಂದು ಸೇರುವದಕ್ಕೆ **ನಾನೇ ಉಪಾಯವೆಂಬ** ನಿಶ್ಚಯ ಜ್ಞಾನವನ್ನು ಹೊಂದು. ಇದೇ **ಶರಣಂ ವ್ರಜ** ಎಂಬುದರ ಅರ್ಥವು. ಹಿಂದೆ ದ್ವಯಾಧಿಕಾರದಲ್ಲಿ ಹೇಳಿದ ಹಾಗೆ ಆಚಾರ್ಯರ ಮೂಲಕವಾಗಿ ಭರನ್ಯಾಸವನ್ನು ಅನುಷ್ಠಿಸು ಎಂಬ ಭಾವವು. ಇಷ್ಟು ಪೂರ್ವಾರ್ಧದ ಅರ್ಥವು.

ಮುಂದೆ ಚರಮ ಶ್ಲೋಕದ ಉತ್ತರಾರ್ಧಾರ್ಥವನ್ನು ಸಂಕ್ಷೇಪವಾಗಿ ತಿಳಿಸುತ್ತಾರೆ. ಚರಮ ಶ್ಲೋಕದ **ಅಹಂತ್ವಾ** ಎಂಬ ಪ್ರಯೋಗದಿಂದ ಪರಮಾತ್ಮಾಜೀವಾತ್ಮರುಗಳಿಗೆ ಇರುವ ವೈಲಕ್ಷಣ್ಯವು ಹೇಳಲ್ಪಟ್ಟಿತೆಂದುತಿಳಿಸುತ್ತಾರೆ **ತ್ವಾ** - ನೀನಾದರೋ ಬ್ರಹ್ಮ ವಿದ್ಯೆಯ ಮಹಿಮೆಯನ್ನು ಅರಿಯದ ಅಜ್ಞನು; ನಾನಾದರೋ ಸರ್ವಜ್ಞನು, ಆಶ್ರಿತನು ಯಾರು ಎಂದು ತಿಳಿದು ಆತನಲ್ಲಿ ವಿಶೇಷ ಪ್ರೀತಿಯಿಂದ ಆತನ ಮನೋರಥವನ್ನು ಅರಿತು ನಡೆಸಿಕೊಡುವ ಉದಾರನು. ನೀನು ಅಶಕ್ತನು, ಉಪಾಸನವನ್ನು ಕೈಕೊಳ್ಳಲು ಯೋಗ್ಯತೆ ಇಲ್ಲದವನು; ನಾನು ಸರ್ವ ಶಕ್ತನು; ನೀನು ಅಪರಾಧ ಚಕ್ರವರ್ತಿಯಾಗಿ ಆದರಿಂದ ಚಕಿತ ಮನಸ್ಕನಾಗಿರುವನು; ನಾನಾದರೋ ಅಂತವನ ಪಾಪರಾಶಿಗಳನ್ನೆಲ್ಲಾ ಹೋಗಲಾಡಿಸಿ, ನಿರತಿಶಯಾನಂದವನ್ನುಂಟು ಮಾಡುವ ಪರಿಪೂರ್ಣ ಬ್ರಹ್ಮನು. ನೀನು ನನ್ನನ್ನು ಆಶ್ರಯಿಸಿದರೆ ಅಶಾಶ್ವತವಾದ ದುಃಖಾಲಯವಾದ ಸಂಸಾರವನ್ನು ಪುನಃ ಹೊಂದುವದಿಲ್ಲವೆಂದು **ಪೂರ್ಣ** ವಿಶ್ವಾಸವನ್ನು ಹೊಂದಿದವನು. ಅಂತವನಿಗೆ **ಪುನಃ** ಅಂತಹ **ಘೋರ** ಸಂಸಾರ ಸಮುದ್ರದಿಂದ ದಾಟಿಸಿ ರಕ್ಷಿಸುವದೇ ಇತಿಕರ್ತವ್ಯತೆ ಎಂದೂ ಅದೇ ನನ್ನ ವ್ರತವೆಂದೂ ಬದ್ಧ ಕಂಕಣನಾಗಿರುವೆನು. ಇನ್ನೂ ಇತರ ಅಭಿಪ್ರಾಯಗಳನ್ನೂ ಈ **ಅಹಂತ್ವಾ** ಎಂಬ ಪ್ರಯೋಗವು ಸೂಚಿಸುತ್ತದೆ. ನವವಿಧ ಸಂಬಂಧಗಳನ್ನೂ ಪ್ರತಿಪಾದಿಸಿ ಹೇಳುತ್ತದೆ. ನೀನು ಪುತ್ರನು, ನಾನು ಪಿತಾ,

ನೀನು ಶೇಷನು, ನಾನು ಶೇಷೀ, ನೀನು ಶರೀರ, ನಾನು **ಶರೀರಿ** ಅಥವಾ ಇತ್ಯಾದಿ ೯ ಸಂಬಂಧಗಳೂ ಸೂಚಿತವು. ಇಂತಹ ಅಭಿಪ್ರಾಯಗಳಲ್ಲಿ ಸಙ್ಗ್ರಹ ಶ್ಲೋಕವಾದುದರಿಂದ ಕೆಲವನ್ನು ಮಾತ್ರ "**ತ್ವಾಮೇವಂ ವ್ಯವಸಾಯ ಯುಕ್ತಂ**" ಎಂದು ತ್ವಾ ಶಬ್ದಾರ್ಥವನ್ನೂ, **ಅಖಿಲ ಜ್ಞಾನಾದಿ ಪೂರ್ಣೋಹ್ಯಹಂ** ಎಂದು **ಅಹಂ** ಎಂಬ ಶಬ್ದಾರ್ಥವನ್ನೂ ಹೇಳಿದರು.

ಮುಂದೆ ಚರಮ ಶ್ಲೋಕದ **ಸರ್ವ ಪಾಪೇಭ್ಯಃ** ಎಂಬುದರ ಅರ್ಥವನ್ನು **ಮತ್ಪ್ರಾಪ್ತಿ ಪ್ರತಿಬಂಧಕೈಃ** ಎಂಬುದರಿಂದ ತಿಳಿಸುತ್ತಾರೆ. ದಿವ್ಯ ವೈಕುಂಠದಲ್ಲಿ ಶ್ರಿಯಃಪತಿಯನ್ನು ಹೋಗಿ ಸೇರಿ ಪರಿಪೂರ್ಣ ಬ್ರಹ್ಮಾನುಭವದೊಂದಿಗೆ ಅವರಿಗೆ ಕೈಂಕರ್ಯವನ್ನು ಎಸೆಗಲು ಪ್ರತಿಬಂಧಕಗಳು, ನಾವು ಮಾಡಿರುವ ಸಹಸ್ರಾಪರಾಧಗಳು. ನಮಗೆ ಪ್ರಾಪ್ತವಾಗಿರುವ ಅವಿದ್ಯಾ, ಕರ್ಮ, ವಾಸನಾ, ರುಚಿ, ಪ್ರಕೃತಿ ಸಂಬಂಧಗಳಿಂದುಂಟಾದ ದೇಹದ ಮೂಲಕವಾಗಿ, ಸ್ವತಂತ್ರಾತ್ಮ ಭ್ರಾಂತಿ, ದೇಹಾತ್ಮೈಕ್ಯ ಭ್ರಾಂತಿ, ಜೀವಪರಮಾತ್ಮೈಕ್ಯ ಭ್ರಾಂತಿಗಳು.

ಇವುಗಳ ಮೂಲಕವಾಗಿ ನಾನಾವಿಧ ಅಪರಾಧಗಳನ್ನು ಮಾಡಿರುವೆವು. ಇವುಗಳೆಲ್ಲಾ ಹೋಗುವ ಹಾಗೆ ಮಾಡುತ್ತೇನೆ, ನನ್ನ ಪಾದದಲ್ಲಿ ಮಾಡಿದ ಶರಣಾಗತಿಯ ಮಹಾತ್ಮ್ಯೆಯು ಅತ್ಯದ್ಭುತವಾದುದೆಂದು ಅರ್ಜುನನಿಗೆ ಉಪದೇಶಿಸುತ್ತಾರೆ. ಆ ಅಪರಾಧಗಳಲ್ಲಿ ಹಿಂದಿನ ಜನ್ಮಗಳಲ್ಲಿ ಮಾಡಿದುವಕ್ಕೆ **ಸಂಚಿತ**ವೆಂದು ಹೆಸರು. ಇವುಗಳು **ಅಭ್ಯುಪಗತ** ಈ ದೇಹದಲ್ಲಿ ಅನುಭವಿಸತಕ್ಕವು, **ಅನಭ್ಯುಪಗತ** - ಮುಂದೆ ಏನಾದರೂ ಜನ್ಮ ಉಂಟಾದರೆ ಆಗ ಅನುಭವಿಸತಕ್ಕವು ಎಂದು ಎರಡು ವಿಧವು. ಇವುಗಳಿಗೆ **ಪ್ರಾರಬ್ಧ**ವೆಂಬ ಹೆಸರು. ಮುಂದೆ ಎಂದರೆ ಭರನ್ಯಾಸಾನಂತರದಲ್ಲಿ ಪ್ರಾಪ್ತವಾಗುವ ಅಪರಾಧಿಗಳಿಗೆ **ಆಗಾಮಿ** ಎಂದು ಹೆಸರು. ಇದು ಬುದ್ಧಿಪೂರ್ವಕವೆಂದೂ ಅಬುದ್ಧಿಪೂರ್ವಕವೆಂದೂ ಎರಡು ವಿಧವು. ಮುಮುಕ್ಷುವು ಅನುಷ್ಠಿಸುವ ಉಪಾಯವಾದ ಉಪಾಸನಾ ಅಥವಾ ಭರನ್ಯಾಸದಿಂದ **ಸಂಚಿತ ಅನಭ್ಯುಪಗತ** ಪ್ರಾರಬ್ಧಗಳು ನಾಶವಾಗುತ್ತವೆ. **ಅಬುದ್ಧಿಪೂರ್ವಕವಾಗಿ** ಉಂಟಾಗುವ ಅಪರಾಧಗಳೂ ಲೇಪಿಸುವದಿಲ್ಲವು. ಇದೆಲ್ಲಾ "**ತದಧಿಗಮ ಉತ್ತರ ಪೂರ್ವಾಘಯೋಃ ರಶ್ಲೇಷ ವಿನಾಶೌ ತದ್ವ್ಯಪದೇಶಾತ್**" ಎಂಬ ಬ್ರಹ್ಮಸೂತ್ರದಲ್ಲಿ ಉಪಪಾದಿತವು. ಪ್ರಪನ್ನನು ಬುದ್ಧಿಪೂರ್ವಕವಾಗಿ ಮುಂದೆ ಮಾಡುವ ಅಪರಾಧಗಳೂ ಆತನಿಗೆ ಲೇಪಿಸುವದಿಲ್ಲವೆಂದು ಕೆಲವರು ಅಭಿಪ್ರಾಯ ಪಡುವರು. ಇದು ಸರಿಯಲ್ಲವೆಂದು ಶ್ರೀಯತಿವರ್ಯರು ಈ ಸೂತ್ರವ್ಯಾಖ್ಯಾನದಲ್ಲಿ ವಿಶದವಾಗಿ ತಿಳಿಸಿರುತ್ತಾರೆ. ಬುದ್ಧಿಪೂರ್ವಕವಾಗಿ ಮಾಡುವ ಅಪರಾಧಗಳಿಗೆ ಭಗವನ್ನಿಗ್ರಹಪೂರ್ವಕವಾಗಿ ಅಲ್ಪ ಶಿಕ್ಷೆಯುಂಟು. ಆದರೆ ಅದರ ಪರಿಹಾರಕ್ಕಾಗಿ ಪುನಃ ಉಪಾಯಾನುಷ್ಠಾನ ಮಾಡಿದರೆ ಅದೂ ಕಳೆದು ಹೋಗುತ್ತದೆ.

ಪ್ರಾರಬ್ಧಾನುಭವಕ್ಕಾಗಿ ಈ ಮಾನುಷಾದಿ ದೇಹವುಂಟಾಗಿರುತ್ತದೆ. ಅದು ದೇಹಾವಸಾನದವರೆಗೂ ಕಳೆಯುವದಿಲ್ಲ. ಈ ಪ್ರಾರಬ್ಧವು ಎರಡು ವಿಧವು. ಅನುಕೂಲ ಪ್ರಾರಬ್ಧವು; ಇದು ಸುಖರೂಪವಾದುದು. ಪ್ರತಿಕೂಲ ಪ್ರಾರಬ್ಧವು ದುಃಖರೂಪವಾದುದು. ಸುಖವು ಪ್ರಾಪ್ತವಾದರೆ ಮುಮುಕ್ಷುವು ನಿರ್ಲಿಪ್ತನಾಗಿ ಅನುಭವಿಸಬಹುದು. ದುಃಖರೂಪ ಪ್ರಾರಬ್ಧವು ತೊಲಗಬಹುದೇ ಎಂದರೆ ಶ್ರೀಕೃಷ್ಣಭಗವಾನ್‌ರವರು "**ತಮೇವ ಶರಣಂಗಚ್ಛ ಸರ್ವಭಾವೇನ ಭಾರತ। ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿ ಶಾಶ್ವತಮ್**" ಎಂಬ ಶ್ಲೋಕದಲ್ಲಿ (ಗೀ. ೧೮.೬೨) ಅದಕ್ಕಾಗಿ ಶರಣಾಗತಿಯನ್ನು ಅನುಷ್ಠಿಸಿದರೆ ಕಳೆಯುತ್ತದೆಂದು ಉಪದೇಶಿಸಿರುತ್ತಾರೆ-**ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂಬುದರಲ್ಲಿ ಈ ಅರ್ಥಗಳೆಲ್ಲಾ ಸಙ್ಗ್ರಹವಾಗಿ ಹೇಳಲ್ಪಟ್ಟಿತು. ಶ್ರೀ ಪರಾಶರ ಭಟ್ಟರವರು ಈ ಅರ್ಥಗಳನ್ನೆಲ್ಲಾ **ಮತ್ಪ್ರಾಪ್ತಿ ಪ್ರತಿಬಂಧಕೈರ್ವಿರಹಿತಂ ಕುರ್ಯಾಂ** ಎಂಬ ಪ್ರಯೋಗದಿಂದ ತಿಳಿಸಿರುತ್ತಾರೆ. ಎಲ್ಲಾ ಪಾಪಗಳು ತೊಲಗದೆ ಮೋಕ್ಷವು ಲಭಿಸದು. "**ತದಾ ವಿದ್ವಾನ್ ಪುಣ್ಯ ಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯ ಮುಪೈತಿ** ಎಂದು ಶ್ರುತಿಯು ಹೇಳುತ್ತದೆ. ಈ ಭಾವಗಳನ್ನೆಲ್ಲಾ ಶ್ರೀ ನಿಗಮಾನ್ತ ದೇಶಿಕರವರು "**ಪ್ರಾರಬ್ಧೇತರ ಪೂರ್ವಪಾಪಮಖಿಲಮ್**" ಎಂಬ ಶ್ಲೋಕದಲ್ಲಿ ಸಙ್ಗ್ರಹವಾಗಿ ತಿಳಿಸಿರುತ್ತಾರೆ. ದಾಸನು ಬರೆದಿರುವ ಶ್ರೀಮದ್ರಹಸ್ಯತ್ರಯಸಾರದ ಉಪಪಾದನೆಯಾದ ಆಚಾರ್ಯ ಹೃದಯಾನ್ವೇಷಿಣಿಯ ೧೬೦೬ ರಿಂದ ೧೬೧೦ನೆಯ ಪುಟಗಳನ್ನು ನೋಡಿ.

ಮಾಶುಚಃ-ವೆಂಬುದಕ್ಕೆ ವ್ಯಾಖ್ಯಾನವಾಗಿ **ಶುಚಿಂ ಮಾಕೃಥಾಃ** ಎಂದು ಪ್ರಯೋಗಿಸಿರುತ್ತಾರೆ. ಇದರಿಂದ ಅರ್ಜುನನು ಅನೇಕ ಪಾಪಗಳು ಜನ್ಮ ಜನ್ಮದಲ್ಲೂ ಮಾಡಲ್ಪಟ್ಟವೆಲ್ಲಾ ತೊಲಗುವ ಬಗೆ ಹೇಗೆ ಎಂದು ಶೋಕಿಸುತ್ತಿದ್ದ ನೆಂದೂ ಅದನ್ನು ನೋಡಿ ಭಕ್ತವತ್ಸಲನು ಅಳಬೇಡ, ನಿನಗೆ ಗುರೂಪಾಯವಾದ ಉಪಾಸನಕ್ಕೆ ಅಶಕ್ತಿಯಾದರೆ ಲಘುವಾದ ಉಪಾಯವಾದ ಶರಣಾಗತಿಯನ್ನು ಅನುಷ್ಠಿಸು, ಎಲ್ಲಾ ಸುಕೃತ ದುಷ್ಕೃತಗಳೂ ತೊಲಗುವುವು ಎಂದು ಸಮಾಧಾನ ವನ್ನು ಹೇಳಿದರು.

ಪಾಪಗಳೆಲ್ಲಾ ಹೋಗುತ್ತವೆ ಅಳಬೇಡವೆಂದಿಷ್ಟು ಮಾತ್ರವೇ ಹೇಳಲ್ಪಟ್ಟಿತೇ ವಿನಾ ಮೋಕ್ಷಪ್ರಾಪ್ತಿ, ಅಥವಾ ತನ್ನ ಪ್ರಾಪ್ತಿಯುಂಟಾಗುತ್ತದೆಂದು ಹೇಳಬೇಡವೇ ಎಂದು ಆಕ್ಷೇಪಿಸಿದರೆ **ಮೋಕ್ಷಯಿಷ್ಯಾಮಿ** ಎಂಬ ಪದದಿಂದ ಅರ್ಥವಾಗಿ ತೋರಿ ಬರುತ್ತದೆ. ಪುಣ್ಯ ಪಾಪಶೇಷಗಳುಳ್ಳವನೇ ಈ ಲೀಲಾ ವಿಭೂತಿಯಲ್ಲಿರತಕ್ಕವನೇ ವಿನಾ, ಪುಣ್ಯ ಪಾಪಗಳನ್ನೆಲ್ಲಾ ಕಳೆದುಕೊಂಡವನಿಗೆ ಬ್ರಹ್ಮನಾಡೀ ಮೂಲಕ ನಿರ್ಯಾಣವೂ, ಅರ್ಚಿರಾದಿಗತಿಯೂ, ವಿರಜಾವಗಾಹನವೂ, ಅಮಾನವಕರ ಸ್ಪರ್ಶವೂ

ನಿಶ್ಚಿತ್ಯ ತ್ವದಧೀನತಾಂ ಮಯಿ ಸದಾ ಕರ್ಮಾದ್ಯುಪಾಯಾರ್ನ್ ಹರೇ ।
ಕರ್ತುಂ ತ್ಯಕ್ತುಮಪಿ ಪ್ರಪತ್ತುಮನಲಂ ಸೀದಾಮಿ ದುಃಖಾಕುಲಃ ।
ಏತದ್ಜ್ಞಾನಮುಪೇಯುಷೋ ಮಮ ಪುನಸ್ಸರ್ವಾಪರಾಧಕ್ಷಯಮ್ ।
ಕರ್ತಾಸೀತಿ ದೃಢೋಽಸ್ಮಿ ತೇ ತು ಚರಮಂ ವಾಕ್ಯಂ ಸ್ಮರನ್ ಸಾರಥೇಃ ॥ ೮ ॥

ದಿವ್ಯ ವೈಕುಂಠವನ್ನು ಕುರಿತು ಗಮನವೂ, ಶ್ರಿಯಃಪತಿಯೊಂದಿಗೆ ಸಾಯುಜ್ಯವೂ ಲಭಿಸುವವು ಎಂಬಿವೆಲ್ಲಾ **ಮೋಕ್ಷಯಿಷ್ಯಾಮಿ** ಎಂಬ ಪದದಿಂದ ಸೂಚಿತವು.

ಮುಂದಿನ ಶ್ಲೋಕದ ಅವತಾರಿಕೆಯು—ಚರಮ ಶ್ಲೋಕದಲ್ಲಿ **ಮಾಶುಚಃ** ಅಳಬೇಡವೆಂದು ಇಷ್ಟು ಮಾತ್ರ ಹೇಳಲ್ಪಟ್ಟಿತೇ ವಿನಾ ಅರ್ಜುನನಿಗೆ ಶೋಕ ವೇತಕ್ಕೆಂಬುದು ವ್ಯಕ್ತವಾಗಿ ಹೇಳಲ್ಪಡಲಿಲ್ಲವು. ಶ್ರೀ ಮಹರ್ಷಿಯ ಉಕ್ತಿಯು ಬಹು ರಹಸ್ಯವು. ನಾವು ಊಹಿಸತಕ್ಕದ್ದಾಗಿರುತ್ತದೆ. ಹಿಂದಿನ ೭ನೆಯ ಶ್ಲೋಕದಲ್ಲಿ ಕರ್ಮಯೋಗ ಜ್ಞಾನಯೋಗ ಸಾಧ್ಯವಾದ ಭಕ್ತಿಯೋಗವನ್ನು ಮಾಡು ಎಂದು ಹೇಳಿದರು. ಆದುದರಿಂದ ಶ್ರೀ ಪರಾಶರ ಭಟ್ಟಾರ್ಯರು ಈ ಕೊನೆಯ ಶ್ಲೋಕದಲ್ಲಿ ಅರ್ಜುನನಿಗೆ ಶೋಕವು ಏತರಿಂದ ಉಂಟಾಯಿತು? ಅದು ನಿವರ್ತಿಸುವ ಬಗೆ ಹೇಗೆ? ಎಂಬುದನ್ನು ಪುನಃ ಅನುವಾದಮಾಡಿ, ಶರಣಾಗತಿಯೂ ಅಶಕ್ತರಿಗೆ ಚತುರ್ವಿಧ ಪುರುಷಾರ್ಥಗಳಿಗೂ ಉಪಾಯವೆಂದು ತಿಳಿಸಿ. ಸ್ವಾಮಿಯು ಪರಮ ಕೃಪಯಾ ಉಪದೇಶಿಸಿದ ಲಘೂಪಾಯವಾದ ಪ್ರಪತ್ತಿಯನ್ನು ಅನುಷ್ಠಿಸುವದರಿಂದ ಈ ಚೇತನನು ನಿರ್ಭರನಾಗಿ ನಿರ್ಭಯನಾಗಿ ಸಂತೋಷಚಿತ್ತನಾಗಿರಬಹುದೆಂದು ಹೇಳಿ ತಮ್ಮ ಅಷ್ಟಶ್ಲೋಕೀ ಎಂಬ ಸಙ್ಗ್ರಹ ಗ್ರಂಥವನ್ನು ನಿಗಮನ ಮಾಡುತ್ತಾರೆ.

ಅರ್ಥವು—ಹೇ ಹರೇ - ಆಶ್ರಿತರ ಪಾಪಗಳನ್ನೆಲ್ಲಾ ನಿರ್ಮೂಲ ಮಾಡುವನೇ, **ಮಯಿ** - ಪ್ರಪನ್ನನಾದ ನನ್ನಲ್ಲಿ, ನಿನ್ನನ್ನುಬಿಟ್ಟು ಬೇರೆ ಗತಿ ಏನೂ ಇಲ್ಲದ ಅನನ್ಯಗತಿಕನಾದ ನನ್ನಲ್ಲಿ, **ಸದಾ** - ಯಾವಾಗಲೂ, **ತ್ವದಧೀನತಾಂ** - ಸ್ವರೂಪ ಸ್ಥಿತಿ ಪ್ರವೃತ್ತಿಗಳಲ್ಲೆಲ್ಲಾ ನಿನಗೆ ಅಧೀನನಾಗಿರುವದನ್ನು, **ನಿಶ್ಚಿತ್ಯ** - ನಿರ್ಣಯ ಮಾಡಿಕೊಂಡು, ನಿರ್ಧರಿಸಿಕೊಂಡು, **ಕರ್ಮಾದ್ಯುಪಾಯಾರ್ನ್** - ಕರ್ಮಯೋಗ ಜ್ಞಾನಯೋಗಗಳಿಂದ ಸಾಧ್ಯವಾದ ಕಷ್ಟತರವಾದ ಭಕ್ತಿಯೋಗವೆಂದೆನಿಸುವ ಉಪಾಸನಾ ಕ್ರಮಗಳನ್ನು, **ಕರ್ತುಂ** - ಮಾಡಲು, **ಅನಲಂ** - ನಾನು ಅಸಮರ್ಥನು, (ಇದು ಒಂದು ಕಾರಣವು ಶೋಕಕ್ಕೆ) **ತ್ಯಕ್ತುಮಪಿ ಅನಲಂ** - ಕರ್ಮಯೋಗಾದಿಗಳನ್ನು ಅನಿಷ್ಠಿಸುವದು ಕಷ್ಟವು; ಸಂಪೂರ್ಣವಾಗಿ ಬಿಟ್ಟುಬಿಡೋಣವೆಂದರೂ ಬಿಡುವದಕ್ಕು ಮಾರ್ಗವಿಲ್ಲವು; ಏಕೆಂದರೆ ಕರ್ಮಯೋಗಾಂಗಕವಾದ ನಿತ್ಯನೈಮಿತ್ತಿಕಗಳನ್ನಾದರೂ ಸಾಧನ ಬುದ್ಧಿಯಿಂದ ಮಾಡದೆ ಬೇರೆ ಕಾರಣದಿಂದ

ಮಾಡಬೇಕಾಗಿರುವದರಿಂದ(ಇದೊಂದು ಕಾರಣವು ಶೋಕಕ್ಕೆ) ಮತ್ತೂ **ಪ್ರಪತ್ತಿ ಮನಲಂ** - ಲಘೂಪಾಯವಾದ ಶರಣಾಗತಿಯನ್ನಾದರೂ ಅನುಷ್ಠಿಸೋಣವೆಂದರೆ, ಅವಕ್ಕೆ ಬೇಕಾದ ಐದು ಅಂಗಗಳಲ್ಲಿ ಮಹಾ ವಿಶ್ವಾಸಾದಿಗಳು ಮುಖ್ಯವಾಗಿ ಬೇಕು; ಅವೆಲ್ಲಾ ಉಂಟೋ ಇಲ್ಲವೋ? ಅಪರಾಧ ಸಮೂಹಗಳ ಪರಿಹಾರ ಮೂಲಕ ಸಿದ್ಧಿಯುಂಟೋ ಇಲ್ಲವೋ? ಎಂಬ ಸಂದೇಹದಿಂದ ಅಥವಾ ಭರನ್ಯಾಸಾನುಷ್ಠಾನಕ್ಕೂ ನೀನೇ ಸಿದ್ಧೋಪಾಯನಾಗಿ ಮಾಡಿಸಬೇಕೇ ವಿನಾ ನಾನೇ ಶಕ್ತನಲ್ಲವು. (ಇದು ಶೋಕಕ್ಕೆ ಮೂರನೆಯ ಮುಖ್ಯವಾದ ಕಾರಣವು) ಇವುಗಳಿಂದ, **ದುಃಖಾಕುಲಃ** - ವ್ಯಾಕುಲ ಚಿತ್ತನಾಗಿ, **ಸೀದಾಮಿ** - ಕೃಶನಾಗಿ ಹೋಗಿರುತ್ತೇನೆ. ಪೂರ್ವಾರ್ಧದಿಂದ ಶೋಕಕ್ಕೆ ಮೂರು ಕಾರಣಗಳನ್ನು ತಿಳಿಸಿ, ಅವು ಈಗ ನೀನು ಅರ್ಜುನನಿಗೆ ಲೀಲಾ ಸಾರಥಿಯಾಗಿ ದಯಪಾಲಿಸಿದ ಚರಮ ಶ್ಲೋಕಾರ್ಥವನ್ನು ಸ್ಮರಿಸುತ್ತಾ ನಿನ್ನ ವಾಕ್ಯದಲ್ಲಿ ಸಂಪೂರ್ಣ ನಂಬಿಕೆಯುಂಟಾಗಿ, ನಿನ್ನನ್ನು ದೃಢ ಬುದ್ಧಿಯಿಂದ ಶರಣಹೊಂದಿ ನಿರ್ಭರನಾಗಿ ನಿರ್ಭಯನಾಗಿ ಸಂತೋಷಚಿತ್ತನಾಗಿದ್ದೇನೆಂದು ಉತ್ತರಾರ್ಧದಲ್ಲಿ ತಿಳಿಸುತ್ತಾರೆ. **ಸಾರಥೇಃ** - ಅರ್ಜುನನಿಗೆ ತಾನೇ ಸಿದ್ಧೋಪಾಯನಾಗಿ ಲೀಲಾ ಸಾರಥಿಯಾಗಿ ಕೃಪೆಗೈದ, **ತೇತು** - ಭಕ್ತರ ವಿಷಯದಲ್ಲಿ ಪರಮ ಕೃಪಾ ವಾತ್ಸಲ್ಯೌದಾರ್ಯಾದಿ ಗುಣಗಳಿಂದ ಪ್ರೇರಿತನಾಗಿ ಹೀಗೆ ವಿಲಕ್ಷಣವಾದ ಕಲ್ಯಾಣಗುಣಾಕರನಾದ ನಿನ್ನ **ಚರಮಂ ವಾಕ್ಯಂ** - ಗೀತೆಯ ಕೊನೆಯ ವಾಕ್ಯವಾದ **ಸರ್ವಧರ್ಮಾನ್ "ಪರಿತ್ಯಜ್ಯ"** ಎಂಬ ಅಂತಿಮ ಶ್ಲೋಕವನ್ನು. **ಸ್ಮರನ್**- ಅದರಲ್ಲಿ ಗರ್ಭೀಕರಿಸಿರುವ ರಹಸ್ಯಾರ್ಥಗಳನ್ನೆಲ್ಲಾ ಪುನಃ ಪುನಃ ಸ್ಮರಿಸಿದವನಾಗಿ ಅನುಸಂಧಾನ ಮಾಡಿದವನಾಗಿ. **ಏತದ್ಜ್ಞಾನ ಮುಪೇಯುಷಃ**—ಈ ಪೂರ್ವಾರ್ಧದಲ್ಲಿ ಉಪಪಾದಿಸಲ್ಪಟ್ಟ ನೀನಗೇನೇ ಅಧೀನನಾಗಿರುವೆನು, ಆ ಕಾರಣದಿಂದ ನೀನೇ ಸಿದ್ಧೋಪಾಯನೆಂಬ ನಿಶ್ಚಯ ಜ್ಞಾನವನ್ನು ಹೊಂದಿರುವ, **ಮಮ ಪುನಃ** ಅಶಕ್ತನಾಗಿ ಅಕಿಂಚನನಾಗಿ, ಅನನ್ಯಗತಿಕನಾಗಿರುವ ನನಗಾದರೋ, **ಸರ್ವಾಪರಾಧಕ್ಷಯಂ** ಸಮಸ್ತಪಾಪಗಳ ನಾಶವನ್ನು, **ಕರ್ತಾಸೀತಿ** - ನಿನಗೆ ಶರಣಾಗತನಾದರೆ ನೀನು ಮಾಡುತ್ತೀ ಎಂದು, **ದೃಢೋಸ್ಮಿ** - ನಂಬಿದವನಾಗಿ ಧೈರ್ಯದಿಂದಿರುತ್ತೇನೆ. ಸಮಸ್ತ ಅಪರಾಧಗಳಿಗೂ ಚಕ್ರವರ್ತಿಯಾಗಿರುವ ನನ್ನನ್ನು ನೋಡಿದರೆ ನನ್ನಂತವನಿಗೆ ಎಂದಿಗಾದರೂ ನಿನ್ನ ಕೃಪೆಯುಂಟೋ ಎಂಬ ಸಂದೇಹದಿಂದ ತಪಿಸುತಿದ್ದೆನು. **ಸೀದಾಮಿ** ಎಂದು ಹೇಳಿಕೊಂಡರು. ಕಾರುಣ್ಯವಾತ್ಸಲ್ಯಾದಿ ಮಹಾಗುಣಗಳುಳ್ಳವನಾಗಿ ಸಿದ್ಧೋಪಾಯನಾಗಿರುವ ನಿನ್ನನ್ನೂ ನಿನ್ನ ಚರಮ ಶ್ಲೋಕಾರ್ಥವನ್ನೂ ಪರಿಶೀಲಿಸಿದರೆ, ನಿನ್ನವನ್ನೆಯಾ ರಕ್ಷಿಸು, ಸರ್ವ ಪಾಪರಾಶಿಗಳನ್ನೂ ತೊಲಗಿಸು ಎಂದರೆ ನೀನು ಖಂಡಿತವಾಗಿಯೂ ಹಾಗೆಯೇಮಾಡುವಿ ಎಂದು **ದೃಢೋಸ್ಮಿ** ಮಹಾ ವಿಶ್ವಾಸವುಳ್ಳವನಾಗಿದ್ದೇನೆಂಬ ಭಾವವು.

ಉಪಪಾದನೆಯು—ನಿಶ್ಚಿತ್ಯ ತ್ವದಧೀನತಾಂ - ತಾವು ಸ್ವಾಮಿಗೆ ಅಧೀನನೆಂಬುದನ್ನು ನಿಶ್ಚಯಿಸಿಕೊಂಡೆನು ಎಂದು ಅರ್ಥವಾಗುವದರಿಂದ, ಹಾಗೆ ಅದನ್ನು ಹೇಗೆ ನಿಶ್ಚಯಿಸಿದರು? ಅರ್ಜುನನು ನಿಶ್ಚಯಿಸಿದುದು ಹೇಗೆ? ತಾವು ನಿಶ್ಚಯಿಸಿದುದು ಹೇಗೆ? ಎಂದರೆ ೧೮ನೆಯ ಅಧ್ಯಾಯದ ೬೧ನೆಯ ಶ್ಲೋಕದಲ್ಲಿ "**ಈಶ್ವರಸ್ಸರ್ವ ಭೂತಾನಾಂ ಹೃದ್ದೇಶೋಽರ್ಜುನ ತಿಷ್ಠತಿ। ಭ್ರಾಮಯನ್ ಸರ್ವ ಭೂತಾನಿ ಯನ್ತ್ರಾ ರೂಢಾನಿ ಮಾಯಯಾ**" ಶ್ರೀ ಹರಿಯು ಉಪದೇಶಿಸಿರುತ್ತಾರೇನೆಂದರೆ? ಸರ್ವ ಪ್ರಾಣಿವರ್ಗಕ್ಕೂ ಭಗವಂತನು ವ್ಯಾಪನ, ಭರಣಾದಿಗಳಿಂದ ಈಶ್ವರನು. ಜಗತ್ತೆಲ್ಲಾ ಅವನ ಸ್ವತ್ತು. ಅವನಿಂದಲೇ ಅವುಗಳಿಗೆಲ್ಲಾ ಸತ್ತಾಸ್ಥಿತಿಗಳು. ಆತನು ಸರ್ವಭೂತಗಳಿಗೆ ಹಿಂದಿನ ಕರ್ಮಾನುಸಾರವಾಗಿ, ಅವರುಗಳ ಸಾತ್ವಿಕಾದಿಗುಣಗಳಿಗನುಗುಣವಾಗಿ, ತನ್ನ ಅಚಿತ್ಪ್ರಕೃತಿಯ ಮೂಲಕ ದೇಹರೂಪ ಯಂತ್ರಗಳನ್ನುಂಟುಮಾಡಿ ಅವರುಗಳನ್ನು ಪ್ರವೃತ್ತಿಗಳಲ್ಲಿ ನಿಯಮಿಸುವನು. ಸುತ್ತಿಸುವನು ಎಂಬ ಉಪದೇಶದಮೂಲಕ **ನಿಶ್ಚಿತ್ಯ** ಎಂಬ ಭಾವವು. ಇದೇ ಉಪದೇಶವನ್ನು ಶ್ರೀ ಕೃಷ್ಣ ಭಗವಾನರವರು ಹಿಂದೆಯೂ ಮಾಡಿರುತ್ತಾರೆ. "**ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ ಮತ್ತಃ ಜ್ಞಾನ ಮಪೋಹನಂಚ**" (ಗೀ. ೧೫. ೧೫) ಇದರರ್ಥಕ್ಕೆ ದಾಸನು ಬರೆದಿರುವ ಭಗವದ್ಗೀತಾ ಕನ್ನಡದ ವ್ಯಾಖ್ಯಾನವನ್ನು ಪರಾಂಬರಿಸಿ. ಅಥವಾ (೨) ಗೀತಾ (೧೮) ಶ್ಲೋಕದಲ್ಲಿ "**ದೈವಂ ಚೈವಾತ್ರ ಪಂಚಮಮ್**" ಎಂಬಲ್ಲಿ ನಿನ್ನ 'ಸಙ್ಕಲ್ಪ ವಿನಾ ಯಾವ ಕಾರ್ಯವೂ ನಡೆಯುವದಿಲ್ಲವೆಂದು ನಿನ್ನ ಅಧೀನತೆಯನ್ನು ತಿಳಿದು ಕೊಂಡೆನು. (೩) ಅಥವಾ ನಾನು ನಯೋತ್ಸ್ಯೇ ಯುದ್ಧಮಾಡುವದಿಲ್ಲವೆಂದು ಶಪಥಮಾಡಿದ ಅರ್ಜುನನಿಗೆ "**ಮಿಥ್ಯೈವ ವ್ಯವಸಾ ಯಸ್ತೇ ಪ್ರಕೃತಿ ಸ್ತ್ವಾಂ ನಿಯೋಕ್ಷ್ಯತಿ**" - ನಿನ್ನ ಸಂಕಲ್ಪವು ಸುಳ್ಳಾಗುವದು ನಿನ್ನ ಕೈಯಲ್ಲೇ ಯುದ್ಧ ಮಾಡಿಸುತ್ತೇನೆ. ನಿನ್ನ ಕ್ಷತ್ರಿಯ ಸ್ವಭಾವವೇ ಯುದ್ಧಮಾಡಿಸುತ್ತದೆ ಎಂದು ಹೇಳಿದುದರಿಂದಲಾಗಲಿ ನಿನಗೆ ಅಧೀನನೆಂಬುವದನ್ನು ಅಥವಾ (೩) ನಿನ್ನ ಶಾಸ್ತ್ರವಾದ ಇದನ್ನು ಸಮರ್ಥಿಸುವ ಅನೇಕ ಶ್ರುತಿ ಪ್ರಮಾಣಗಳಿಂದ ನಿಶ್ಚಯಿಸಿಕೊಂಡನೆಂದಾಗಲಿ ಆಗಬಹುದು. ಇದನ್ನು ಸಮರ್ಥಿಸುವ ಅನೇಕ ಶ್ರುತ್ಯಾದಿ ಪ್ರಮಾಣಗಳಲ್ಲಿ ಶ್ರೀ ಯತಿವರ್ಯರು ಕೆಲವನ್ನು ಉದಾಹರಿಸಿರುವರು.—(೧) **ಅನ್ತಃ ಪ್ರವಿಷ್ಟ ಶಾಸ್ತಾ ಜನಾನಾಂಗ್ ಸರ್ವಾತ್ಮಾ**" ಎಲ್ಲಾ ಜೀವಾತ್ಮರಿಗೂ ಸರ್ವೇಶ್ವರನು ಆತ್ಮಾನಾಗಿ ನಿಯಾಮಕನೆಂದು ಹೇಳಲ್ಪಟ್ಟಿರುತ್ತದೆ. (೨) "**ಯ ಆತ್ಮನಿ ತಿಷ್ಠನ್ ಆತ್ಮನೋ ನ್ತರೋಯ ಮಾತ್ಮಾ ನವೇದ ಯಸ್ಯಾತ್ಮಾ ಶರೀರಂ ಯಮಾತ್ಮಾನ ಮನ್ತರೋ ಯಮಯತಿ**" (ಬೃ. ಮಾಧ್ಯಂದಿನ ಪಾಠ) ಮತ್ತು (೩) "**ಯೋಕ್ಷರ ಮಂತರೇ ಸಂಚರನ್, ಯಸ್ಯಾಕ್ಷರಂ ಶರೀರಂ ಯಮಕ್ಷರಂ ನವೇದ**" (ಸುಬಾಲ) ಈ ಉಪನಿಷತ್ತುಗಳು ಹೇಳುತ್ತವೇನೆಂದರೆ ಪರಮಾತ್ಮನಿಗೆ

ಜೀವಾತ್ಮನು ಶರೀರವಾದುದರಿಂದ, ಜೀವಾತ್ಮನಿಗೆ ಆತ್ಮವಾಗಿದ್ದುಕೊಂಡು ಆತನನ್ನು ನಿಯಮಿಸುತ್ತಾನೆ. ಹೀಗೆ ಅನೇಕ ಪ್ರಮಾಣಗಳಿವೆ. ಗೀತೆಯಲ್ಲೇ ಇನ್ನೊಂದು ಕಡೆಯಲ್ಲೂ (ಗೀ. ೧೦. ೨೦) "**ಅಹ ಮಾತ್ಮಾ ಗುಡಾ ಕೇಶ ಸರ್ವಭೂತಾಶಯ ಸ್ಥಿತಃ**" ಸರ್ವ ಭೂತಗಳಿಗೂ ತಾನು ಆತ್ಮಾವಾದುದರಿಂದಲೇ ಶ್ರುತಿಯು ಪರಮಾತ್ಮನನ್ನು "**ಪತಿಂವಿಶ್ವಸ್ಯ**" ಎಂಬಲ್ಲಿ ವಿಶ್ವಕ್ಕೆಲ್ಲಾ ಆತನು ಸ್ವಾಮಿಯೆಂದೂ **ಭೋಕ್ತಾ ಭೋಗ್ಯಂ ಪ್ರೇರಿತಾರಂಚ ಮತ್ವಾ** ಎಂಬಲ್ಲಿ ಆತ್ಮಾವಿಗೆ ಪ್ರೇರಕ ನೆಂದೂ ಹೇಳಿರುತ್ತದೆ. ಅಥವಾ ಮೂಲಮನ್ತ್ರದ ಮುಖ್ಯೋಪದೇಶದಿಂದಲೂ ನಿಶ್ಚಯಿಸಿಕೊಂಡೆನು. ಮಕಾರ ವಾಚ್ಯಃ ಜೀವಃ ಆಯ್ಯೈವ - ವಿಷ್ಣುವಿಗೇ ಶೇಷ ಭೂತನು. ಹೀಗೆ "**ನಿಶ್ಚಿತ್ಯ ತ್ವದಧೀನತಾಂ**" ಎಂಬ ಭಾವವು. ಇಂತಹ ಉಪದೇಶ ಗಳಿಂದ ಅರ್ಜುನನೂ ಹಾಗೆಯೇ ನಾವೂ ಸಹ **ನಿಶ್ಚಿತ್ಯ ತ್ವದಧೀನತಾಂ**—ಸರ್ವೇಶ್ವರ ಕನಾದ ನಿನಗೆ ಅಧೀನರು ಎಂಬುದನ್ನು ನಿಶ್ಚಯಿಸಿದುದರಿಂದ ಎಂಬರ್ಥವು. ಆದುದರಿಂದ ಸರ್ವ ಶ್ರೇಯಸ್ಸಿಗಾಗಿಯಾಗಲಿ ಅಥವಾ ಈಗ ಮುಖ್ಯವಾಗಿ ಬೇಕಾದ ಮೋಕ್ಷಪ್ರಾಪ್ತಿಗಾಗಲಿ ಉಪಾಯಾನುಷ್ಠಾನವನ್ನು ನೀನು ಸಿದ್ಧೋಪಾಯನಾಗಿ ನಿಂತು ನೀನೇ ನಡೆಸಿಕೊಡಬೇಕೆಂಬ ಭಾವವು ತೋರಿಬರುತ್ತದೆ. ಕೇವಲ ತನ್ನಿಂದಲೇ ಸ್ವತಂತ್ರಿಸಿ ಉಪಾಯಾನುಷ್ಠಾನವು ಸಾಧ್ಯವಿಲ್ಲವೆಂಬ ಭಾವವು ಮುಂದೆ ಸೂಚಿಸಲ್ಪಡುತ್ತದೆ.

ಉಪಾಯಗಳು ಮುಖ್ಯವಾಗಿ ಎರಡು. (೧) ಕರ್ಮಯೋಗಾದಿಗಳಿಂದ ಸಹಕೃತವಾದ ಭಕ್ತಿ ಯೋಗವು ಎಂದರೆ ಪರಮ ಪುರುಷನ ದಿವ್ಯ ಮಂಗಳ ವಿಗ್ರಹದ ಉಪಾಸನೆಯು. (೨) ಪಂಚಾಂಗಗಳಿಂದ ಸೇರಿದ ಶರಣಾಗತಿಯು. ಇದಕ್ಕೆ ಪ್ರಪದನ ಭರನ್ಯಾಸ ಮುಂತಾದ ಹೆಸರುಗಳುಂಟು. ಮೊದಲನೆಯದಾದ ಗುರೂಪಾಯಕ್ಕೆ ತನಗೆ ಯೋಗ್ಯತೆ ಇಲ್ಲವೆಂದು ಅರ್ಜುನನು ಶೋಕಿಸಿ ದೈನ್ಯವನ್ನು ಹೊಂದಿರುತ್ತಾನೆ. ಅದನ್ನು ನೋಡಿ ಲೀಲಾ ಸಾರಥಿಯು ಎರಡನೆಯ ಉಪಾಯ ವನ್ನು ಉಪದೇಶಿಸಿ, ಆತನ ಶೋಕವನ್ನು ಹೋಗಲಾಡಿಸುತ್ತಾರೆಂದು ಇಲ್ಲಿ ಹೇಳಲ್ಪಡುತ್ತದೆ. ಇದೀಗ ಈ ಶ್ಲೋಕಕ್ಕೆ ಸಂಗತಿ ಮತ್ತು ಅವತಾರಿಕೆಯು.

ಕರ್ಮಾದ್ಯುಪಾಯಾನ್ ಎಂಬುದರಿಂದ ಗುರೂಪಾಯಕ್ಕೆ ತಾವು **ಅನಲಂ** - ಸಮರ್ಥನಲ್ಲವೆಂದು ಹೇಳಿಕೊಳ್ಳುತ್ತಾರೆ. ಕರ್ಮಯೋಗವೆಂದರೆ ತನ್ನ ನಿತ್ಯ ನೈಮಿತ್ತಿಕಗಳಿಂದ ಕೂಡಿದ ದೇವತಾರ್ಚನೆ ಮೊದಲಾದ ಯಜ್ಞದಾನ ತಪಸು ಗಳು. ಇವುಗಳನ್ನು ಫಲ ಕರ್ತೃತ್ವ ಮಮತೆಗಳನ್ನು ತ್ಯಜಿಸಿ ಅನುಷ್ಠಿಸೋಣವು. ಇವುಗಳಿಂದ ಉಂಟಾಗುವ ಫಲವು, ಉಪಾಸನವೆಂದರೆ ಭಕ್ತಿಯೋಗಕ್ಕೆ, ಪ್ರತಿಬಂಧಕ ವಾಗಿದ್ದ ಪಾಪಗಳ ವಿನಾಶವು; ಮತ್ತು ಆತ್ಮ ಸ್ವರೂಪ ಜ್ಞಾನವು. ಈ ಕರ್ಮ ಯೋಗದಿಂದ ಆತ್ಮೋಪಾಸನೆಗೆ ಸಂಪೂರ್ಣ ವೈರಾಗ್ಯದ ಮೂಲಕ ಶಕ್ತಿ ಇರುವವನ್ನು

ಜ್ಞಾನಯೋಗವನ್ನು ಅವಲಂಬಿಸಬಹುದು. ಹಾಗೆ ಶಕ್ತಿ ಇಲ್ಲದವನಿಗೆ ಜ್ಞಾನ ಯೋಗಬೇಕಿಲ್ಲವು. ಕರ್ಮಯೋಗದ ಮೂಲಕ ಪ್ರತಿಬಂಧಕ ಪಾಪ ನಿವೃತ್ತಿಯನ್ನು ಹೊಂದಿದವನಿಗೆ ಭಕ್ತಿಯೋಗದಲ್ಲಿ ಅಧಿಕಾರವು. ಅದನ್ನು ಏಕಾಗ್ರಚಿತ್ತನಾಗಿ ಅಷ್ಟಾಂಗ ಯುಕ್ತವಾಗಿ ನಡೆಸತಕ್ಕದ್ದಾಗಿರುತ್ತದೆ. ಇದರಿಂದ ಕರ್ಮಯೋಗ ಜ್ಞಾನಯೋಗಗಳು ಅಂಗವು; ಅಂಗಿಯು ಭಕ್ತಿಯೋಗವೆಂದು ಹೇಳಿದಂತಾಯಿತು. ಹೀಗೆ ಇವೆಲ್ಲಾ ಸೇರಿ ಉಪಾಸನ, ಭಕ್ತಿ, ವೇದನ, ಜ್ಞಾನವೊದಲಾದ ಶಬ್ದಗಳಿಂದ ಬೋಧಿತವಾದ ಒಂದೇ ಉಪಾಯವು. ಹಾಗಾದರೆ **ಕರ್ಮಾದ್ಯುಪಾಯಾನ್** ಎಂಬಲ್ಲಿ ಬಹುವಚನವು ಹೇಗೆ? ಎಂದರೆ ಅಂಗಾಂಗಿಗಳೆರಡನ್ನೂ ಸೇರಿಸಿ, ವ್ಯವಹಿತೋಪಾಯ ಅವ್ಯವಹಿತೋಪಾಯಗಳೆರಡು ವಿಧಗಳನ್ನೂ ಒಟ್ಟು ಕೂಡಿಸಿ ಹೇಳಿದುದಾಗಿರುತ್ತದೆ. ಕರ್ಮಯೋಗ ಜ್ಞಾನಯೋಗಗಳಾದ ಅಂಗಗಳು ವ್ಯವಹಿತೋಪಾಯಗಳು; ಭಕ್ತಿ ಯೋಗವಾದರೋ ಅವ್ಯವಹಿತೋಪಾಯವು; ಆದುದರಿಂದ ಬಹುವಚನವು.

ನಾವುಗಳು ಪ್ರತಿ ನಿತ್ಯವೂ ಕೂಡ ಮಾಡುವ ಸ್ನಾನ ಸಂಧ್ಯಾವಂದನಾದಿ ನಿತ್ಯಕರ್ಮಾನುಷ್ಠಾನಗಳೂ, ದೇವತಾರ್ಚನಾದಿಗಳೂ, ಅವತಾರ ರಹಸ್ಯ ಜ್ಞಾನಾದಿಗಳ ಉಪದೇಶವೂ, ದಿವ್ಯದೇಶವಾಸ, ನಾಮ ಸಂಕೀರ್ತನ, ಸಹಸ್ರನಾಮ ಪಠನ, ದಿವ್ಯ ತೀರ್ಥಾವಗಾಹನ ಪುಣ್ಯಕ್ಷೇತ್ರ ಸಂಚಾರ, ದೀಪಾರೋಪಣಾದಿ ಕೈಂಕರ್ಯ ಮೊದಲಾದವುಗಳೆಲ್ಲಾ ಈ ಕರ್ಮಯೋಗದಲ್ಲೇ ಸೇರಿದವು. ಇವುಗಳಿಗೆ ಆಜ್ಞಾನುಜ್ಞಾ ಕೈಂಕರ್ಯಗಳೆಂದೂ ಕರೆಯುವರು. ನಿತ್ಯನೈಮಿತ್ತಿಕಗಳನ್ನು ಬಿಡಲು ಮಾರ್ಗವಿಲ್ಲವು. ಆದುದರಿಂದ **ತ್ಯಕ್ತುಮಪಿ ಅನಲಂ** - ಬಿಡುವದಕ್ಕೂ ಕೂಡ ಸಮರ್ಥನಲ್ಲವು. ಅಂಗಾಂಗಿಗಳಿಂದ ಸೇರಿದ ಉಪಾಸನವನ್ನು ಮಾಡಲು ಶಕ್ತಿಯಿಲ್ಲವೆಂದು **ಕರ್ತು ಮನಲಂ** ಎಂದು ಹೇಳಿಕೊಂಡರು. ಹೋಗಲಿ ಲಘುವಾದ ಪ್ರಪದನವನ್ನಾಗಲಿ ಅನುಷ್ಠಿಸೋಣವೆಂದರೆ, ಅದಕ್ಕೂ ಸಹಾಯಕನಾಗಿ ಸಿದ್ಧೋಪಾಯನಾಗಿ ನಡಸಿ ಕೊಡಬೇಕಾದುದರಿಂದ ಸ್ವತಂತ್ರಿಸಿ ನಾನೇ ಅನುಷ್ಠಿಸುವದಕ್ಕೂ ಯೋಗ್ಯತೆಯಿಲ್ಲ ವೆಂದು **ಪ್ರಪತ್ತು ಮನಲಂ** ಎಂದು ಹೇಳಲ್ಪಟ್ಟಿತು. ಕರ್ಮಯೋಗಾದಿಗಳನ್ನು ಅನುಷ್ಠಿಸಿ, ಉಪಾಸನವನ್ನು ಮಾಡಲು ತಮಗೆ ಯೋಗ್ಯತೆಯಿಲ್ಲವೆಂಬುದು ಹೇಗೆ? ಎಂದರೆ (೧) ತಾನು ಉಪಾಸನವನ್ನು ಮಾಡಿ ಸಾಧಿಸುತ್ತೇನೆಂಬುದು ಪ್ರಥಮತಃ ಸ್ವರೂಪ ವಿರುದ್ಧವು. (೨) ಕಷ್ಟ ಸಾಧ್ಯವು ತುಂಬಾ ಕ್ಲೇಶಾಧಿಕ್ಯವುಳ್ಳದ್ದು. (೩) ತುಂಬಾ ವೈರಾಗ್ಯವು ಬೇಕಾಗಿ ಅಪಾಯವುಳ್ಳದ್ದು. (೪) ಧನಾದಿ ಅನ್ಯ ಪದಾರ್ಥಗಳ ಆವಶ್ಯಕತೆಬೇಕಾದುದು. (೫) ದೇಹಾವಸಾನದಲ್ಲೇ ಫಲ ಪ್ರಾಪ್ತಿಯ ನಂಬಿಕೆ ಇಲ್ಲದೆ ವಿಳಂಬಿಸಬಹುದಾದುದು. (೬) ಪರಮೈಕಾಂತ್ಯಬೇಕಾದುದು. ಹೀಗೆ ಈ ಕಾರಣಗಳಿಂದ **ಕರ್ತು ಮನಲಂ** ಎಂದು ಹೇಳಿದರು.

ತ್ಯಕ್ತು ಮಪಿ ಅನಲಂ ಹೇಗೆ? ಎಂದರೆ ಪ್ರಪದನಕ್ಕೆ ಸ್ನಾನಸಂಧ್ಯಾವಂದ ನಾದಿಗಳು ಅಂಗವಲ್ಲದಿದ್ದರೂ, ವರ್ಣಾಶ್ರಮ ಧರ್ಮಗಳನ್ನು ಅನುಷ್ಠಿಸಲೇ ಬೇಕೆಂಬ

ಜೇರಿ ಶಾಸ್ತ್ರವಿರುವದರಿಂದ, ಸರ್ವೇಶ್ವರನಿಗೆ ಆಜ್ಞಾ ಕೈಂಕರ್ಯಗಳಾಗಿ ಮಾಡತಕ್ಕವುಗಳಾಗಿವೆ. ಬಿಟ್ಟರೆ **ಆಜ್ಞಾ ಛೇದಿ ಮಮ ದ್ರೋಹಿ**ಯಾಗಿ ಭಗವನ್ನಿಗ್ರಹಕ್ಕೆ ಗುರಿಯಾಗುವನು. ಆದುದರಿಂದ **ತ್ಯಕ್ತು ಮನಲಂ** ಎಂದು ಹೇಳಲ್ಪಟ್ಟಿತು. ಆಗಲಿ ಪ್ರಪದನವು ಸುಲಭೋಪಾಯವಾಯಿತಲ್ಲಾ **ಪ್ರಪತ್ತು ಮನಲಂ** ಎಂದು ಹೇಳಿದುದು ಹೇಗೆ? ಎಂದರೆ ಪ್ರಪದನವೇನೋ ಸುಕರೋಪಾಯವೇ ಹೌದು. ದಾಸಭೂತನಿಗೆ ಶರಣಾಗತಿಯು ಸ್ವರೂಪಾನುಗುಣವಾದುದು, ನಿರಪಾಯವಾದುದು, ಯಾವುದರ ಅಪೇಕ್ಷೆಯೂ ಇಲ್ಲದುದು; ದೇಹಾವಸಾನದಲ್ಲೇ ವಿಳಂಬವಿಲ್ಲದೆ ಫಲಕೊಡುವಂತಾದ್ದು; ಒಂದು ಅಲ್ಪಕಾಲದಲ್ಲಿ ಗುರುಮುಖೇನ ಅನುಷ್ಠಿಸತಕ್ಕದ್ದಾಗಿ ಆತನನ್ನು ಕೃತಕೃತ್ಯನನ್ನಾಗಿ ಮಾಡತಕ್ಕದ್ದು; ಹೀಗಿದ್ದರೂ ಅದಕ್ಕೆ ಬೇಕಾದ ಐದು ಅಂಗಗಳೆಲ್ಲಾ ಈತನಿಗೆ ಉಂಟಾಗತಕ್ಕದ್ದು ಕಷ್ಟವು; ಅವುಗಳಲ್ಲಿ ಮಹಾ ವಿಶ್ವಾಸವೂ, ಆಕಿಂಚನ್ಯ ಮೊದಲಾದವುಗಳ ಉತ್ಪತ್ತಿಯು ದೈವ ಕಟಾಕ್ಷವಿಲ್ಲದೆ ಉತ್ಪನ್ನವಾಗಲಾರವು: ಆದುದರಿಂದ **ಪ್ರಪತ್ತು ಮನಲಂ** ಎಂದು ಹೇಳಲ್ಪಟ್ಟಿತು. ಒಂದು ಮೂಟೆ ಎಳ್ಳನ್ನು ಹೊರುವುದೇನೋ ಕಷ್ಟವು. ಅದನ್ನು ಎಣ್ಣೆಮಾಡಿ ತೆಗೆದುಕೊಂಡು ಹೋಗುವುದೇನೋ ಸುಲಭವು. ಆಗಲಿ ಎಣ್ಣೆ ಮಾಡುವುದು ಹೇಗೆ ಕಷ್ಟವೋ ಹಾಗೆಯೇ ಈ ಪ್ರಪದನವು; ಆದುದರಿಂದ, **ಅಹಂ**-ಆಕಿಂಚನನಾಗಿಯೂ, ಅನನ್ಯಗತಿಯಾಗಿರುವ ನಾನು **ದುಃಖಾಕುಲಃ**-ದುಃಖದಿಂದ ವ್ಯಾಕುಲಚಿತ್ತನಾಗಿ, **ಸೀದಾಮಿ**-ಕೃಶನಾಗಿರುತ್ತೇನೆ. ದುಃಖವುಯಾವುದು? ಈ ಹೇಯಶರೀರವು ಬಿಟ್ಟು ಹೋಗುವ ಬಗೆ ಹೇಗೆ? ಪುನಃ ಪುನಃ ಸಂಸಾರದಲ್ಲಿ ಬಿದ್ದು ನರಳುವದು ತಪ್ಪಿಹೋಗುವದು ಸಾಧ್ಯವೇ? ಸೃಷ್ಟಿ ಮೊದಲು ಇದುವರೆಗೂ ಎಣಿಸುವದಕ್ಕೆ ಕೂಡ ಸಾಧ್ಯವಿಲ್ಲದಷ್ಟು ಇರುವ ಪಾಪ ಸಂತತಿಗಳು ಕಳೆಯುವ ಬಗೆ ಹೇಗೆ? ಎಂಬುದಾಗಿ ಶೋಕವು.

ಇಂತಹ ಶೋಕವೂ ನನಗೆ ಈಗ ನಿವೃತ್ತಿಯನ್ನು ಹೊಂದಿರುತ್ತದೆ. ಕಾರಣವೇನೆಂದರೆ? **ಏತತ್ ಜ್ಞಾನಂ**-ನಿನಗೇನೇ ಅಧೀನನಾಗಿರುವದರಿಂದ ನಿನ್ನನ್ನು ಆಶ್ರಯಿಸಿದರೇನೇ ನೀನೇ ಸಿದ್ಧೋಪಾಯನಾಗಿ ಕಾಪಾಡುವಿ ಎಂಬೀ ಪೂರ್ವಾರ್ಧದಲ್ಲಿ ಹೇಳಲ್ಪಟ್ಟ ಜ್ಞಾನವನ್ನು, **ಉಪೇಯುಷಃ**-ನಿನ್ನ ಅನುಗ್ರಹದಿಂದಲೇ ಹೊಂದಿರುವ **ಮಮ**-ಅಕಿಂಚನನಾಗಿ ಅಶಕ್ತನಾಗಿ ಅನನ್ಯಗತಿಕನಾಗಿರುವ ನನ್ನ **ಸರ್ವಾಪರಾಧಕ್ಷಯಂ**-ಸಮಸ್ತಪಾಪಗಳ ನಾಶವನ್ನೂ, **ಕರ್ತಾಸೀತಿ**-ಮಾಡುತ್ತೀ ಎಂದಾಗ, ದೃಢನಂಬಿಕೆಯುಳ್ಳವನೆಂದು **ದೃಢೋಸ್ಮಿ**-ಎಂದು ಹೇಳಿದರು. ಶರಣಾಗತಿಯನ್ನು ಮಾಡಿದ ಪ್ರಪನ್ನನಿಗೆ “**ತದಧಿಗಮ ಉತ್ತರ ಪೂರ್ವಾಘಯೋಃ ರಶ್ಲೇಷ ವಿನಾಶೌ**” (ಬ್ರ. ಸೂ. ೪.೧.೧೩.) ಎಂಬಲ್ಲಿ ಹಿಂದಿನ ಪಾಪಗಳೆಲ್ಲಾ ನಾಶವಾಗುವವೆಂದೂ, ಬುದ್ಧಿಪೂರ್ವಕಗಳಲ್ಲದ ಪ್ರಾಮಾದಿಕಗಳಾದ ಉತ್ತರಾಘಗಳು ಅಂಟುವದಿಲ್ಲವೆಂದೂ ಹೇಳಲ್ಪಟ್ಟಿವೆ. ಪುಣ್ಯಗಳೂ ಬಂಧಕಗಳಾದುದರಿಂದ ಅವೂ

ಕೂಡ ಈ ಪಾಪಶಬ್ಧದಲ್ಲೇ ಸೇರಿ ನಿವೃತ್ತಿಯನ್ನು ಹೊಂದುವುವು. ಆಶ್ಲೇಷವೆಂದರೆ ಮುಂದೆ ಭಗವನ್ನಿಗ್ರಹ ಹುಟ್ಟುವದಕ್ಕೆ ತಡೆಯಾಗಿ ಸರ್ವೇಶ್ವರನ ಕ್ಷಮೆಯು ಕಾಪಾಡೋಣವು. ನಾಶವೆಂದರೆ ಅಪರಾಧಗಳು ಭಗವನ್ನಿಗ್ರಹವನ್ನು ಉಂಟುಮಾಡಿದ್ದವು ಅವು ಈಗ ಸ್ವಾಮಿ ಕೃಪೆಯಿಂದ ತಪ್ಪಿದವು ಎಂಬರ್ಥವು. ಆ ಅಪರಾಧಗಳನ್ನು ಕುರಿತು ಸರ್ವೇಶ್ವರನು ಸ್ಮರಿಸುವದಿಲ್ಲವೆಂಬ ಭಾವವು "**ಕಥಂಚಿದುಪ ಕಾರೇಣ ಕೃತೇನೈಕೇನ ತುಷ್ಯತಿ। ನಸ್ಮರತ್ಯ ಪಕಾರಾಣಾಂ ಶತ ಮಪ್ಯಾತ್ಮವತ್ತಯಾ**" ಒಂದು ಸಲ ಮಾಡಿದ ಶರಣಾಗತಿಯು ಸರ್ವೇಶ್ವರನಿಗೆ ಯಾವ ವಿಧವಾದ ಉಪಕಾರವಾಗುವದಿಲ್ಲವು. ಆದರೂ ಮಹನೀಯನಾಗಿ **ಉದಾರಾಸ್ಸರ್ವಏವೈತೇ**" ಎಂದು ಭಾವಿಸುವವರ ಮೂಲಕ ತಾನೇ ಉದಾರನಾದ ವಾತ್ಸಲ್ಯ ಕಾರುಣ್ಯ ಸೌಲಭ್ಯಾದಿ ಗುಣಮಹೋದಧಿಯು, ಶರಣಾಗತನಾದವನೆಂದು ವಿಶೇಷವಾಗಿ ಸಂತೋಷಪಡುವನು; ತದನಂತರ ಆತನು ಮಾಡಿದ ಅಸಂಖ್ಯೇಯಂಗಳಾದ ಅಪರಾಧಗಳನ್ನೆಲ್ಲಾ ಸ್ಮರಿಸುವದೇ ಇಲ್ಲವೆಂದು ಮಹರ್ಷಿಯು ಹೇಳಿರುತ್ತಾರೆ. ಯಾವ ಯಾವ ಅಪರಾಧಗಳು ಕಳೆದುಹೋಗುವವು ಎಂಬುದನ್ನು ಶ್ರೀ ನಿಗಮಾನ್ತದೇಶಿಕರವರು ಅಪರಾಧ ಪರಿಹಾರದ ಕೊನೆಯ ಶ್ಲೋಕವಾದ "**ಪ್ರಾರಬ್ಧೇತರ ಪೂರ್ವಪಾಪ ಮಖಿಲಂ**" ಎಂಬಲ್ಲಿ ಉಪಪಾದಿಸಿರುತ್ತಾರೆ. ಅಲ್ಲಿ ಪರಾಂಬರಿಸಬಹುದು. ಸರ್ವೇಶ್ವರನ ಕ್ಷಮಾಗುಣ ಪ್ರಭಾವವು "**ತವಾಹಂ**" ನಿನ್ನವನೈಯ್ಯಾ ನಾನು, ಎಂದು ಹೇಳಿ ಆಶ್ರಯಿಸಿದವನಲ್ಲಿ ಮಹತ್ತಾದುದು. ಇವನ್ನು **ಕ್ಷಮಾ ಷೋಡಶಿ** -ಗ್ರಂಥದಲ್ಲಿ ಗ್ರಂಥಕರ್ತರು ಕೊಂಡಾಡಿರುತ್ತಾರೆ. ಸ್ವಾಮಿಯತಿವರ್ಯರು ಶರಣಾಗತಿಗದ್ಯದಲ್ಲಿ "ಮನೋವಾಕ್ಕಾಯೈರನಾದಿಕಾಲ" ವೆಂದಾರಂಭಿಸಿ **ಕ್ಷಮಸ್ವ**-ವೆಂದು ಪೂರೈಸಿ ಅಪರಾಧಗಳನ್ನೆಲ್ಲಾ ವಿಸ್ತರಿಸಿ ಹೇಳಿ, ಅವುಗಳನ್ನೆಲ್ಲಾ ಕ್ಷಮಿಸು ಎಂದು ಪ್ರಾರ್ಥಿಸಿರುತ್ತಾರೆ. "**ಮಾಮೇಕಂ ಶರಣಂ ವ್ರಜ**" ಎಂದು ಉಪದೇಶಿಸಿ ಹಾಗೆ ನೀನು ಶರಣಾಗತನಾದರೆ "**ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾಶುಚಃ**" ಎಂದು ಭರವಸೆಯನ್ನಿತ್ತ ಅಮೋಘವಾಕ್ಯವನ್ನು ಕೊಂಡಾಡುತ್ತಾರೆ. **ಸಾರಥೇಃ**-ನಾನು ಮಲಗಿದ್ದ ಕಾಲದಲ್ಲಿ ಅರ್ಜುನನು ನನ್ನ ಪಾದದಕಡೆ ಕೂತು ಶರಣಾಗತನಾಗಿ ಪ್ರಾರ್ಥಿಸಿದನೇ ಎಂಬ ಹೆಮ್ಮೆಯಿಂದ ಆತನಿಗೆ ಲೀಲಾ ಸಾರಥಿಯಾಗಿ ಬಹುದೂರ ಉಪದೇಶಿಸಿದರೂ ಆತನಿಗೆ ಶೋಕವು ತೊಲಗದೆ ಕಡೆಗೆ ಅನುಗ್ರಹಿಸಿದ, ತೇ-ಕೃಪಾಸಾಗರನಾದ ನಿನ್ನ, **ಚರಮಂ ವಾಕ್ಯಂ**-ಚರಮ ಶ್ಲೋಕವನ್ನು; ಗೀತೋಪದೇಶವೆಲ್ಲಾ **ರಾಜವಿದ್ಯಾ ರಾಜಗುಹ್ಯ**-ವಾದುದು, ಅದರಲ್ಲಿ ಚರಮಶ್ಲೋಕವಾದರೋ ಇನ್ನೂ ಮಹತ್ತಾದುದು ಎಂಬ ತಾತ್ಪರ್ಯವು, ಇಂತಹ ಸರ್ವದುಃಖೋಪಶಮನವನ್ನು ಮಾಡುವ ಮಹತ್ತಾದ ಉಪದೇಶವನ್ನು **ಸ್ಮರ್ತ**-ಸ್ಮರಿಸಿದವನಾಗಿ ಸರ್ವಪಾಪಗಳಿಂದಲೂ ಬಿಡಿಸುವಿ ಎಂಬ ಸಂಪೂರ್ಣ ನಂಬಿಕೆಯುಳ್ಳವನಾಗಿ ನಿರ್ಭರನಾಗಿ, ನಿರ್ಭಯನಾಗಿ, ಹೃಷ್ಟಚಿತ್ತನಾಗಿದ್ದೇನೆಂದು ಹೇಳಿ, ಚರಮಶ್ಲೋಕಾಭಿ

ಪ್ರಾಯವನ್ನು ನಿಗಮನ ಮಾಡಿರುತ್ತಾರೆ. ಪ್ರಾಜ್ಞರಾದ ಮಹಾನುಭಾವರು ಈ ಚರಮ ಶ್ಲೋಕಾರ್ಥವನ್ನೇ ಅನುಸಂಧಾನಮಾಡುತ್ತಾ ರಮಿಸುವರು ಎಂದು **"ಕರ್ಮಜ್ಞಾನ ಮುಪಾಸನಂಚ ಶರಣಂ ವ್ರಜ್ಯೇತಿಚ ಎಂದಾರಂಭಿಸಿ ಶರಣ್ಯ ಸಾರಥಿಗಿರಾ ಮನ್ತ್ರೇರಮನ್ತೇ ಬುಧಾಃ"** ಎಂದು ಮುಗಿಸಿ ಕೊಂಡಾಡಿರುತ್ತಾರೆ ಶ್ರೀಮದ್ರಹಸ್ಯತ್ರಯಸಾರ ನೆಯ ಪುಟಗಳನ್ನು ನೋಡಿ.

ಈ ಮೂರು ರಹಸ್ಯಗಳಲ್ಲಿ ಅನೇಕಾರ್ಥಗಳು ಪೂರ್ಣವಾಗಿರುವದರಿಂದ ಶ್ರೀ ನಿಗಮಾನ್ತ ದೇಶಿಕರವರು ವಿಸ್ತಾರವಾಗಿ ಶ್ರೀಮತ್ ರಹಸ್ಯತ್ರಯ ಸಾರವೆಂಬ ಗ್ರಂಥದಲ್ಲಿ ಮನವಣೆಯುವನ್ನು ಚನ್ನಾಗಿ ಉಪಪಾದಿಸಿರುತ್ತಾರೆ. ಅಲ್ಲಿ ಸಙ್ಗ್ರಹ ವಾಗಿಯೂ ಕೆಲವು ಕಡೆ ಈ ರಹಸ್ಯ ತ್ರಯವನ್ನು ಕೊಂಡಾಡಿರುತ್ತಾರೆ ಹೇಗೆಂದರೆ:

೧ ಶಾಖಾನಾಮುಪರಿಸ್ಥಿತೇನ ಮನುನಾಮೂಲೇನ ಲಭ್ಯಾತ್ಮಕಃ ।
ಸತ್ತಾಹೇತು ಸಕೃಜ್ಜಪೇನ ಸಕಲಂ ಕಾಲಂ ದ್ವಯೇನ ಕ್ಷಿಪನ್ ।
ವೇದೊತ್ತಂಸ ವಿಹಾರ ಸಾರಥಿಗಿರಾ ಗುಂಭೇನ ವಿಸ್ರಂಭಿತಃ ।
ಸಾರಜ್ಞೋಯದಿ ಕಶ್ಚಿದಸ್ತಿ ಭುವನೇನಾಥ ಸ್ಸಯೂಥ ಸ್ಸನಃ ।

ಈ ಮೂರು ರಹಸ್ಯಗಳ ಅರ್ಥಗಳನ್ನೆಲ್ಲಾ ಚೆನ್ನಾಗಿ ಗ್ರಹಿಸಿದ ಸಾರಜ್ಞನು ಇದ್ದಪಕ್ಷದಲ್ಲಿ ಆತನೂ ಆತನ ಶಿಷ್ಯ ಪ್ರಶಿಷ್ಯರು ನನಗೆ ನಾಥರು ಎಂದು ಹೇಳಿ ಕೊಂಡಿರುತ್ತಾರೆ. ನಾಥಶಬ್ದ ಶ್ಲೇಷೆಯಿಂದ ಈ ಮೂರು ರಹಸ್ಯಗಳ ಅರ್ಥಗಳ ನ್ನೆಲ್ಲಾ ಗ್ರಹಿಸಿದವರು ನಾಥಮುನಿಗಳು ಅವರ ಶಿಷ್ಯ ಪ್ರಶಿಷ್ಯರಾದ ಶ್ರೀ ಯಾಮುನ ಮುನಿಗಳೂ ಮತ್ತು ಶ್ರೀ ರಾಮಾನುಜ ಮುನಿಗಳೂ. ಹೀಗೆ ಈ ಮುನಿತ್ರಯರೂ ತಮಗೆ ಈ ಮೂರು ರಹಸ್ಯಗಳ ಸಾರಜ್ಞರಾದ ಪ್ರಯುಕ್ತ ತಮಗೆ ಪರಮ ಗುರುಗ ಳೆಂಬುದನ್ನು ಈ ಶ್ಲೋಕದಲ್ಲಿ ಸೂಚಿಸಿರುತ್ತಾರೆ (ರಹಸ್ಯತ್ರಯಸಾರದ ೨೪೪-೬ನೆಯ ಪುಟಗಳನ್ನು ನೋಡಿ) ಅವುಗಳನ್ನೆಲ್ಲಾ ಪ್ರತಿಯೊಬ್ಬ ಶ್ರೀವೈಷ್ಣವ ಪ್ರಪನ್ನನೂ- ಇತರ ಭಾಗವತೋತ್ತಮರೂ ಪರಿಶೀಲಿಸಿ ತಿಳಿಯತಕ್ಕವಾದುದರಿಂದ ಅವುಗಳ ನ್ನೆಲ್ಲಾ ಕನ್ನಡಕ್ಕೆ ಪರಿವರ್ತನೆ ಮಾಡಿರುತ್ತೇನೆ. ಅನಂತರ ಅವುಗಳನ್ನು ಹೆಚ್ಚು ಕಾಲಾನುಕೂಲವಿಲ್ಲದಿರುವವರ ಅವಗಾಹನೆಗಾಗಿ ಸಙ್ಗ್ರಹವಾಗಿ ಅಷ್ಟ ಶ್ಲೋಕಿಯ ವ್ಯಾಖ್ಯಾನವನ್ನೂ ಮತ್ತು ಶ್ರೀ ನಿಗಮಾನ್ತ ದೇಶಿಕರವರ ಪುತ್ರರಾದ ಶ್ರೀ ನಯನಾರಾರ್ಯರವರಿಂದ ರಚಿಸಲ್ಪಟ್ಟ ಶ್ರೀ ರಹಸ್ಯತ್ರಯ ಸಾರ ಸಾರಾರ್ಥ ಸಙ್ಗ್ರಹವನ್ನೂ ಕನ್ನಡಕ್ಕೆ ಪರಿವರ್ತನೆ ಮಾಡಿರುತ್ತೇನೆ. ಪ್ರಾಜ್ಞರು ಪರಿಶೀಲಿಸ ತಕ್ಕದ್ದು.

ರಹಸ್ಯತ್ರಯಗಳ ಸಾರಭೂತವಾದ ಅರ್ಥಗಳು- ಮೂಲಮನ್ತ್ರಾರ್ಥವು

ಅಕಾರವಾಚ್ಯನು ವಿಷ್ಣುವು. ಅವನೇ **ಜಗತ್ತಿನ ಸೃಷ್ಟಿ ಸ್ಥಿತಿ** ನಿಯಮನ ಲಯಾದಿ ಗಳಿಗೆ **ಹೇತುವು**, ತನಗೆ ಅಪೃಥಕ್ಸಿದ್ಧ **ವಿಶೇಷಣವಾಗಿರುವ ಲಕ್ಷ್ಮಿಯೊಡನೆ** ಸೇರಿಯೇ ಸಕಲ ಜಗದ್ವ್ಯಾಪಾರಗಳನ್ನು ನಡೆಸುವನು. **ಇಬ್ಬರೂ ಸೇರಿಯೇ ಶರಣಾಗತರಾದ**

ವರಿಗೆಲ್ಲಾ ಮೋಕ್ಷಪ್ರದರು, ಸರ್ವರಕ್ಷಕರು, ಜೀವಾತ್ಮರ ಸರ್ವದೇಶ ಸರ್ವಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಗಳೆಲ್ಲಾ ಸರ್ವಶೇಷಿಗಳಾದ ಲಕ್ಷ್ಮೀ ನಾರಾಯಣರಿಗೇ ವಿನಾ ಅವು ಯಾವುವೂ ತನಗಾಗಿ ಅಲ್ಲವು. ಜೀವಾತ್ಮನು ಜ್ಞಾನ ಸ್ವರೂಪನಾಗಿ ಜ್ಞಾನಗುಣಕನಾಗಿ ಗುಣಾಷ್ಟಕಗಳಿಂದ ಶೋಭಿಸುವವನು. ಅಹಂ ಎಂದು ತನ್ನನ್ನು ತಾನೇ ತಿಳಿಯುವವನು. ಪ್ರಕೃತಿಸಂಬಂಧದಿಂದ ತಿರೋಹಿತವಾದ ಜ್ಞಾನವುಳ್ಳವನು. ಇವನು ಶ್ರಿಯಃಪತಿಗೇ ಶೇಷಭೂತನೇ ವಿನಾ ಇತರರಿಗಲ್ಲವು. ತದೀಯರಾದ ಭಾಗವತಾ ಚಾರ್ಯರುಗಳಿಗೂ ಶೇಷಭೂತನು. ಈ ಅರ್ಥಗಳು ಅಕಾರದ ಲುಪ್ತಚತುರ್ಥಿಯಿಂದ ತೋರಿಬರುತ್ತವೆ. ಪ್ರಣವದಲ್ಲಿ ಮೂರು ಅಕ್ಷರಗಳಿಂದ ಸ್ವಯಂಪ್ರಕಾಶನಾದ ಅನುಕೂಲ ಸ್ವಭಾವನಾದ ಜ್ಞಾತಾವಾದ ತನಗೆ ತಾನೆ ತೋರುವ, ೨೪ ಜಡತತ್ವಗಳಿಗಿಂತಲೂ ವಿಲಕ್ಷಣವಾದ, ಜೀವಾತ್ಮನು ಶ್ರೀಯಃಪತಿಗೇನೆ ಅನನ್ಯಾರ್ಹನಿರುಪಾಧಿಕ ಶೇಷಭೂತನು ತಾನು ಲಕ್ಷ್ಮೀ ನಾರಾಯಣರ ಸ್ವತ್ತು. ಅವನೇ ರಕ್ಷಿಸಿಕೊಳ್ಳಬೇಕೇ ವಿನಾ ತನಗೆ ರಕ್ಷಿಸಿಕೊಳ್ಳುವ ಶಕ್ತಿಯಿಲ್ಲವು. ಪ್ರಣವದ ಎರಡನೆಯ ಅಕ್ಷರವು ಅವಧಾರಣವೆಂದು ಭಾವಿಸುವದರಿಂದ ಮೇಲಿನ ಅರ್ಥವು. ಮಧ್ಯಮಾಕ್ಷರವು ಲಕ್ಷ್ಮೀವಾಚಕವಾದರೆ, ಮಕಾರವಾಚ್ಯನಾದ ಜೀವನು ಲಕ್ಷ್ಮೀ ನಾರಾಯಣರಿಬ್ಬರಿಗೂ ಶೇಷಭೂತನಾಗಿ ಆತನು ಮಾಡುವ ಸಮಸ್ತ ಕೈಂಕರ್ಯಗಳೂ ಇಬ್ಬರಿಗೂ ಎಂದು ತೋರಿಬರುತ್ತದೆ.

ನಮಃ-ಎಂಬ ಎರಡನೆಯ ಪದವು ಸಖಂಡವಾಗಿ **ಮಃ-ನ** ಎಂದು ಭಾವಿಸಿದರೆ, ವಿರೋಧಿವರ್ಗಗಳನ್ನೆಲ್ಲವನ್ನೂ ಅಹಂಕಾರ ಮಮಕಾರಗಳನ್ನೂ ತ್ಯಾಗಮಾಡಿದ ಭಾವವು ದ್ಯೋತಿತವು, ಅದೂ ಅಲ್ಲದೆ ಈ ಆತ್ಮಾವನ್ನು ರಕ್ಷಿಸುವ ಶಕ್ತಿಯು ತನಗಿಲ್ಲವೆಂಬುದೂ ತೋರಿಬರುತ್ತದೆ. ಮತ್ತು ತನ್ನ ವ್ಯಾಪಾರಗಳೂ ತನಗಾಗಿ ಅಲ್ಲವು; ಅವು ತನ್ನನ್ನು ರಕ್ಷಿಸುವವನಿಗೇ ಸರಿ ಎಂದಾಗುತ್ತದೆ.

ಹೀಗೆ ಪ್ರಣವನಮಸ್ಸುಗಳಿಂದ ತಾನೂ, ತನಗೆ ಸ್ವಾಮಿಯು ದಯಪಾಲಿಸಿರುವ ಸರ್ವಪದಾರ್ಥಗಳೂ, ತನ್ನ ಸಂಬಂಧಿಗಳೂ ಸರ್ವವೂ ತನ್ನದಲ್ಲವು; ಎಲ್ಲವೂ ಸರ್ವಶೇಷಿಗಳಾದ ಲಕ್ಷ್ಮೀನಾರಾಯಣರಿಗೆ ಸೇರಿದ ವಿಭೂತಿವರ್ಗವೆಂದು ತೋರಿಬರುತ್ತದೆ- ಇದರಿಂದ ಸ್ವತಂತ್ರಾತ್ಮ ಭ್ರಮವು ಕಳೆಯುತ್ತದೆ.

ನಮಃ-ಎಂಬುದು ಅಖಂಡನಮಸ್ಸಾದರೆ, ಅಸ್ವತಂತ್ರನಾಗಿ, ಅಶಕ್ತನಾಗಿ, ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಯೋಗ್ಯತೆ ಇಲ್ಲದವನು, ಸ್ವತಂತ್ರನಾಗಿ, ಸರ್ವಶಕ್ತನಾಗಿ, ಪರಿಪೂರ್ಣನಾಗಿ, ದಯಾ ವಾತ್ಸಲ್ಯ ಸೌಲಭ್ಯ ಸೌಶೀಲ್ಯಾದಿ ಕಲ್ಯಾಣ ಗುಣಾಕರನಾಗಿರುವವನನ್ನೂ ಆಶ್ರಯಿಸುವದಕ್ಕೆ ಮುಖ್ಯೋಪಾಯವಾದ ಪ್ರಣಾಮಪೂರ್ವಕವಾದ ಪ್ರಾರ್ಥನಾ ರೂಪವಾದ ಭರನ್ಯಾಸವನ್ನು ಬೋಧಿಸುತ್ತದೆ.

ಹೀಗೆಲ್ಲಾ ಗುಣಗಳನ್ನೂ ಹೊಂದಿರುವವನು ಶ್ರೀಮನ್ನಾರಾಯಣನು ಎಂದು **ನಾರಾಯಣಾಯ** ಎಂಬ ಮೂರನೆಯ ಪದವು ತೋರಿಸುತ್ತದೆ. **ನರ** ಶಬ್ದಕ್ಕೆ

ನಾಶವಿಲ್ಲದ್ದು ಎಂಬುದೊಂದು ಅರ್ಥವು, ಆದರಿಂದ ನಿತ್ಯವಾದವುಗಳೆಲ್ಲಾ ಹೇಳಲ್ಪಟ್ಟ **ನಾರ** ವೆಂದರೆ ಅವುಗಳ ಸಮೂಹವೆಂದರ್ಥವಾಗುತ್ತದೆ. ನಿತ್ಯವಾದುವು ಯಾವು ವೆಂಬುದು ಹಿಂದೆ ಹೇಳಲ್ಪಟ್ಟಿತು. ಅಥವಾ **ಜಹ್ನುರ್ನಾರಾಯಣೋ ನರಃ** ಎಂದು ವಿಷ್ಣು ಸಹಸ್ರನಾಮದಲ್ಲಿ ಹೇಳಿರುವ ಹಾಗೆ, ನರನೆಂದರೆ ವಿಷ್ಣುವು, ಅವನಿಗೆ ಸಂಬಂಧಿಸಿದ ಚಿದಚಿತ್ತುಗಳ ಸಮೂಹವೆಲ್ಲಾ **ನಾರ** ಶಬ್ದದಿಂದ ಹೇಳಲ್ಪಟ್ಟಿತು. ಇವುಗಳನ್ನೇ ತನಗೆ ಅಯನವಾಗಿವುಳ್ಳವನು ಎಂದರೆ ಅವುಗಳನ್ನು ವ್ಯಾಪಿಸಿ, ಅವು ಗಳಿಗೆಲ್ಲಾ ಅಂತರ್ಯಾಮಿಯಾಗಿ ಸತ್ತಾದಾಯಕನು, ನಿಯಾಮಕನು, ಶೇಷತ್ವ ಜ್ಞಾನವನು, ಅನನ್ಯೋಪಾಯಾನುಷ್ಠಾನವನ್ನೂ ಅನನ್ಯಪ್ರಯೋಜನತ್ವವನ್ನೂ ಹೊಂದಿದ ಮಹಾಪುರುಷನು ಇಲ್ಲಿಯೇ ಮುಕ್ತತುಲ್ಯನೆಂಬುವು ಉಪನಿಷತ್ತು ಗಳಲ್ಲೂ ಆಳ್ವಾರಾಚಾರ್ಯರ ಮತ್ತು ಮಹರ್ಷಿಗಳ ದಿವ್ಯ ಸೂಕ್ತಿಗಳಲ್ಲೂ ವ್ಯಕ್ತವು.

ದ್ವಯಮನ್ತ್ರದ ಸಾರಭೂತಾರ್ಥಗಳು–ಮೂಲಮಂತ್ರದಿಂದ ಯಾವಾಗ ತಾನು ಶ್ರಿಯಃಪತಿಗೆ ಅಧೀನನೆಂದೂ, ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಅಶಕ್ತ ನೆಂದೂ, ಸರ್ವಶಕ್ತನು, ಸರ್ವರಕ್ಷಕನು, ಪರಿಪೂರ್ಣಕಾಮನು, ದಯಾವಾತ್ಸಲ್ಯಾದಿ ಗಳಿಂದ ತನಗೆ ಪರಮಹಿತಚಿಂತಕನು, ಆದುದರಿಂದ ಆತನನ್ನು ಆಶ್ರಯಿಸಿದರೇನೇ ತನಗೆ ಅನಿಷ್ಟ ನಿವೃತ್ತಿಯೂ ಇಷ್ಟಪ್ರಾಪ್ತಿಯೂ ಎಂಬುದು ಬೋಧಿತವೆಂಬ ಜ್ಞಾನ ಉಂಟಾಯಿತೋ ಆಗ ತಾನು ಆಚಾರ್ಯರ ಮೂಲಕ ಪ್ರಪದನಾನುಷ್ಠಾನ (ಭರನ್ಯಾಸ) ವನ್ನು ಮಾಡತಕ್ಕದ್ದೆಂಬುದು ಏರ್ಪಟ್ಟಿತು. ಆಗ ಆಚಾರ್ಯರು ಈತನಿಗೆ ಈ ಮಂತ್ರವನ್ನು ಉಪದೇಶಿಸಿ ಅವರು ಹೇಳಿಕೊಟ್ಟಿದುದನ್ನು ತಾನು ಪಠಿಸಿ ಭರನ್ಯಾಸಾನುಷ್ಠಾನ ಪ್ರಕಾರವನ್ನು ತಿಳಿಸುವ ಮನ್ತ್ರವು. ಇದರಲ್ಲಿ ಉಪಾಯವೂ ಶ್ರಿಯಃಪತಿಯು, ಉಪೇಯವೂ ಶ್ರಿಯಃಪತಿಯೂ ಎಂಬುದಾಗಿ ಪೂರ್ವೋತ್ತರ ವೆಂಬ ಎರಡು ಖಂಡಗಳಿರುವದರಿಂದ ಈ ಮನ್ತ್ರಕ್ಕೆ ದ್ವಯವೆಂಬ ಹೆಸರು.

ಶ್ರೀಮನ್ನಾರಯಣ ಚರಣೌ ಎಂಬ ಪ್ರಥಮಪದದಲ್ಲಿ ಶ್ರೀಮಚ್ಛಬ್ದವು ಮತುಪ್ ಪ್ರತ್ಯಯಯುಕ್ತವಾಗಿರುವದರಿಂದ, ಲಕ್ಷ್ಮಿಯು ನಾರಾಯಣನಿಗೆ ಅಪೃಥಕ್ಸಿದ್ಧವಿಶೇ ಷಣವಾಗಿ ನಿತ್ಯಾನಪಾಯಿನಿಯಾಗಿ ಸಹಧರ್ಮಚಾರಿಣಿಯಾಗಿರುವದರಿಂದ ಸ್ವಾಮಿ ನಾರಾಯಣನು ಸಿದ್ಧೋಪಾಯನಾಗಿರುವಾಗಲೂ, ಉಪೇಯನಾಗಿರುವಾಗಲೂ, ಒಟ್ಟಿಗೆ ಇರುವಳೆಂದೂ ಪತಿಯೊಂದಿಗೆ ರಮಿಸುವಳೆಂಬ ಭಾವವು ತೋರಿಬರುತ್ತದೆ. ಆಕೆಯು ಬಹಳ ಅನುಗ್ರಹಮಯಳಾಗಿ ಆಶ್ರಿತರ ವಿಷಯದಲ್ಲಿ ಪರಮ ಕಾರುಣಿಕ ಳಾದುದರಿಂದ, ಒಂದುವೇಳೆ ಪತಿಯು ಹಿತಭಾವದಿಂದಲೇ ಅಲ್ಪ ಶಿಕ್ಷೆಯನ್ನು ಕೊಡು ವದು ಉಚಿತವೆಂದು ಭಾವಿಸಿದರೂ, ಆಶ್ರಿತ ವಾತ್ಸಲ್ಯಕ್ಕೆ ವಶಳಾಗಿ ತನ್ನ ವಾಲ್ಲಭ್ಯಾತಿ ಶಯದಿಂದ ಪುರುಷಕಾರ ರೂಪದಲ್ಲೂ, ತನ್ನ ಆಶ್ರಿತನಿಗೆ ಅನುಗ್ರಹವನ್ನು ಪ್ರಾರ್ಥಿಸು ವಳೆಂಬುದು ತೋರಿಬರುತ್ತದೆ. ನಾಲ್ಕು ಧಾತುಗಳಿಂದ ಆರು ವಿಧವಾಗಿ ತನ್ನ ಆಶ್ರಿತರಿಗೆ ಪರಮಹಿತವನ್ನುಂಟುಮಾಡುವವಳೆಂಬುದು ತೋರಿಬರುತ್ತದೆ. ಹೇಗೆಂದರೆ

(೧) ಆಶ್ರಿತರ ದೋಷಗಳನ್ನು **ನಿವಾರಿಸುವವಳು.** (೨) ಚೇತನರಿಂದ **ಸೇವಿಸಲ್ಪಡುವವಳು.** (೩) ವಾತ್ಸಲ್ಯಾತಿಶಯದಿಂದ ಪತಿಯನ್ನು **ಆಶ್ರಯಿಸಿ** ಪುರುಷಕಾರ ರೂಪವಲ್ಲಿ ರಕ್ಷಿಸುವವಳು. (೪) ಆಶ್ರಿತರ ಒಳ್ಳೇ ಗುಣಗಳನ್ನು **ಅಭಿವೃದ್ಧಿ ಹೊಂದಿಸುವವಳು.** (೫) ಆಶ್ರಿತರಿಗೆ ವಿವೇಕವನ್ನು **ಬೋಧಿಸುವವಳು.** (೬) ಅವರ ಪ್ರಾರ್ಥನೆಯನ್ನು ಗಮನಿಸಿ **ಕೇಳುವವಳು.** ಹೀಗೆ ಅರ್ಥಗಳುಂಟಾಗುವುದರಿಂದ, ಪುರುಷಕಾರತ್ವದೊಂದಿಗೆ ತನ್ನ ಪತಿಯೊಂದಿಗೆ ಉಪಾಯಭೂತಳೆಂಬುದು ಸಿದ್ಧವು. ರಾಕ್ಷಸ ನಿರ್ಮೂಲನಾದಿಗಳಿಗೆ ಪತಿಯೊಂದಿಗೆ ಸೀತೆಯೂ ಉಪಾಯಭೂತಳೆಂಬುವದನ್ನು ಕಾಣಬಹುದು. "**ಅಸಂದೇಶಾತ್ತು ರಾಮಸ್ಯ**" ಎಂಬ ಶ್ಲೋಕವು ಅನುಸಂಧೇಯವು. ಶಿಶುಪಾಲಾದಿಗಳ ನಾಶಕ್ಕೂ ರುಕ್ಮಿಣಿಯು ಹಾಗೆಯೇ ಉಪಾಯಭೂತಳು. ತ್ರಿಜಟೆ ಮೊದಲಾದ ರಾಕ್ಷಸೀಯರಿಗೂ "**ಭವೇಯಂ ಶರಣಂಹಿವಃ**" ಎಂದು ಹೇಳಿ, ಹಾಗೆಯೇ ಆಂಜನೇಯನ ಕೋಪವನ್ನು ಆರಿಸಿ, ಅವರನ್ನು ರಕ್ಷಿಸಿರುತ್ತಾಳೆ.

ನಾರಾಯಣ ಶಬ್ದದಿಂದ ತೋರುವ ಅರ್ಥಗಳು ಹಿಂದೆಯೇ ಮೂಲ ಮಂತ್ರದಲ್ಲಿ ಉಪಪಾದಿತವು. **ಶ್ರೀಮನ್ನಾರಾಯಣ ಚರಣೌ** ಎಂಬಲ್ಲಿರುವ ಚರಣಶಬ್ದವು ತನ್ನನ್ನು ತಾನೇ ಶಕ್ಷಿಸಿಕೊಳ್ಳುವ ಅಶಕ್ತನು ಸರ್ವಶಕ್ತನ ಪಾದಗಳನ್ನು ಹಿಡಿಯುವದೇ ಸರ್ವೋತ್ಕೃಷ್ಟ ಉಪಾಯವೆಂಬುದನ್ನು ಸಾರುತ್ತವೆ. ಶ್ರುತಿಯಲ್ಲೂ ಹಾಗೆಯೇ ಪಾದಕಮಲಗಳೇ "ವಿಷ್ಣೋಃ ಪದೇ ಮಧ್ವ ಉತ್ಸಃ" ಎಂದು ಶ್ಲಾಘಿಸಲ್ಪಟ್ಟವೆ. ಅಂತವನನ್ನು ಎಂದಿಗೂ ಸರ್ವೇಶ್ವರನು ಕೈಬಿಡುವುದಿಲ್ಲವೆಂದು "**ದೋಷೋಯದ್ಯಪಿತಸ್ಯಸ್ಯಾತ್**", "**ನತ್ಯಜೇಯಂ ಕಥಂಚನ**" ಎಂದು ಹೇಳಿಕೊಂಡಿರುತ್ತಾನೆ. **ನಸ್ಮರತ್ಯಪಕಾರಾಣಾಂ ಶತಮಪ್ಯಾತ್ಮವತ್ತಯಾ** ಎಂದು ಆತನ ಅನಾದಿಯಾಗಿ ಬಂದಿರುವ ಅಪರಾಧ ಸಂತತಿಗಳಿಂದ ಕ್ಷಮಿಸಿ ರಕ್ಷಿಸುವನೆಂದು ಹೇಳಲ್ಪಟ್ಟಿದೆ. ಈ ಚರಣಶಬ್ದವು ಉಪಲಕ್ಷಣವಾಗಿ ಆತನ ಕಮನೀಯ ದಿವ್ಯ ಮಂಗಳ ವಿಗ್ರಹಕ್ಕೂ ಉಪಲಕ್ಷಣವು. ಅದಕ್ಕೆ ಮಾಹಾತ್ಮ್ಯೆಯನ್ನು ಶ್ರಿ ದೇಶಿಕರವರು "ಶಿಲಾದೇಃ" ಎಂಬ ಶ್ಲೋಕವಲ್ಲಿ ಉಪಪಾದಿಸಿರುತ್ತಾರೆ. ಶ್ರೀಮದ್ರಹಸ್ಯತ್ರಯಸಾರದ ೨೭೮-೯೬ನೇ ಪುಟಗಳನ್ನು ನೋಡಿ—ಹೀಗೆ ಶ್ರೀಮನ್ನಾರಾಯಣ ಚರಣೌ ಎಂಬ ಪ್ರಯೋಗದಿಂದ ಆಶ್ರಯೋಚಿತ ಸಮಸ್ತ ಕಲ್ಯಾಣಗುಣಾಕರನೆಂದು ಹೇಳುವ ನಾರಾಯಣ ಶಬ್ದವಾಚ್ಯನಾಗಿ ಪತಿಯ ಹಾಗೆಯೇ ಕಲ್ಯಾಣ ಗುಣಾಕರಳಾಗಿ ಅನುಗ್ರಹಮಯಳಾಗಿರುವಳ ನಿತ್ಯಸಬಂಧದಿಂದ ಉತ್ತೇಜನವನ್ನು ಹೊಂದಿದ ಅನುಗ್ರಹದಿಂದ ಆತನ ಪಾದಕಮಲಗಳು ಸಿದ್ಧೋಪಾಯವಾಗಿ ಆಶ್ರಿತರಂ ಕಾಪಾಡುತ್ತವೆ ಎಂಬುದು ತೋರಿಬರುತ್ತದೆ.

ನಮ್ಮಾಳ್ವಾರ್ರವರೂ "**ಅರಿನಕ್ಕು ನ ಪಾದಮೇ ಶರಣಾಗ ತಂದೊಳಿಂದಾಯ್**" ಎಂದು ಈ ದ್ವಯಪೂರ್ವಖಂಡಾರ್ಥವನ್ನೇ ಉಪಪಾದಿಸಿರುತ್ತಾರೆ.

ಆರ್ ಎಂದರೆ ಉಪಾಯವು. ಅದು ನಿನ್ನ ಪಾದಕಮಲಗಳನ್ನವಲಂಬಿಸುವದೇ ಉಪಾಯವೆಂದು ತಿಳಿಸಿರುತ್ತಾರೆ. ಯಾವುದಕ್ಕೆ ಉಪಾಯವೆಂದರೆ ಅನಿಷ್ಟ ನಿವೃತ್ತಿಗೂ ಇಷ್ಟಪ್ರಾಪ್ತಿಗೂ "**ತಮೇವ ಶರಣಾಗಚ್ಛ ಸರ್ವಭಾವೇನ ಭಾರತ। ತತ್ಪ್ರಸಾದಾತ್ಪರಾಂ ಶಾನ್ತಿಂ ಸ್ಥಾನಂ ಪ್ರಾಪ್ಸ್ಯಸಿಶಾಶ್ವತಮ್**" ಎಂಬುದು ಅನುಸಂಧೇಯವು.

ಶರಣಂ—ಇದಕ್ಕೆ ಉಪಾಯವೆಂಬರ್ಥವು. ಶ್ರಿಯಃಪತಿಯ ಪಾದಕಮಲಗಳನ್ನೇ ಉಪಾಯವಾಗಿ ಪ್ರಪದ್ಯೇ—ಆಶ್ರಯಿಸಿರುತ್ತೇನೆ ಎಂಬರ್ಥವು. ರಕ್ಷಕನೆಂಬ ಅರ್ಥಗಳಿಗಿಂತ ಉಪಾಯವೆಂದರ್ಥಮಾಡುವದರಲ್ಲಿ ಸ್ವಾರಸ್ಯ ಹೆಚ್ಚು. ಅಹಿರ್ಬುಧ್ನ್ಯ ಸಂಹಿತಾವಾಕ್ಯಕ್ಕನುಸಾರವಾಗುತ್ತದೆ ಹೇಗೆಂದರೆ — "**ತ್ವಮೇವೋಪಾಯ ಭೂತೋ ಮೇ ಭವೇತಿ ಪ್ರಾರ್ಥನಾ ಮತಿಃ**" ಎಂದು ಅಲ್ಲಿರುತ್ತದೆ. ಅದೇ ಅಲ್ಲದೆ ರಕ್ಷಕನೆಂದರೆ ಎಲ್ಲರಿಗೂ ಮುಕ್ತಿಯನ್ನು ಕೊಡುವದರ ಮೂಲಕ ಶ್ರಿಯಃಪತಿಗೆ ವೈಷಮ್ಯವನ್ನು ಆರೋಪಿಸಿದಂತಾಗುತ್ತದೆ ರಕ್ಷಣೆಗೆ ವ್ಯಾಜವು ಆವಶ್ಯಕವು. ಅದೇ ಶರಣಾಗತ್ಯನುಷ್ಠಾನವು.

ಪ್ರಪದ್ಯೇ ಎಂಬುದರಿಂದ ಅಚಾರ್ಯರ ಮೂಲಕ ಶರಣಾಗತಿಯನ್ನು ಅನುಷ್ಠಿಸಿರುತ್ತೇನೆ ಎಂಬರ್ಥವು. ಪ್ರ ಎಂಬ ಉಪಸರ್ಗದಲ್ಲಿ ಈ ಭರನ್ಯಾಸದ ಮಾಹಾತ್ಮ್ಯೆಯಿಂದ ಮಹಾ ವಿಶ್ವಾಸ ರೂಪಾಂಗವು ತೋರಿಬರುತ್ತದೆ. ಅದಲ್ಲದೆ ಇನ್ನು ಬೇರೆ ಉಪಾಯವೇ ತನಗೆ ತಿಳಿಯದು ಎಂಬ ಭಾವವೂ ದ್ಯೋತಕವು.

ಉತ್ತರ ಖಂಡದಲ್ಲಿ ಹೇಳಿರುವುದು ಈ ಪ್ರಪದನಾನುಷ್ಠಾನದಿಂದ ಉಂಟಾಗುವ ಫಲವು. ಅವು ಯಾವುದೆಂದರೆ ಪರಿಪೂರ್ಣ ಬ್ರಹ್ಮಾನುಭವವೂ, ಕೈಂಕರ್ಯವೂ ಇಲ್ಲಿ ಮೊದಲನೆಯ ಪದವಾದ **ಶ್ರೀಮತೇ** ಎಂಬುದಕ್ಕೆ ಪ್ರಥಮಖಂಡದ ಶ್ರೀಮಚ್ಛಬ್ದಕ್ಕೆ ಯಾವ ಅರ್ಥಗಳೋ ಆ ಅರ್ಥಗಳೇ ಇಲ್ಲಿಯೂ ಬೋಧಿತವು. ಇಲ್ಲಿಯೂ ಮತುಪ್ ಪ್ರತ್ಯಯವುಳ್ಳದ್ದಾಗಿ ನಾರಾಯಣಾಯ ಎಂಬ ಎರಡನೆಯ ಪದಕ್ಕೆ ವಿಶೇಷಣವಾಗಿ ಹೇಳಲ್ಪಟ್ಟಿರುವುದರಿಂದ ಲಕ್ಷ್ಮಿಯು ಅಪೃಥಕ್ಸಿದ್ಧ ವಿಶೇಷಣವಾಗಿ ಪತಿಪತ್ನಿಯರಿಬ್ಬರಿಗೂ ಪ್ರತಿಯೊಂದು ಪ್ರವೃತ್ತಿಯಲ್ಲೂ ಅನ್ವಯ ಉಂಟೆಂಬುದು ಬೋಧಿತವು. ಜೀವಾತ್ಮನು ಮುಕ್ತದೆಶೆಯಲ್ಲಿ ಮಾಡುವ ಸರ್ವವಿಧ ಕೈಂಕರ್ಯಗಳೂ ನಾರಾಯಣನಿಗೆ ಮಾತ್ರವೇ ಅಲ್ಲದೆ ಲಕ್ಷ್ಮಿಗೂ ಸಹ ಎಂದು ಇಲ್ಲಿ ಶಿಕ್ಷಿಸಲ್ಪಟ್ಟಿತು.

ಎರಡನೆಯ ಪದವಾದ **ನಾರಾಯಣಾಯ** ಎಂಬುದರಿಂದ ಪರಮ ಶ್ರೇಯಸ್ಸನ್ನಿತ್ತು "**ಆನಂದಯಾತಿ**" ಎಂದು ಶ್ರುತಿಯಲ್ಲಿ ಹೇಳಿರುವ ಪರಿಪೂರ್ಣ ಬ್ರಹ್ಮಾನುಭವಕ್ಕೆ ಯೋಗ್ಯವಾದ ಉಭಯ ವಿಭೂತಿನಾಯಕತ್ವವೂ, ಕಲ್ಯಾಣ ಗುಣಾಕರತ್ವವೂ ತೋರಿ, ಉಭಯ ವಿಭೂತಿಯೂ ತನಗೆ ಅನುಕೂಲವಾಗಿ ತೋರೋಣವೂ, ಕರ್ಮೋಪಾಧಿಯು ಕಳೆದುಹೋಗುವುದರ ಮೂಲಕ ದುಃಖ ಗಂಧವೇ ಅನಂತರ ಇಲ್ಲದಿರುವ ಸ್ಥಿತಿಯೂ, ತೋರಿಬರುತ್ತವೆ. ಆದುದರಿಂದ

ಮೋಕ್ಷದೆಶೆಯಲ್ಲಿ ಮುಖ್ಯವಾದ ಫಲಗಳು (೧) ಪರಿಪೂರ್ಣ ಬ್ರಹ್ಮಾನುಭವವು. (೨) ತನ್ನ ಸ್ವರೂಪಕ್ಕನುಗುಣವಾದುದು, **ಕಿಂಕರತ್ವಾಧಿರಾಜ್ಯವು** ಎಂದರೆ ಲಕ್ಷ್ಮೀ ನಾರಾಯಣರಿಬ್ಬರಿಗೂ **ಮಾಡುವ** ಸರ್ವದೇಶ ಸರ್ವ **ಕಾ**ಲೋಚಿತ ಸಮಸ್ತ ಕೈಂಕರ್ಯಗಳೂ. ಈ **ಅಭಿಪ್ರಾಯವು ಈ** ಶಬ್ದದ ಚತುರ್ಥಿಯಿಂದ ತೋರಿಬರುತ್ತದೆ. ಆದುದರಿಂದ **ನಾರಾಯಣಾಯ** ಎಂಬುದರಿಂದ ಎರಡೂ ಉಪದಿಷ್ಟವು. ಪರಿಪೂರ್ಣ ಬ್ರಹ್ಮಾನುಭವದಿಂದುಂಟಾಗುವ ನಿರತಿಶಯಾನಂದವಾದರೆ, ಶೇಷಭೂತನಿಗೆ ಸತ್ತಾದಾಯಕವಾದ ಕೈಂಕರ್ಯವೂ, ಇವೆರಡರ ಪ್ರಾಪ್ತಿಯು. ಉತ್ತರಖಂಡದ ಮೂರನೆಯ ಪದವಾದ **ನಮಃ** ಎಂಬ ಪದವನ್ನು ಸಖಂಡವಾಗಿ ಭಾವಿಸಿದರೆ ಈ ಶರಣಾಗತಿಯಿಂದುಂಟಾಗುವ ಫಲವು ಯಾವುದೂ ತನಗಿಲ್ಲವೆಂದೂ, ಈ ಫಲದೆಶೆಯಲ್ಲಿ ತನಗೆ ಸ್ವಾಧೀನ ಕರ್ತೃತ್ವ ಸ್ವಾರ್ಥ ಕರ್ತೃತ್ವ ಸ್ವಾಧೀನ ಭೋಕ್ತೃತ್ವ ಸ್ವಾರ್ಥ ಭೋಕ್ತೃತ್ವ ರೂಪವಾದ ವಿರೋಧ ಚತುಷ್ಟಯಗಳಲ್ಲೂ ಅನ್ವಯವಿಲ್ಲವೆಂದು ಏರ್ಪಡುತ್ತದೆ, ಮುಕ್ತದೆಶೆಯಲ್ಲಿ ಇಂತಹ ನಿರಪರಾಧ ಕೈಂಕರ್ಯ ಪ್ರಾಪ್ತಿಯುಂಟಾಗಲಿ ಎಂಬ ತಾತ್ಪರ್ಯವು. ಈ ದ್ವಯದಲ್ಲಿ ತೋರುವ ವಾಕ್ಯಾರ್ಥವೇನೆಂದರೆ? ಪೂರ್ವಖಂಡವನ್ನು ಒಂದು ವಾಕ್ಯವನ್ನಾಗಿಯೂ ಉತ್ತರಖಂಡವನ್ನು ಎರಡು ವಾಕ್ಯಗಳನ್ನಾಗಿಯೂ ಭಾವಿಸಬಹುದು. ಅನುಗ್ರಹಮಯಳಾಗಿ ಆಶ್ರಿತರಲ್ಲಿ ಪರಮವಾತ್ಸಲ್ಯಯುಕ್ತಳಾಗಿರುವ ಶ್ರೀ ಮಹಾಲಕ್ಷ್ಮಿಯಿಂದ ಕೂಡಿದ ಕಲ್ಯಾಣ ಗುಣಪರಿಪೂರ್ಣನಾಗಿ ಆಶ್ರಯೋಚಿತ ದಯಾ, ಕಾರುಣ್ಯ ವಾತ್ಸಲ್ಯ ಸೌಲಭ್ಯ ಸೌಶೀಲ್ಯಾದಿ ಗುಣಯುಕ್ತನಾದ ನಾರಾಯಣನ ಚರಣಾರವಿಂದಗಳನ್ನು ಉಪಾಯವಾಗಿ ಆಶ್ರಯಿಸಿರುತ್ತೇನೆ. ಇದು ಪೂರ್ವಖಂಡಾರ್ಥವು. ಉತ್ತರಖಂಡಾರ್ಥವೇನೆಂದರೆ, ಪತಿಗೆ ಸಮಾನವಾದ ಸ್ವರೂಪ ರೂಪಗುಣ ವಿಭವೈಶ್ವರ್ಯಾದಿಗಳಿಂದ ಶೋಭಿಸುವ ಲಕ್ಷ್ಮಿಯಿಂದ ಸದಾ ಸೇರಿರುವ ದಿವ್ಯ ಮಙ್ಗಳ ವಿಗ್ರಹಯುಕ್ತನಾದ ನಾರಾಯಣನನ್ನು ಆನಂದದಿಂದ ಅನುಭವಿಸುತ್ತಾ ಅವರಿಬ್ಬರಿಗೂ ಸರ್ವದೇಶ ಸರ್ವ ಕಾಲ ಸರ್ವಾವಸ್ಥೋಚಿತ ಸರ್ವವಿಧ ಕೈಂಕರ್ಯಗಳನ್ನು ಮಾಡುವ ಭಾಗ್ಯವು ಉಂಟಾಗಲಿ. ಇವು ಯಾವವು ನನ್ನ ಸ್ವಪ್ರಯೋಜನಕ್ಕಾಗಿ ಅಲ್ಲವು, ಹೀಗೆ ಮೂರರ್ಥಗಳು.

ಇವು ಮೂರನ್ನೂ ಒಟ್ಟಿಗೆ **ಸೇರಿಸಿ** ಒಂದೇ ವಾಕ್ಯವನ್ನಾಗಿ ಭಾವಿಸಬಹುದು. **ಹೇಗೆಂದರೆ, ಉಪಾಯಭೂತಳಾಗಿಯೂ,** ತನ್ನ ವಾಲ್ಲಭ್ಯಾತಿಶಯದಿಂದ ಅನುಗ್ರಹ ಮಯಳಾಗಿ **ಪುರುಷಕಾರ ಭೂತಳಾಗಿಯೂ** ನಿತ್ಯಾನಪಾಯಿಯಾಗಿಯೂ ತನ್ನ **ಪತಿಗೆ ಅನುರೂಪವಾದ ಸ್ವರೂಪ ರೂಪಗುಣ ವಿಭೂತ್ಯೈಶ್ವರ್ಯಯುಕ್ತಳಾಗಿರುವ ಲಕ್ಷ್ಮಿಯೊಂದಿಗೆ ಸೇರಿರುವ ನಾರಾಯಣನು ಇಂತಹ ಲೋಕದಂಪತಿಗಳ ಚರಣಾರ ವಿಂದದಲ್ಲಿ ಸದಾ ಸರ್ವದೇಶ ಸರ್ವಕಾಲ** ಸರ್ವಾವಸ್ಥೋಚಿತಗಳಾದ ಸರ್ವ ಕೈಂಕರ್ಯ **ಗಳನ್ನೂ ಮಾಡುವುದಕ್ಕಾಗಿ ಅದಕ್ಕೆ ವಿರೋಧ** ರೂಪಭಾವನೆಗಳಾದ ಸ್ವತಂತ್ರ

ಕರ್ತೃತ್ವ ಭೋಕ್ತೃತ್ವಗಳು ಕಳೆದುಹೋಗಿ ನನ್ನನ್ನು ರಕ್ಷಿಸುವ ಸರ್ವಭರವನ್ನೂ ನಿನ್ನಲ್ಲಿ ಸಮರ್ಪಿಸಿ ನಿರ್ಭರನಾಗಿ ನಿರ್ಭಯನಾಗಿ ಹೃಷ್ಟಮನಸ್ಕನಾಗಿರುವದಕ್ಕಾಗಿ ಈ ಶರಣಾಗತಿಯನ್ನನುಷ್ಠಿಸಿರುತ್ತೇನೆ.

ಚರಮಶ್ಲೋಕದ ಸಾರಭೂತಾರ್ಥವು

ಮೂಲಮನ್ತ್ರದಲ್ಲಿ ತನ್ನ ಸ್ವಾಮಿಗೂ ತನಗೂ ಇರುವ ಶೇಷಿಶೇಷ ಸಂಬಂಧವು ನಿರುಪಾಧಿಕವಾದುದ್ದೆಂದೂ, ಅಂತಹ ಶೇಷಿಗೆ ತಾನು ಎಲ್ಲಾ ವಿಧದಲ್ಲೂ ಅಧೀನವೆಂದೂ, ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಶಕ್ತನೆಂದೂ ಉಪದಿಷ್ಟವು. ದ್ವಯದಲ್ಲಿ ಆ ಕಾರಣದಿಂದ ಈ ಆತ್ಮನಾದ ಅವನ ವಸ್ತುವನ್ನು ಅವನೇ ರಕ್ಷಿಸಿಕೊಳ್ಳತಕ್ಕದ್ದೂ, ತನಗೆ ಶಕ್ತಿಯಿಲ್ಲನೆಂದು ಹೇಳಿ ಆತನ ಚರಣಾರವಿಂದವಲ್ಲೇ ಇಟ್ಟು ಸಮರ್ಪಿಸಿಬಿಟ್ಟು ತಾನು ನಿಶ್ಚಿಂತೆಯಿಂದ ಇರಬಹುದೆಂಬುದು ಉಪಾಯವು ಎಂದರಿತು ಲಕ್ಷ್ಮೀನಾರಾಯಣರಿಬ್ಬರಲ್ಲೂ ಸಮರ್ಪಿಸತಕ್ಕದ್ದೆಂದೂ ಅದರಿಂದ ಪರಿಪೂರ್ಣಬ್ರಹ್ಮಾನುಭವವೂ ಆತನಿಗೆ ಮಾಡುವ ಸರ್ವವಿಧ ಕೈಂಕರ್ಯವೂ ಲಭಿಸುತ್ತದೆಂದು ಉಪದೇಶಿಸಲ್ಪಟ್ಟಿತು. ಈಗ ಈ ಚರಮಶ್ಲೋಕಾಧಿಕಾರದಲ್ಲಾದರೋ ಅಂತಹ ಭರನ್ಯಾಸಕ್ಕೆ ಅಧಿಕಾರಿ ಯಾರು? ಆತನಿಗೆ ವಿರೋಧಿವರ್ಗದ ನಿವೃತ್ತಿಯು ಉಂಟೇ? ಎಂಬುದು ಚರ್ಚಿಸಲ್ಪಟ್ಟು ಗುರೂಪಾಯವಾದ ಕರ್ಮಯೋಗ ಜ್ಞಾನಯೋಗಗಳಿಂದ ಸಹಕೃತವಾದ ಭಕ್ತಿಯೋಗಕ್ಕೆ ತಾನು ಅಶಕ್ತನೇ ಎಂದು ಆಕಿಂಚನ್ಯದಿಂದ ಶೋಕಿಸಿರುವವನಿಗೆ ಶ್ರೀಕೃಷ್ಣ ಭಗವಾನ್ ರವರು ಕಾರುಣ್ಯ ವಾತ್ಸಲ್ಯಾತಿರೇಕದಿಂದ ಪ್ರೇರಿತರಾಗಿ ನನ್ನಲ್ಲಿ ಮಹಾವಿಶ್ವಾಸವನ್ನಿಟ್ಟು ಶರಣಾಗತನಾಗು. ನಿನ್ನನ್ನು ಸಮಸ್ತ ವಿರೋಧಿವರ್ಗದಿಂದಲೂ ಬಿಡಿಸಿ ರಕ್ಷಿಸುವೆನು. ಶೋಕಿಸಬೇಡವೆಂದು ಸಮಾಧಾನ ಮಾಡುತ್ತಾರೆ. ಈ ಚರಮಶ್ಲೋಕದಲ್ಲಿ ೧೨ ಪದಗಳು.

ಸರ್ವಧರ್ಮಾನ್ ಪರಿತ್ಯಜ್ಯ—(೧) ಮೋಕ್ಷೋಪಾಯವಾಗಿ ೩೨ ಬ್ರಹ್ಮವಿದ್ಯೆಗಳುಂಟು. ಇವುಗಳಲ್ಲೆಲ್ಲಾ ಪರಮಪುರುಷನಾದ ಶ್ರಿಯಃಪತಿಯ ಉಪಾಸನವು ಹೇಳಲ್ಪಟ್ಟಿವೆ ಮೋಕ್ಷಕ್ಕಾಗಿ ಇವುಗಳಲ್ಲಿ ಯಾವುದಾದರೂ ಒಂದು ವಿಧವಾದ ಉಪಾಸನವನ್ನು ಅವಲಂಬಿಸತಕ್ಕದ್ದಾಗಿರುತ್ತದೆ. ಇದಕ್ಕೆ ಕರ್ಮಯೋಗಾದಿಗಳು ಅಂಗವು. ಅವುಗಳನ್ನೆಲ್ಲಾ ಅನುಷ್ಠಿಸುವದು ತುಂಬಾ ಕಷ್ಟವು. ಹೀಗೆ ಅಶಕ್ತತೆಯಿಂದ ಮೋಕ್ಷವನ್ನು ಹೊಂದುವ ಬಗೆ ಹೇಗೆ ಎಂದು ಶೋಕಿಸಬಹುದು. (೨) ಇನ್ನು ಕೆಲವರಾದ ಸ್ತ್ರೀ ಶೂದ್ರಾದಿಗಳಿಗೆ ಉಪಾಸನದಲ್ಲಿ ಅಧಿಕಾರವಿಲ್ಲದೆ ಮೋಕ್ಷವನ್ನು ಹೇಗೆ ಹೊಂದಲಾಗುವದು ಎಂದು ಶೋಕವು. (೩) ಜಗತ್ಸೃಷ್ಟಿ ಮೊದಲುಗೊಂಡು ಇದುವರೆವಿಗೂ ಬಂಧಕಗಳಾದ ಅಪರಾಧಗಳನ್ನೂ ಸುಕೃತಗಳನ್ನೂ ಮಾಡಿರುವದೆಲ್ಲಾ ಕಳೆದು ಬಂಧವಿಮೋಚನೆ ಎಂದಿಗಾದರೂ ಉಂಟೋ ಎಂದೂ ಶೋಕಿಸಬಹುದು. (೪) ಒಂದುವೇಳೆ ಬ್ರಾಹ್ಮಣಾದಿ ತ್ರಿವರ್ಗಕ್ಕೆ ಸೇರಿದ

ಪರಾಗಿದ್ದರೂ, ಈ ಉಪಾಸನವನ್ನು ಕೈಕೊಳ್ಳೋಣವೆಂದರೆ ಬಹುಕಾಲ ವಿಳಂಬ ದಿಂದ ಸಿದ್ಧಿಸುತ್ತದೆಯಲ್ಲಾ, ಅಷ್ಟುಕಾಲ ಕಾಯುವುದು ಸಾಧ್ಯವಿಲ್ಲವೇ ಎಂದು ಶೋಕಿಸಬಹುದು. ಇಂತಹ ಸಂದರ್ಭದಲ್ಲೇ ಆ ಕರ್ಮಯೋಗವನ್ನು ಹಿಡಿದು ಭಕ್ತಿಯೋಗದವರೆಗೂ ಇರುವ ಸರ್ವಧರ್ಮಗಳನ್ನು ಬಿಟ್ಟುಬಿಟ್ಟು ನನಗೆ ಶರಣಾಗತ ನಾಗು ಎಂದು ಶ್ರೀಕೃಷ್ಣಭಗವಾನ್‌ರವರ ಉಪದೇಶವು.

ಈ ಶರಣಾಗತಿಗೆ ಇವು ಯಾವುವೂ ಅಂಗವಲ್ಲವು. ಅದಕ್ಕೆ ಇವು ಯಾವುದರ ಅಪೇಕ್ಷೆಯೂ ಸ್ವಲ್ಪಮಟ್ಟಿಗೂ ಇಲ್ಲವು, ಎಂಬ ಭಾವವು. ಆಗಲಿ ಕರ್ಮಯೋಗವಲ್ಲಿ ಸೇರಿದ ನಿತ್ಯನೈಮಿತ್ತಿಕಗಳು ಬೇಡವೇ ಎಂದರೆ? ನಮ್ಮಲ್ಲಿ ಕೆಲವರು ಅವುಗಳನ್ನೂ ತ್ಯಾಗಮಾಡಬಹುದೆಂದು ಅಭಿಪ್ರಾಯಪಟ್ಟರು. ನಿತ್ಯನೈಮಿತ್ತಿಕಗಳು ಆಜ್ಞಾ ಕೈಂಕರ್ಯಗಳನ್ನು ಅನುಷ್ಠಿಸಲೇ ಬೇಕು. ಬಿಟ್ಟರೆ "ಆಜ್ಞಾ ಛೇದೀ ಮಮ ದ್ರೋಹೀ" ಎಂದು ಹೇಳಿರುವಂತೆ ಭಗವನ್ನಿಗ್ರಹಕ್ಕೆ ಗುರಿಯಾಗುವನು. (೫) ಮಾಡಿದ ಪಾಪಗಳಿಗೆ ವಿಧಿಸಲ್ಪಟ್ಟ ಪ್ರಾಯಶ್ಚಿತ್ತಗಳನ್ನು ನಡೆಸಲು ಸಾಧ್ಯವಿಲ್ಲವೇ ಎಂದು ಶೋಕಿಸುವನಿಗೂ ಆ ಪ್ರಾಯಶ್ಚಿತ್ತಗಳನ್ನು ಬಿಟ್ಟುಬಿಡು, ಅವುಗಳಿಗೆ ಬದಲಾಗಿ ಸರ್ವಪ್ರಾಯಶ್ಚಿತ್ತರೂಪ ಶರಣಾಗತಿಯನ್ನು ಅನುಷ್ಠಿಸು ಎಂಬ ಭಾವವು. (೬) ಈ ಶರಣಾಗತಿಗೆ ಸಹಾಯವಾಗಿ ಏನಾದರೂ ಮಾಡಬೇಕೆಂದು ಹೊರಟರೆ ಅಧಿಕಾರಿಗೆ ಮಹಾವಿಶ್ವಾಸವೇ ಇಲ್ಲವಾಗಿ ಬ್ರಹ್ಮಾಸ್ತ್ರವು ಆಂಜನೇಯನ ವಿಷಯ ದಲ್ಲಿ ಪಲ್ಕಲಬಂಧನದಿಂದ ವಿಮುಖವಾಗಿ ಹೊರಟುಹೋದ ಹಾಗೆ ಶರಣಾಗತಿಯೂ ಈತನ ವಿಷಯದಲ್ಲಿ ವಿಮುಖವಾದೀತಾಗಿ ಅಂತಹ ಪ್ರವೃತ್ತಿಯನ್ನೂ ಬಿಟ್ಟುಬಿಡು ಎಂಬರ್ಥವು. **ಪರಿ** ಎಂಬ ಉಪಸರ್ಗವು ಆ ಪ್ರವೃತ್ತಿಗಳನ್ನು ಸಮಗ್ರವಾಗಿ ಸವಾಸನವಾಗಿ ಬಿಡತಕದ್ದೆಂಬುದನ್ನು ತಿಳಿಸುತ್ತದೆ. ಹೀಗೆ ಆರು ವಿಧಗಳಾಗಿ ಅರ್ಥಮಾಡಬಹುದು.

ಮಾಮೇಕಂ ಇದಕ್ಕೂ ಆರು ವಿಧವಾಗಿ ಅರ್ಥಮಾಡಬಹುದು. ಹೇಗೆಂದರೆ (೧) ನಾನು ಯಾವಾಗಲೂ ನನ್ನ ಪತ್ನಿಯಾದ ಲಕ್ಷ್ಮಿಯೊಂದಿಗೆ ಸೇರಿದ್ದರೂ ಸರ್ವರಿಗೂ ಶೇಷಿಗಳಾಗಿ, ರಕ್ಷಕರಾಗಿ ಪ್ರಾಪ್ಯರಾಗಿದ್ದರೂ ಪರತತ್ವಕ್ಕೆ ಇಬ್ಬರೂ ಸೇರಿ ದವರಾಗಿ, ಆಕೆಯು ನನಗೆ ವಿಶೇಷಣವು, ನಾನು ವಿಶೇಷ್ಯವು, ಹೀಗೆ ನಾವಿಬ್ಬರೂ ಸೇರಿ ಒಂದೇ ಪರತತ್ವವು. (೨) ಮುಮುಕ್ಷುವಿಗೆ ನಾವಿಬ್ಬರೂ ಸೇರಿ ಸಿದ್ಧೋಪಾಯ ರೂಪದಲ್ಲಿ ಸಾಧ್ಯೋಪಾಯವನ್ನು ಅನುಷ್ಠಿಸುವ ಹಾಗೆ ಮಾಡಿ ಪ್ರಾಪ್ಯನೂ ತಾನೇ ಪೂರ್ಣಾನುಭವ ನಿತ್ಯಕೈಂಕರ್ಯಗಳು ಲಭಿಸುವ ಹಾಗೆ ಮಾಡುವೆನು. ಪ್ರಾಪಕನೂ ಪ್ರಾಪ್ಯನೂ ಲಕ್ಷ್ಮಿಯೊಂದಿಗೆ ನಾನೊಬ್ಬನೇ ಎಂಬರ್ಥವು. (೩) ಏಕಶಬ್ದಕ್ಕೆ ಮುಖ್ಯ ವೆಂದು ಅರ್ಥವಾದರೆ, ಪರಮಾತ್ಮನಿಂದಲೇ ತನಗೆ ಎಲ್ಲಾ ವಿಧವಾದ ಶ್ರೇಯಸ್ಸೇ ವಿನಾ ಸ್ವಪ್ರಯತ್ನವು ಅಪ್ರಾಧ್ಯಾನವಾದುದೆಂದಾಯಿತು. ಸ್ವಾಮಿಯೇ ಸರ್ವಶಕ್ತನು,

ಅಘಟಿತ ಘಟನಾಪ್ರಭುವು ಆತನು, ಈ ಜೀವಾತ್ಮನು ಸರ್ವ ವಿಧದಲ್ಲೂ ಅಶಕ್ತನೆಂದು ಏರ್ಪಟ್ಟಿತು. (೪) ತಾನೇ ಮುಖ್ಯವೆಂದಾದರೆ, ಶರಣಾಗತಿಯ ವಿಷಯವೆಂತಾದ್ದೆಂದರೆ ಅದು ವ್ಯಾಜಮಾತ್ರವಾದುದರಿಂದ ನಾನೇ ಮುಖ್ಯವಾಗಿ **ವಿದಧಾಮಿ ಕಾಮಾನ್** ಎಂದು ಹೇಳಿರುವ ಹಾಗೆ ಸರ್ವ ಶ್ರೇಯಸ್ಸನ್ನೂ ಉಂಟುಮಾಡುವೆನು ಎಂಬರ್ಥವು. (೫) **ಮಾಮೇಕಂ** ನನ್ನೊಬ್ಬನನ್ನೇ ಶರಣು ಹೊಂದು ಎಂದರೆ ಭಕ್ತಿಯೋಗದ ಪ್ರಕ್ರಿಯೆಗಳ ಸಂಬಂಧವು ಬೇಕಿಲ್ಲವೆಂದೂ ಹೇಳಿದಂತಾಯಿತು. ಆದುದರಿಂದ ಭಕ್ತಿಯೋಗಕ್ಕೆ ಅಂಗಗಳಲ್ಲೇ ಸೇರಿದ ನಿತ್ಯನೈಮಿತ್ತಿಕಗಳೂ ಅಂಗವಲ್ಲವೆಂದು ಹೇಳಿದಂತಾಯಿತು. ಬೇರೆ ಸ್ವತಂತ್ರ ವಿಧಿಗಳಿಂದ ಆ ನಿತ್ಯನೈಮಿತ್ತಿಕಗಳು ಆಜ್ಞಾ ಕೈಂಕರ್ಯಗಳಾದುದರಿಂದ ಬಿಡಲು ಸಾಧ್ಯವಲ್ಲವು. ಅನುಷ್ಠಿಸಲೇಬೇಕೆಂಬುದು ಏರ್ಪಟ್ಟಿತು. (೬) ಹೀಗೆ ನನ್ನೊಬ್ಬನನ್ನೇ ಆಶ್ರಯಿಸುವದರಿಂದ ನನ್ನೊಬ್ಬನ ಮೂಲಕವೇ ಸರ್ವಭೋಗಾದಿ ಫಲಗಳೂ ಮತ್ತು ಮೋಕ್ಷಫಲವೂ ಸಿದ್ಧಿಸುತ್ತದೆ. ಆದುದರಿಂದ ಅನ್ಯಾಪೇಕ್ಷೆಯು ಬೇಕಾಗಿಲ್ಲದಿರುವದರಿಂದ ಸರ್ವ ಶಕ್ತನಾದ ತಾನೊಬ್ಬನ ಸಾಪೇಕ್ಷ್ಯವು ಅವಶ್ಯಕವೆಂಬುದು ಉಪದಿಷ್ಟವು. (೭) ಏಕ ಶಬ್ದಕ್ಕೆ ಸಾಧಾರಣವೆಂಬರ್ಥವಾದರೆ, ಸಾಧಾರಣವಾಗಿ ನಾನೊಬ್ಬನೇ ಮೋಕ್ಷಪ್ರದನಾದುದರಿಂದಲೂ ಇನ್ನು ಯಾರಿಗೂ ಮೋಕ್ಷಪ್ರದತ್ವ ಶಕ್ತಿ ಇಲ್ಲದುದರಿಂದಲೂ ನನ್ನೊಬ್ಬನನ್ನೇ ಉಪಾಯವಾಗಿ ಆಶ್ರಯಿಸು ಎಂಬರ್ಥವು. (೮) ಏಕಶಬ್ದಕ್ಕೆ ಅನ್ಯಶಬ್ದವೆಂದು "**ಮುಖ್ಯಾನ್ಯ ಕೇವಲೇ ಷ್ವೇಕಃ**" ಎಂಬುದಕ್ಕೆ ಅನುಗುಣವಾಗಿ ಅರ್ಥಮಾಡಿದರೆ, ತಾನೊಬ್ಬನೇ ವಿಲಕ್ಷಣನಾಗಿ ಅನ್ಯನು ಏಕೆಂದರೆ ಅನುಗ್ರಹಮಯಳಾಗಿ, ಅಜ್ಞಾತನಿಗ್ರಹಳಾಗಿಯೂ ಕರುಣಾಮೂರ್ತಿಯಾಗಿ ಇರುವ ಪತ್ನಿಯಾದ ಲಕ್ಷ್ಮಿಯ ಸಾನ್ನಿಧ್ಯವಿರುವದರಿಂದ ನನ್ನೊಬ್ಬನಿಂದಲೇ ನಿನಗೆ ಮೋಕ್ಷಸಾಮ್ರಾಜ್ಯವಾದುದರಿಂದ ನನ್ನೊಬ್ಬನನ್ನೇ ಆಶ್ರಯಿಸು ಎಂಬರ್ಥವು.

ಶರಣಂವ್ರಜ ಶರಣ ಶಬ್ದವು ಇಲ್ಲಿ ಶ್ರಿಯಃಪತಿಯಾದ ತಾನೇ ಸಿದ್ಧೋಪಾಯನನ್ನಾಗಿ ವರಿಸು ಎಂಬರ್ಥವು; ವ್ರಜ, ಹೊಂದು ಎಂದು ಗತ್ಯರ್ಥವಾಗಿ ಬುದ್ಧ್ಯರ್ಥವಲ್ಲೇ ಅನ್ವಯಿಸುವದರಿಂದ ಆತ್ಮಸಮರ್ಪಣಾರೂಪ ಭರನ್ಯಾಸವನ್ನು ಸಾಧ್ಯೋಪಾಯವಾಗಿ ಅನುಷ್ಠಿಸು ಎಂಬ ಭಾವವು. **ಮಾಮೇಕಂ ಶರಣಂ ವ್ರಜ** ವೆಂಬುದರಿಂದ ನೀನು ಪ್ರತಿಕೂಲಗಳನ್ನೆಲ್ಲಾ ತೊರೆದು ಅನುಕೂಲನಾಗಿ, ಭಕ್ತಿಯೋಗಕ್ಕೆ ತನಗೆ ಅರ್ಹತೆ ಅಧಿಕಾರ ಶೂನ್ಯತೆಯಿಂದ ಆಕಿಂಚನನಾಗಿರುವ ದೆಶೆಯಲ್ಲಿ ಕರುಣಾಮೂರ್ತಿಯಾಗಿರುವ ಲಕ್ಷ್ಮಿಯಿಂದೊಡಗೂಡಿರುವ ನನ್ನೊಬ್ಬನನ್ನೇ ಪರಮ ವಿಶ್ವಾಸವನ್ನಿಟ್ಟು ಆಶ್ರಯಿಸಿ ಆತ್ಮಸಮರ್ಪಣೆಯನ್ನು ಮಾಡು ಎಂಬ ಹಿತೋಕ್ತಿಯು ಇದೀಗ ಪೂರ್ವಾರ್ಧಾಭಿಪ್ರಾಯವು.

ಉತ್ತರಾರ್ಧದ ಸಾರಭೂತಾರ್ಥವೇನೆಂದರೆ ಹೇಳುತ್ತಾರೆ. **ಪೂರ್ವಾರ್ಧ**ದಿಂದ ಅಧಿಕಾರಿಕೃತ್ಯವು ಹೇಳಲ್ಪಟ್ಟಿತು. **ಶರಣಂವ್ರಜ** ಎಂಬದಾಗಿ; ಉತ್ತರಾರ್ಧದಿಂದ ತಮ್ಮ ಅಮೋಘ ಕೃತ್ಯವನ್ನು ಹೇಳುತ್ತಾರೆ. ತಾವು ಹೇಳಿಕೊಟ್ಟ ಬುದ್ಧಿವಾದವನ್ನನುಸರಿಸಿ ನಡೆಸಿದನೇ ಎಂಬ ವಿಶೇಷ ಪ್ರೀತಿಯಿಂದ ನೋಡಿ, ತಾವು ಕೃಪೌದಾರ್ಯ ಸೌಲಭ್ಯ ಸೌಶೀಲ್ಯ ವಾತ್ಸಲ್ಯಾದಿ ಕಲ್ಯಾಣಗುಣ ಮಹೋದಧಿಯಾದುದರಿಂದಲೂ ಅಘಟಿತ ಘಟನಾಶಕ್ತಿಯಿರುವದರಿಂದಲೂ, ಇತರರು ಯಾರಿಗೂ ಅಂತಹ ಶಕ್ತಿ ಇಲ್ಲದೇ ಇರುವದರಿಂದಲೂ, **ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ** ಎಂದು ಅಭಯಪ್ರದಾನ ಮಾಡುತ್ತಾರೆ.

ಅಹಂತ್ವಾ ಎಂಬ ಎರಡು ಪದಗಳನ್ನು ಒಟ್ಟಿಗೆ ಸೇರಿರುವದರಿಂದ ಇಬ್ಬರಿಗೂ ಇರುವ ಸಂಬಂಧವನ್ನು ವ್ಯಕ್ತಪಡಿಸುತ್ತಾರೆ.—

ಅಹಂ ಎಂಬುದರಿಂದ ತಾವು ಸರ್ವಶಕ್ತನೆಂದೂ **ತ್ವಾ** ಎಂಬದಲ್ಲಿ ತೋರುವ ಜೀವನು ಅಶಕ್ತನು ಎಂದು ಹೇಳಿದಂತಾಯಿತು; ತಾನು ಸ್ವಾಮಿಯು ನೀನು ದಾಸನು; ತಾನು ಪರಮ ಶೇಷಿಯು, ನೀನು ಶೇಷನು; ನಾನಾದರೋ ಸರ್ವ ರಕ್ಷಕನು, ನೀನು ರಕ್ಷವಸ್ತುವು, ನಾನು ಅನಿಷ್ಟ ನಿವೃತ್ತಿ ಮಾಡಲು ಶಕ್ತನು; ನೀನು ಅನಿಷ್ಟ ಪರಿಪೂರ್ಣನು ಇತ್ಯಾದಿ ಸ್ವಾರಸ್ಯಾರ್ಥಗಳು ತೋರಿಬರುತ್ತವೆ.

ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ – ಬ್ರಹ್ಮ ರುದ್ರೇಂದ್ರಾದಿಗಳಿಗೂ ಅಂತಹ ಶಕ್ತಿಯಿಲ್ಲವು, ನಾನೊಬ್ಬನೇ ಅಂತಹ ಶಕ್ತಿಯುಳ್ಳವನು. ಒಂದೊಂದು ಅಪರಾಧಕ್ಕೆ ಒಂದೊಂದು ಪ್ರಾಯಶ್ಚಿತ್ತ ಉಂಟು. ನನ್ನ ಶರಣಾಗತಿಯಿಂದಲಾದರೋ ಸರ್ವವಿಧ ಪಾಪಗಳು ತೊಲಗುವುವು ಎಂದು ತಮ್ಮ ಪರಮಾನುಗ್ರಹವನ್ನು ತಿಳಿಸುತ್ತಾರೆ. ಸರ್ವಶಬ್ದದಿಂದ ಸಂಚಿತ ಪಾಪಗಳೆಲ್ಲಾ ತೊಲಗುವುವು. ಮುಂದೆ ಮಾಡುವ ಪಾಪಗಳು ಲೇಪಿಸುವದಿಲ್ಲವು. ಹಾಗಾದರೆ ಬುದ್ಧಿಪೂರ್ವಕ ಪಾಪಗಳೂ ಲೇಪಿಸುವದಿಲ್ಲವೋ? ಎಂದರೆ ಅಬುದ್ಧಿಪೂರ್ವಕಗಳು ಲೇಪಿಸುವದಿಲ್ಲವು. ಬುದ್ಧಿಪೂರ್ವಾಘಕ್ಕೆ ಶಿಕ್ಷೆಯುಂಟು. ಅಲ್ಪ ಶಿಕ್ಷೆಯನ್ನು ಕೊಟ್ಟು ಕಾಪಾಡುವನು. ತನ್ನಿವಾರಣಕ್ಕಾಗಿ ಪುನಶ್ಶರಣಾಗತಿಯನ್ನು ಅನುಷ್ಠಿಸಿ, ಇನ್ನು ಎಂದಿಗೂ ಅಂತಹ ಅಪರಾಧಗಳನ್ನು ಮಾಡುವದಿಲ್ಲವೆಂದು ಸಂಕಲ್ಪಿಸಿದರೆ ಕಾಪಾಡುವೆನು. **ತ್ವಾಂ** ಎಂಬ ಶಬ್ದದಿಂದ ಕ್ಷತ್ರಿಯನಾದ ಅರ್ಜುನನಿಗೆ ಮಾತ್ರವೇ ಉಪದೇಶವಲ್ಲವು. ಬ್ರಾಹ್ಮಣ ಕ್ಷತ್ರಿಯ ವೈಶ್ಯರೂ ಉಪಾಸನಾನುಷ್ಠಾನಕ್ಕೆ ಅಶಕ್ತರಾದರೆ ಅವರಿಗೂ ಮತ್ತು ಉಪಾಸನೆಯಲ್ಲಿ ಅಧಿಕಾರವಿಲ್ಲದ ಸ್ತ್ರೀ ಶೂದ್ರ ಪಂಚಮರಿಗೂ ಹೀಗೆ ಸರ್ವರಿಗೂ ಅಧಿಕಾರವೆಂಬುದನ್ನು ಸೂಚಿಸುತ್ತದೆ. ಇದಲ್ಲದೆ ಪಾಪಕರ್ಮಗಳೂ ಪುಣ್ಯಕರ್ಮಗಳ ಹಾಗೆ ಬಂಧಕವು. ಅವು ಪಾಪ ಶಬ್ದದಲ್ಲೇ ಸೇರಿದವು. ಅವುಗಳೂ ನಿನಗೆ ಬಂಧಕಗಳಾಗದ ಹಾಗೆ ಮಾಡುವೆನು ಎಂಬರ್ಥವು.

ಮಾಶುಚಃ ಕರ್ಮಯೋಗಸಹಕೃತಭಕ್ತಿಯೋಗವಾದ ಉಪಾಸನೆಗೆ ಅನರ್ಹನೇ, ಪಾಪಗಳು ಕಳೆಯುವ ಬಗೆ ಹೇಗೆ? ಎಂದು ಅರ್ಜುನನು ಅಳುತ್ತಿದ್ದನು. ಅದು ಗುರೂಪಾಯವಾಗಿ ಕಷ್ಟವಾದರೆ ಈ ಲಘೂಪಾಯವನ್ನು ಅನುಷ್ಠಿಸು ಎಂಬ ಭಾವವು. ಶರಣಾಗತಿಯು ಅನಿಷ್ಟ ನಿವೃತ್ತಿಯನ್ನು ಮಾಡುವದರಿಂದ ಇಷ್ಟಪ್ರಾಪ್ತಿಯನ್ನು ಒದಗಿಸಿ ಕೊಡುತ್ತದೆಂಬ ಭಾವವು. **ಮಾಶುಚಃ** ಎಂಬುದರಿಂದ ಶೋಕವನ್ನು ತ್ಯಜಿಸು ಎಂದು ಇಷ್ಟುಮಾತ್ರವೇ ಉಪದೇಶವಲ್ಲವು. ನೀನು ಇದರಿಂದ ಕೃತಕೃತ್ಯನಾಗುವದರಿಂದ ನೀನು ನಿರ್ಭರನಾಗಿ, ನಿರ್ಭಯನಾಗಿ ಹೃಷ್ಟಮನಸ್ಕನಾಗಿರು ಎಂದು ಹೇಳಿದಂತಾಯಿತು.

ಚರಮಶ್ಲೋಕ ಸಾರಭೂತಾರ್ಥವು ಇಷ್ಟೇ :—

"ಮೋಕ್ಷೋಪಾಯಗಳಾದ ಉಪಾಸನಾ ಮತ್ತು ಅದರ ಅಂಗಗಳಾದ ಕರ್ಮಯೋಗ ಜ್ಞಾನಯೋಗಾದಿಗಳಿಗೆ ಅಶಕ್ತನಾಗಿಯಾಗಲಿ ಅಧಿಕಾರವಿಲ್ಲದುದರಿಂದಾಗಲಿ ಪುಣ್ಯ ಪಾಪಗಳ ಬಂಧನೆಯು ತಪ್ಪುವ ಬಗೆ ಹೇಗೆ ಎಂದು ಶೋಕಿಸುವ ಕೆಲಸವಿಲ್ಲವು. ಶರಣಾಗತವತ್ಸಲನಾಗಿ, ಆಶ್ರಿತರಕ್ಷಕನಾಗಿರುವ ನನ್ನ ಪಾದಾರವಿಂದದಲ್ಲಿ ಶರಣಾಗತಿಯನ್ನನುಷ್ಠಿಸು. ನಿನ್ನನ್ನು ಬಂಧಕಗಳಾದ ಪುಣ್ಯ ಪಾಪಗಳಿಂದ ಬಿಡಿಸಿ, ನೀನು ನನ್ನಲ್ಲಿ ಬಂದು ಸೇರಿ, ಶಾಶ್ವತವಾದ ಪರಿಪೂರ್ಣಾನಂದವನ್ನು ಹೊಂದುವ ಹಾಗೆ ಮಾಡುವೆನು" ಎಂಬುದು.

ಶ್ರೀ ಪರಾಶರ ಭಟ್ಟಾರ್ಯ ವಿರಚಿತ ಅಷ್ಟಶ್ಲೋಕಿಯು ಸಂಪೂರ್ಣವು.

ಶ್ರೀಮತೇ ನಿಗಮಾನ್ತ ಮಹಾದೇಶಿಕಾಯ ನಮಃ

ಶ್ರೀಮತೇ ಶ್ರೀನಿವಾಸ ಮಹಾದೇಶಿಕಾಯ ನಮಃ

ಚಂಪಾ ಅಂಡ್ ಕೋ., ಮುದ್ರಣಾಲಯ, ಅರಳೇಪೇಟೆ, ಬೆಂಗಳೂರು ಸಿಟಿ.